ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಅಧ್ಯಕ್ಷರೆ. ನನಗೆ ತಿಳಿದಿರುವ ಮಟ್ಟಿಗೂ ಡೆಪ್ಯುಟಿ ಸ್ಪೀಕರುಗಳು ಇತರ ಕಡೆಗಳಲ್ಲಿ ಸಭೆಯ ಚರ್ಚೆಯಲ್ಲಿ ಭಾಗವಹಿಸುತ್ತಿಲ್ಲವೆಂದು ತಿಳಿದುಕೊಂಡಿದ್ದೇನೆ. ಡೆಪ್ಯುಟಿ ಸ್ಪೀಕರ್ ಚುನಾವಣೆಗೂ ಮೊದಲೇ ಒಂದನೇ ಸ್ಥಾನವನ್ನು ವಿರೋಧಪಕ್ಷದ ನಾಯಕರಿಗೆ ಕೊಡಲಾಗಿತ್ತು. ಈ ಪದ್ಧತಿ ಕಳೆದ ಐದು ವರ್ಷಗಳಿಂದಲೂ ಇದ್ದಿತು, ಕಾರಣ ವಿರೋಧಪಕ್ಷದ ನಾಯಕರು ಸಭೆಯ ಚರ್ಚೆಯಲ್ಲಿ ಹೆಚ್ಚು ಭಾಗವಹಿಸಬೇಕಾಗುತ್ತದೆ. ಆದ್ದರಿಂದ ಡೆಪ್ಯುಟಿ ಸ್ಪೀಕರ್ ಅವರಿಗೆ ತಮ್ಮ ಹತ್ತಿರ ಸ್ಥಾನವನ್ನು ಕಲ್ಪಿಸಿದ್ದರೆ ಚೆನ್ನಾಗಿತ್ತು. ಆದರೆ ಡೆಪ್ಯುಟಿ ಸ್ಪೀಕರ್ ಅವರು ನಮ್ಮ ನಾಯಕರಿಗಿತ್ತಿದ್ದ ಜಾಗವನ್ನು ಆಕ್ರಮಿಸಿಕೊಂಡಿರುವುದು ಆಡಳಿತ ಪಕ್ಷದ (Party in power) ಘನತೆಗೆ ಸರಿಯಾದದ್ದಲ್ಲ; ತಾವು ಹಾಗೆ ಮಾಡಿದ್ದರಿಂದ ನಮ್ಮ ಪಾರ್ಟಿಯ ಘನತೆಯೇನೂ ಹೋಗಿಲ್ಲ. ಈಗಲಾದರೂ ತಾವು ಆಗಲೇ ತಿಳಿಸಿದಂತೆ ಸೆಕ್ರೆಟರಿಗಳ ಹತ್ತಿರ ಇಲ್ಲವೇ ತಮ್ಮ ಹತ್ತಿರ ಡೆಪ್ಯುಟಿ ಸ್ಪೀಕರಿಗೆ ಸ್ಥಾನ ಕಲ್ಪಿಸಿಕೊಡಿ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಈ ವಿಚಾರದಲ್ಲಿ ನಾವು ಯಾವುದಾದರೊಂದನ್ನು ಅನುಕರಣೆ ಮಾಡಲೇಬೇಕು. ನಾವೀಗ ಮಾಡಿತತಕ್ಕ ವ್ಯವಸ್ಥೆ ಲೋಕ ಸಭಾ ಅನುಕರಣೆಗೆ ಸರಿಯಾಗಿದೆ. ನಾನಾಗಲೇ ಹೇಳಿದಂತೆ ಡೆಪ್ಯುಟಿ ಸ್ಪೀಕರಿಗೆ ಆ ಎರಡು ಏರ್ಪಾಡುಗಳಲ್ಲಿ ಒಂದನ್ನು ಮಾಡಲೇಬೇಕು. ಬೊಂಬಾಯಿ ಅಸೆಂಬ್ಲಿಯಲ್ಲೇನೋ ಒಂದು ರೀತಿಯಿದೆ. ಅದನ್ನು ಬಿಟ್ಟರೆ ಬೇರೆಇನ್ನೆಲ್ಲೂ ಆ ರೀತಿವ್ಯವಸ್ಥೆ ಇರುವುದಿಲ್ಲ. ಈಗ ಅವರನ್ನು ಎಲ್ಲಿ ಕೂಡಿಸಲಾಗಿದೆಯೋ ಅದೇ ಸರಿಯಾದಂಥ ಪದ್ಧತಿ. ಅವರನ್ನು ವಿರೋಧ ಪಕ್ಷದ ನಾಯಕರ ಪಕ್ಕಕ್ಕೆ ಕೂಡಿಸಿದ್ದರಿಂದ ವಿರೋಧ ಪಕ್ಷದ ಗೌರವವಿನ್ನೂ ಅಧಿಕವಾದಂತಾಯಿತು ಇನ್ನು ಡೆಪ್ಯುಟಿ ಸ್ಪೀಕರ್ ಅವರು ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೋ ಬೇಡವೋ ಎನ್ನುವ ವಿಚಾರದಲ್ಲಿ ಅವರು ಹೀಗೆಯೇ ಮಾಡಬೇಕೆಂಬ ಬಗ್ಗೆ ಯಾವ ಒಂದು ಖಚಿತವಾದ ರೂಲ್ಸು ಇಲ್ಲ. ಆದರೆ ಶ್ರೀಮಾನ್ ಮಾವಲಂಕರ್ ಅವರು (ಲೋಕ ಸಭಾ ಅಧ್ಯಕ್ಷರು) ಜೀವಂತರಾಗಿದ್ದಾಗ ಈ ವಿಧವಾದ ಅನೇಕ ಪ್ರಶ್ನೆಗಳನ್ನು ನಾವು ಅವರಿಗೆ ಕೇಳಿದ್ದೆವು. ಆಗ ಅವರು ಸಾಮಾನವಾಗಿ "ನೀವುಗಳ್ಯಾರೂ ಅಂಥ ಚರ್ಚೆಗಳಲ್ಲಿ ಭಾಗವಹಿಸಲೇ ಬಾರದು-ನೀವು ಯಾವ ಪ್ರಶ್ನೆಗಳನ್ನು ಕಳುಹಿಸಬಾರದು" ಎಂಬುದಾಗಿ ಅವರು ನಮಗೆಲ್ಲ ಒಂದು ಆಜ್ಞೆ ಕೊಟ್ಟಿದ್ದರು.

Sri B. R. SUNTHANKAR (Belgaum I).—It has become very inconvenient and un-comfortable for us to move from behind and there is no sufficient place for us to come and go because you have put up another bench in the backside. This should be removed. That is all my requset.

Mr. SPEAKER.—I had given out my ideas in Kannada. That is why the Hon'ble Member has not understood. I agree, there is some difficulty. But that difficulty can be solved if the Hon'ble Member takes his seat on this side. I had to make this arrangement because Members who were sitting on back benches were not in a position to hear me. When we get the new microphone arrangement we can reveit to the old arrangement

2-30 P.M.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಎಲೆಕ್ಟ್ರಿಕಲ್ ಎಕ್ವಿಪ್‌ಮೆಂಟ್ ಬರುತ್ತದೆ ಎಂದು ಹೇಳಿದಿರಿ. ಅದು ಏನಾಯಿತು ಸ್ವಾಮಿ ?

ಅಧ್ಯಕ್ಷರು.—ಇನ್ನೂ, ಬಂದಿಲ್ಲ, ಬರುತ್ತದೆ.

ಶ್ರೀ ಜಿ. ದುಗ್ಗಪ್ಪ (ಚಿತ್ರದುರ್ಗ-).—ಅನಿವಾರ್ಯವಾಗಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಅದೇನೆಂದರೆ ನನ್ನ ಸಿಟಿನ ಮುಂದೆ ಅಪೋಸಿಷನ್ ಮೆಂಬರುಗಳು ಇದ್ದಾರೆ, ಪಕ್ಕದಲ್ಲಿ ಇದ್ದಾರೆ, ಹಿಂದೆಯೂ ಇದ್ದಾರೆ. ಹೀಗೆ ಎಲ್ಲಾ ಕಡೆಯೂ ಅಪೋಸಿಷನ್ ಮೆಂಬರುಗಳಿದ್ದು ಮಧ್ಯೆ ನಾನು ಕುಳಿತುಕೊಳ್ಳಬೇಕಾಗಿದೆ.

ಅಧ್ಯಕ್ಷರು.—ಆ ಪ್ರಕಾರ ಇದ್ದರೆ ಪರವಾಗಿಲ್ಲ. ಮಿಶ್ರವಾದರೂ ಚಿಂತೆಯಿಲ್ಲ, ಅದರಿಂದೇನೂ ದೊಡ್ಡ ಘಾತವಾಗುವುದಿಲ್ಲ.

ಡಾ. ಸರ್ದಾರ್ ಬಿ. ಕೆ. ನಾಗೂರ್ (ಬಿಜಾಪುರ).—ಹೆಸರು ಹಾಕಿದ ನಂತರ ನಮ್ಮ ನಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಬೇಕೆಂದು ಹೇಳಿದಿರಿ ಈಗ ಮೂರು ದಿವಸಗಳಿಂದ ನನ್ನ ಹೆಸರು ಸಿಕ್ಕಿಲ್ಲ. ಎರಡನೆಯವರ ಜಾಗದಲ್ಲಿ ಕುಳಿತಿದ್ದೇನೆ. ಅವರು ಬಂದು ನನ್ನ ಜಾಗದಲ್ಲಿ ಏಕೆ ಕುಳಿತಿದ್ದೀರಿ ಎಂದು ಕೇಳುತ್ತಾ ಇದ್ದಾರೆ.

ಅಧ್ಯಕ್ಷರು.—ಬೇಕಾದರೆ ಪ್ರತಿಯೊಬ್ಬರಿಗೂ ಜಾಗ ತೋರಿಸಲಿಕ್ಕೆ ಒಬ್ಬರನ್ನು ಕಳಿಸುತ್ತೇನೆ.

I am now proposing that I should not hear any more representations on this. We have lost precious time. Representations will hereafter be heard on certain days only. That I will discuss with the Leader of the House and the Leader of the Opposition and come to an understanding, because I find all these matters take a lot of time. Now it is 2-30. It has taken more than half an hour. It is not right that the precious time of the House should be taken away like this. Any representation might be made to me in my Chamber. If Hon'ble Members want to raise it in the House, that can be done only on certain days and not on all the days.

BUDGET FOR 1957-58—DEMANDS FOR GRANTS.

Demand No. 20—Education.

37—Education.

Mr. SPEAKER.—Motion mved :

"That a sum not exceeding Rs. 10,55,11,900 be granted to the Government to defray the charges

(MR. SPEAKER.)

which will come in course of payment during the year ending 31st day of March 1958, in respect of 'Education' "

What about time limit ?

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ತಾವು ಎಷ್ಟಾದರೂ ಕಾಲಾವಕಾಶ ಕೊಡಿ, ಸ್ವಾಮಿ.

Mr. SPEAKER.—I do not want to restrict the time in the case of the Leader of the Opposition. In other cases I would like to fix time. It will be ten minutes each.

ಶ್ರೀ ಕೆ. ಕೆಂಚಪ್ಪ.—ಮಾನ್ಯ ಅಧ್ಯಕ್ಷರೇ, ಈ ವಿದ್ಯಾಭ್ಯಾಸದ ವಿಚಾರವಾಗಿ ಕೇಳಿರತಕ್ಕ ಮೊಬಲಗನ್ನು ಮಂಜೂರು ಮಾಡುವುದಕ್ಕೆ ಈ ಅಸೆಂಬ್ಲಿಯಲ್ಲಿ ಈಗ ಚರ್ಚೆ ಉದ್ಭವಿಸಿದೆ. ಈ ಡಿಮ್ಯಾಂಡ್ ಪ್ರಕಾರ 10 ಕೋಟಿ 55 ಲಕ್ಷ ಚಿಲ್ಲರೆ ರೂಪಾಯಿಗಳನ್ನು ವಿದ್ಯಾಭ್ಯಾಸಕ್ಕೆ ಕೊಡಬೇಕೆಂದು ಕೇಳಲಾಗಿದೆ. ನಾವು ಮೈಸೂರು ಸಂಸ್ಥಾನದ ಒಟ್ಟು ಉತ್ಪನ್ನವನ್ನು ನೋಡಿದರೆ 50 ಕೋಟಿ 92 ಲಕ್ಷ 52 ಸಾವಿರ ಚಿಲ್ಲರೆ ರೂಪಾಯಿಗಳ ಉತ್ಪನ್ನ ಇದೆ. ವಿದ್ಯಾಭ್ಯಾಸಕ್ಕೆ ಮೀಸಲಾಗಿಡತಕ್ಕ ದುಡ್ಡು ಈ ಉತ್ಪನ್ನದಲ್ಲಿ 1/5ಭಾಗವಾಗುತ್ತದೆ ಅಥವಾ ಶೇಕಡ 21 ಆಗುತ್ತದೆ. ನಮ್ಮ ಮಾನ್ಯ ಹಣಕಾಸಿನ ಸಚಿವರು ಮೊನ್ನೆ ತಾನೆ ಮಾತನಾಡುವಾಗ "The Expenditure of the State on Education is on the increase and has now reached a figure of Rs. 11,07,82,000 This represents nearly 30% of the net revenues of the State "ಎಂದು ಹೇಳಿದರು. ನನ್ನ ಲೆಕ್ಕಾಚಾರದ ಪ್ರಕಾರ ಇದು ಅಷ್ಟು ಸರಿಯಾಗುವುದಿಲ್ಲ ಎಂದು ನನ್ನ ಅಭಿಪ್ರಾಯ. ಏಕೆಂದರೆ ಇನ್ನೂ ಒಂದು ಸಾರಿ ಹೇಳುತ್ತೇನೆ. ನಮಗೆ ಕೇಳಿರತಕ್ಕ ಡಿಮ್ಯಾಂಡ್ 10 ಕೋಟಿ 55 ಲಕ್ಷ ಚಿಲ್ಲರೆ ರೂಪಾಯಿ, ಮತ್ತು ನಮ್ಮ ಉತ್ಪನ್ನ 50,92,52,000 ರೂಪಾಯಿ. ಮೆಮೋರ್ಯಾಂಡಂ ಪೇಜ್ 1ರಲ್ಲಿ ಇದು ಇದೆ. ಆದ್ದರಿಂದ ನಾವು ಖರ್ಚುಮಾಡುವುದಕ್ಕೆ ಹೊರಟಿರತಕ್ಕ ಮೊಬಲಗು ಸುಮಾರು ಶೇಕಡ 21ರಷ್ಟಾಗುತ್ತದೆ ಎಂದು ಮನವಿ ಮಾಡಿಕೊಳ್ಳುತ್ತೇನೆ. ಶೇಕಡ 21ರಷ್ಟು ಎಂದರೆ 10ಕೋಟಿ 55 ಲಕ್ಷ ರೂಪಾಯಿ. ನಮ್ಮ ಸಂಸ್ಥಾನದ ವಿದ್ಯಾಭ್ಯಾಸಕ್ಕೆ ಎಷ್ಟು ಬೇಕೋ ಅಷ್ಟನ್ನು ಒದಗಿಸಿಲ್ಲ. ಅಲ್ಲದೇ ನಮ್ಮ ಸಂಸ್ಥಾನಕ್ಕೆ ಬೇಕಾಗುವಷ್ಟು ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಸಹಿತ ಕಳೆದ 5ವರ್ಷಗಳಿಂದಲೂ ಮಾಡಿಲ್ಲ. ಅದರಲ್ಲೂ ಈ ಪ್ರಾಥಮಿಕ ವಿದ್ಯಾಭ್ಯಾಸದ ವಿಚಾರದಲ್ಲಿ ಅಂತೂ ತುಂಬ ಅಲಕ್ಷ್ಯವಾಗಿದೆ ಎಂಬ ಅಭಿಪ್ರಾಯವನ್ನು ನಾನು ಕೊಡುವವನಿದ್ದೇನೆ. ಹೀಗೆ ಕೊಡುವಾಗ ಮೊದಲನೆಯದಾಗಿ ನಾನು ವಿಶ್ವವಿದ್ಯಾನಿಲಯದ ವಿಚಾರ ಮತ್ತು ಸೆಕೆಂಡರಿ ವಿದ್ಯಾಭ್ಯಾಸದ ವಿಚಾರವನ್ನು ತೆಗೆದುಕೊಂಡು ಅನಂತರ ಪ್ರಾಥಮಿಕ ವಿದ್ಯಾಭ್ಯಾಸದ ವಿಚಾರ ಹೇಳುವವನಿದ್ದೇನೆ. ಏಕೆಂದರೆ ಪ್ರಾಥಮಿಕ ವಿದ್ಯಾಭ್ಯಾಸದ ವಿಚಾರ ಬಹಳ ಮುಖ್ಯವಾದದ್ದು. ಇದರ ವಿಚಾರದಲ್ಲಿ ನಾವು ಉಪೇಕ್ಷೆ ಮಾಡುವಂತೆ ಇಲ್ಲ. ನಮ್ಮ ರಾಜ್ಯ ಶಾಸನದ 45ನೆಯ ವಿಧಿಯ ಪ್ರಕಾರ ಹತ್ತು ವರ್ಷಗಳೊಳಗಾಗಿ 14 ವರ್ಷದ ವಯಸ್ಸಿನ ಪ್ರತಿಯೊಬ್ಬನಿಗೂ ವಿದ್ಯಾಭ್ಯಾಸದ ಸೌಕರ್ಯವನ್ನು ಒದಗಿಸತಕ್ಕದ್ದು. ಪ್ರತಿಯೊಂದು ಸಂಸ್ಥಾನದ ಕರ್ತವ್ಯ ಎಂದು ಆ ಆರ್ಟಿಕಲ್‌ನಲ್ಲಿ ಹೇಳಿದೆ. ಮತ್ತು ನಾವು ನಮ್ಮ ಮೈಸೂರು ಸಂಸ್ಥಾನದಲ್ಲೂ ಸಹಿತ ಎಲಿಮೆಂಟರಿ ಎಜ್ಯುಕೇಷನ್ ಆಕ್ಟನ್ನು 1-7-1941ನೆ ಇಸವಿಯಲ್ಲಿ ಜಾರಿಗೆ ತಂದಿದ್ದೇವೆ. ಅದರ ಪ್ರಕಾರವೂ ಸಹ ಸೆಕ್ಷನ್ 25ರ ಮೇರೆಗೆ ಯಾವಯಾವ ಭಾಗದಲ್ಲಿ ಕಡ್ಡಾಯ ವಿದ್ಯಾಭ್ಯಾಸವನ್ನು ಇಟ್ಟುಕೊಂಡಿದೆಯೋ ಅಲ್ಲಿ ಕಡ್ಡಾಯ ವಿದ್ಯಾಭ್ಯಾಸ ಕೊಡಬೇಕು. ಮತ್ತು ಸೆಕ್ಷನ್ 32ರ ಪ್ರಕಾರ ಮೈಸೂರು ಸಂಸ್ಥಾನದ ಕೆಲವಾರು ಭಾಗಗಳಲ್ಲಿ ಸ್ವಲ್ಪ ಸ್ವಲ್ಪ ಕಡ್ಡಾಯ ವಿದ್ಯಾಭಾಸ-ಎಂದರೆ ಅದನ್ನು ಡಿಫೈನ್ ಮಾಡಿದ್ದಾರೆ. ಅದೇನೆಂದರೆ ಒಂದು ಸಾರಿ ವಿದ್ಯಾರ್ಥಿ ಸ್ಕೂಲಿಗೆ ಬಂದರೆ ಅವನು 14 ವರ್ಷ ಮೀರುವವರೆಗೂ ಆ ಸ್ಕೂಲು ಬಿಡುವ ಹಾಗಿಲ್ಲ ಎಂಬ ಒಂದು ವ್ಯವಸ್ಥೆಯನ್ನು ಆ 32ನೇ ಸೆಕ್ಷನ್‌ನಲ್ಲಿ ಕೊಟ್ಟಿದ್ದಾರೆ. ಇಲ್ಲೂ ಸಹಿತ 10 ವರ್ಷಗಳೊಳಗಾಗಿ ಪ್ರತಿಯೊಂದು ಊರಿನಲ್ಲೂ ಪ್ರಾಥಮಿಕ ಶಾಲೆಗಳು ಇರಲಿಕ್ಕೇ ಬೇಕು ಎಂದು ಹೇಳಿ ಸೆಕ್ಷನ್ 25-32ರ ಪ್ರಕಾರ ಉಲ್ಲೇಖಿಸಲ್ಪಟ್ಟಿದೆ. ಆ ಆಕ್ಟು 1-7-1941ರಲ್ಲಿ ಜಾರಿಗೆ ಬಂದು ಈಗ 10 ವರ್ಷದ ಅವಧಿ ಮುಗಿದುಹೋಗಿದ್ದರೂ ಸಹ ಮತ್ತು ಅದು ಈಗಲೂ ಜಾರಿಯಲ್ಲಿದ್ದರೂ ಕೂಡ, ಇದುವರೆಗೂ ಕಡ್ಡಾಯ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ನಮ್ಮ ಸಂಸ್ಥಾನದಲ್ಲಿ ತೆಗೆದುಕೊಂಡು ಬರಲಿಲ್ಲ ಮತ್ತು ಆ ವಿಚಾರದಲ್ಲಿ ತುಂಬ ಉಪೇಕ್ಷೆಯಾಗಿದೆ. ನಾನು ಈ ಪ್ರಾಥಮಿಕ ವಿದ್ಯಾಭ್ಯಾಸದ ವಿಚಾರ ಕೊನೆಗೆ ಹೇಳುತ್ತೇನೆ ಎಂದು ಹೇಳಿದೆ. ಈಗ ನಾನು ಮೊದಲು ವಿಶ್ವವಿದ್ಯಾನಿಲಯದ ವಿಚಾರವಾಗಿ ಕೆಲವಾರು ಅಭಿಪ್ರಾಯಗಳನ್ನು ಕೊಡುತ್ತೇನೆ. ನಾನು ನನಗೆ ಕೊಟ್ಟಿರುವ ಕಾಲದ ಅವಧಿಯಲ್ಲೇ ಮುಗಿಸಬೇಕೆಂದು ಮನಸ್ಸು ಮಾಡಿಕೊಂಡಿದ್ದೇನೆ. ವಿಶ್ವವಿದ್ಯಾನಿಲಯಕ್ಕೆ ಈ ಬಡ್ಜೆಟ್‌ನಲ್ಲಿ ಮೀಸಲಾಗಿರತಕ್ಕ ಮೊಬಲಗು 1,04,46,600 ರೂಪಾಯಿಗಳು, ಎಂದರೆ ಇದು ನಮ್ಮ ಈ ಬಾಬಿನಲ್ಲಿ ಖರ್ಚಿಗೆ ಮೀಸಲಾಗಿಟ್ಟಿರತಕ್ಕ ಮೊಬಲಗಿನಲ್ಲಿ ಹತ್ತರಲ್ಲಿ ಒಂದು ಭಾಗವಾಗುತ್ತದೆ ಅಥವಾ ಶೇಕಡ 10ರಷ್ಟಾಗುತ್ತದೆ. ಈ ಮೊಬಲಗಿನಲ್ಲಿ 56ಲಕ್ಷ ರೂಪಾಯಿಗಳನ್ನು ಮೈಸೂರು ಸಂಸ್ಥಾನಕ್ಕೆ ಮೀಸಲಾಗಿಟ್ಟಿದ್ದಾರೆ. ಕರ್ಣಾಟಕ ವಿಶ್ವವಿದ್ಯಾನಿಲಯಕ್ಕೆ ಏಳು ಲಕ್ಷ ರೂಪಾಯಿ ಮಾತ್ರ ಇಟ್ಟಿದೆ. ಇದರಲ್ಲಿ ಹತ್ತು ಸಾವಿರ ರೂಪಾಯಿಗಳನ್ನು ಕಟ್ಟಡಕ್ಕೋಸ್ಕರ ಮೀಸಲಾಗಿಟ್ಟಿದೆ. ಇದನ್ನು ನೋಡಿದರೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ತುಂಬ ಹೆಚ್ಚಿಗೆ ಕೊಟ್ಟು ಕರ್ಣಾಟಕದಲ್ಲಿರುವ ವಿಶ್ವವಿದ್ಯಾನಿಲಯಕ್ಕೆ ಕಡಮೆ ಹಣವನ್ನು ಕೊಡುವ ಹಾಗೆ ಕಾಣಿಸುತ್ತದೆ. ಅದು ನಮ್ಮ ಮೈಸೂರು ಸಂಸ್ಥಾನಕ್ಕೆ ಈಗತಾನೇ ಸೇರಿರುವುದರಿಂದ ಅಲ್ಲಿ ವಿಶ್ವವಿದ್ಯಾನಿಲಯ ವಿದ್ಯಾಭ್ಯಾಸವು ಹೆಚ್ಚಿಗೆ ಅಭಿವೃದ್ಧಿಗೆ ಬಂದಿದೆಯೋ ಇಲ್ಲವೋ ಎನ್ನುವ ವಿಷಯ. ನನಗೆ ತಿಳಿದಮಟ್ಟಿಗೆ, ನಮ್ಮ ಗಮನಕ್ಕೆ ಅಷ್ಟಾಗಿ ಬಂದಿಲ್ಲ. ಅಲ್ಲಿನ ವಿದ್ಯಾಭ್ಯಾಸ ಮೈಸೂರು ವಿಶ್ವವಿದ್ಯಾನಿಲಯಕ್ಕಿಂತ ಕಡಮೆ ಇರಬಹುದೋ ಏನೋ. ಪ್ರಾಥಮಿಕ ವಿದ್ಯಾಭ್ಯಾಸದ ವಿಚಾರದಲ್ಲಿ, ಬೊಂಬಾಯಿ ಪ್ರಾಂತದಲ್ಲಿ ನಮಗಿಂತ ಮುಂದೆ ಹೋಗಿದ್ದಾರೆಂದು ಅಂಕಿಅಂಶಗಳಿಂದ ಕೆಲವು ಭಾಗ ಕಂಡುಬರುತ್ತದೆ. ಪ್ರಾಥಮಿಕ ಶಾಲೆಗಳ ವಿಚಾರದಲ್ಲಿ ಹಿಂದಿನ ಬೊಂಬಾಯಿ ಪ್ರಾಂತ ಮೈಸೂರಿಗಿಂತ ಖಂಡಿತವಾಗಿಯೂ ಹಿಂದೆ ಬಿದ್ದಿತ್ತು. ಆದರೆ ಸ್ವಾತಂತ್ರ್ಯ ಬಂದ ನಂತರ ಬೊಂಬಾಯಿ ಪ್ರಾಂತದವರು ತುಂಬ ಪ್ರಗತಿದಾಯಕವಾದ ಕಾರ್ಯ

ಗಳನ್ನು ಮಾಡಿ, ಪ್ರಾಥಮಿಕ ವಿದ್ಯಾಭ್ಯಾಸದ ವಿಚಾರದಲ್ಲಿ ಬಹಳವಾಗಿ ಅಭಿವೃದ್ಧಿ ಮಾಡಿದ್ದಾರೆ. ಆದರೆ ನನಗೆ ಕಂಡುಬಂದಿರುವ ಪ್ರಕಾರ ಕರ್ಣಾಟಕ ವಿಶ್ವವಿದ್ಯಾನಿಲಯವು ಅಷ್ಟು ಅಭಿವೃದ್ಧಿಯಾಗಿರಲಿಕ್ಕಿಲ್ಲ. ಆದುದರಿಂದ ಅಲ್ಲಿಗೆ ಹೆಚ್ಚಿಗೆ ಉತ್ತೇಜನವನ್ನು ಕೊಡತಕ್ಕದ್ದು ನಮ್ಮ ಕರ್ತವ್ಯವೆಂದು ನನಗನಿಸುತ್ತದೆ.

ಇನ್ನು ವಿಶ್ವವಿದ್ಯಾನಿಲಯದ ವಿಚಾರದಲ್ಲಿ ಕೆಲವಾರು ವಿಷಯಗಳನ್ನು ನಾವು ಆಲೋಚನೆ ಮಾಡಬೇಕಾಗಿದೆ, ಮತ್ತು ನಮ್ಮ ಗಮನಕ್ಕೆ ತೆಗೆದುಕೊಳ್ಳಬೇಕಾಗಿ ಬಂದಿದೆ. ಕೆಲವು ವಿಶ್ವವಿದ್ಯಾನಿಲಯಗಳು ಜಾತಿವಾರು ಪದ್ಧತಿಯ ಮೇಲೆ ಸ್ಥಾಪಿತವಾದುವು ಎನ್ನುವಹಾಗೆ ಕಾಣಸುತ್ತದೆ. ಇದಕ್ಕೆ ನಿದರ್ಶನಗಳನ್ನು ಹೇಳಬೇಕೆಂದರೆ, ಬೆಂಗಳೂರು ನಗರ ಕಾರ್ಪೊರೇಷನ್ನಲ್ಲಿರುವ ಸೆಂಟ್‌ಜೋಸೆಫ್ಸ್ ಕಾಲೇಜಿದೆ. ಅದೂ ಸಹ ವಿಶ್ವವಿದ್ಯಾನಿಲಯಕ್ಕೆ ಅಫಿಲಿಯೇಟ್ ಆಗಿದೆ. ಅವರ ಕರಿಕ್ಯುಲಂ ನೋಡಿದ್ದೇನೆ, ಕಾರ್ಯಕ್ರಮವನ್ನು ನೋಡಿದ್ದೇನೆ. ಆ ಕಾಲೇಜಿಗೆ ವಿದ್ಯಾರ್ಥಿಗಳನ್ನು ಸೇರಿಸಬೇಕಾದರೆ, ಮೊದಲು ಕ್ಯಾಥೋಲಿಕ್ ಕ್ರಿಶ್ಚಿಯನ್ನರಿಗೆ ಸ್ಥಾನ ಕೊಡಬೇಕು ಅವರಿಗೆ ಕೊಟ್ಟು ಉಳಿದ ಸ್ಥಾನಗಳನ್ನು ಬೇರೆಯವರಿಗೆ ಕೊಡಬೇಕು ಎಂಬ ಕಾರ್ಯಕ್ರಮವಿದೆ. ಹೀಗೆಯೇ ಇನ್ನೂ ಅನೇಕವಿವೆ. ನಾನು ಅವುಗಳನ್ನೆಲ್ಲ ಹೇಳುತ್ತಹೋದರೆ ಕಾಲವಿಳಂಬವಾಗುತ್ತದೆಯಾದುದರಿಂದ ಹೇಳುವುದಿಲ್ಲ. ಅನೇಕ ಖಾಸಗೀ ಕಾಲೇಜುಗಳು ಜಾತೀಯ ಸಂಬಂಧವಾದ ಆಸಕ್ತಿಯಿಂದಿವೆ. ಅವುಗಳಿಗೆ ಈ ರೀತಿ ಇರಲು ಉತ್ತೇಜನ ಕೊಡುತ್ತಹೋದರೆ ನಮ್ಮ ಹಿಂದೂಸ್ಥಾನ ಶಾಸನದ ನಿಯಮಗಳಿಗೆ ವಿರೋಧವಾಗಿ ನಾವು ನಡೆದುಕೊಂಡ ಹಾಗಾಗುತ್ತದೆ. ಕೆಲವು ಕಾಲೇಜುಗಳಲ್ಲಿ, ಬಹಳ ಹೆಚ್ಚಿನ ಪ್ರಮಾಣದಲ್ಲಿ ಬ್ರಾಹ್ಮಣ ಉಪಾಧ್ಯಾಯರೇ ಇದ್ದಾರೆ; ಕೆಲವು ಕಡೆ ಲಿಂಗಾಯಿತ ಉಪಾಧ್ಯಾಯರೇ ಹೆಚ್ಚಾಗಿದ್ದಾರೆ. ಹೀಗೆ ನಾನಾ ನಮೂನೆಯಾಗಿ ಇದ್ದಾರೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಕಾಲೇಜುಗಳು ಒಂದು ವೇಳೆ ಸ್ಥಾಪಿತವಾಗುವುದಾದರೆ, ಅವುಗಳಲ್ಲಿ ಸಹಿತ ಯಾವ ವಿಧದಿಂದಲೂ ಜಾತಿವಾರು ಸೋಂಕು ಇರಕೂಡದು ಎಂದು ಹೇಳುತ್ತೇನೆ. ಈ ದೃಷ್ಟಿಯಿಂದ ನಾನು ಮಾನ್ಯ ಮಂತ್ರಿಗಳಲ್ಲಿ ನಿವೇದನೆ ಮಾಡಿಕೊಳ್ಳುವುದೇನೆಂದರೆ ಈ ರೀತಿ ಜಾತಿವಾರು ಪದ್ಧತಿ ಎಲ್ಲೆಲ್ಲಿದೆ ಅದನ್ನು ಮೊದಲು ತೆಗೆದುಹಾಕಬೇಕು. ನಾನು ಇನ್ನೂ ಒಂದು ಹೆಜ್ಜೆ ಮುಂದೆಹೋಗುವುದಾದರೆ, aided institutions ಇರುವುದು ಬೇಡ ಎಂದು ಹೇಳುತ್ತೇನೆ. ಏಕೆಂದರೆ, ಸರ್ಕಾರದವರು ಇವೊತ್ತಿನ ದಿವಸ ಕೊಡತಕ್ಕ ಮೊಬಲಗು, ಆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ಬರತಕ್ಕ ಫೀ ವರಮಾನ ಮತ್ತು ಅಲ್ಲಿ ನಡೆದುಕೊಂಡುಬರತಕ್ಕ ವಿಧಾನ ಇವುಗಳನ್ನು ನೋಡಿದರೆ, ಅಲ್ಪಸ್ವಲ್ಪ ಸ್ವಂತ ಕಾಲೇಜುಗಳಿಂದ ಅವರಿಗೇ ಖರ್ಚು ಹಾಕಿಕೊಂಡು ವಿದ್ಯಾರ್ಥಿಗಳಿಂದ ಬರಬೇಕಾದ ಶುಲ್ಕದಲ್ಲಿ ಹೆಚ್ಚಿಗೆ ತೆಗೆದುಕೊಂಡು, ಇನ್ನೂ ನಾನಾ ನಮೂನೆಯಾಗಿ ಉತ್ಪತ್ತಿ ಮಾಡಿ, ಸರ್ಕಾರದ ಖರ್ಚೇ ಹೆಚ್ಚಾಗಿರತಕ್ಕ ಸಂದರ್ಭ ಕಂಡುಬರುತ್ತದೆ. ಅಂಥ ವ್ಯವಸ್ಥೆ ಇರುವಾಗ ನಾವುಗಳು ಈ ಕಾಲೇಜುಗಳನ್ನು ಸ್ವಂತವಾಗಿ ಉಳಿಯಲು ಏಕೆ ಬಿಡಬೇಕು ? ಸರ್ಕಾರದವರೇ ಏಕೆ ಇವನ್ನು ತೆಗೆದುಕೊಂಡು ಒಂದು ನೀತಿ ನಿಯಮಕ್ಕೆ ಅನುಸಾರವಾಗಿ ಇವುಗಳನ್ನು ನಡೆಸಬಾರದು ಎನ್ನತಕ್ಕ ಒಂದು ಪ್ರಶ್ನೆ ಇದರಲ್ಲಿ ಉದ್ಭವಿಸುತ್ತದೆ. ಇದನ್ನು ಸಹಿತ ಸರ್ಕಾರದವರ ಅವಗಾಹನೆಗೆ ತಂದಿದ್ದೇನೆ.

ಕೆಲವು ಟೆಕ್ನಿಕಲ್ ಕಾಲೇಜುಗಳಿವೆ. ನಾವು ಟೆಕ್ನಿಕಲ್ ಕಾಲೇಜುಗಳ ವಿಚಾರದಲ್ಲಿ ತುಂಬ ಉಪೇಕ್ಷೆಯಿಂದಿದ್ದೇವೆಂದರೆ ತಪ್ಪಾಗಲಾರದು. ಕೆಲವು ಟೆಕ್ನಿಕಲ್ ಕಾಲೇಜುಗಳಲ್ಲಿ ಸರಿಯಾದ ಸಲಕರಣೆಗಳಿಲ್ಲ. ಸಲಕರಣೆಗಳನ್ನು ಒದಗಿಸಲು ಸರಿಯಾದ ವ್ಯವಸ್ಥೆ ಮಾಡುತ್ತಿಲ್ಲ. ಸಲಕರಣೆಗಳಿಲ್ಲದಿದ್ದರೆ ಟೆಕ್ನಿಕಲ್ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ತುಂಬ ಕಷ್ಟವಾಗುತ್ತದೆ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಇನ್ನೊಂದು ವಿಚಾರವನ್ನು ಹೇಳುತ್ತೇನೆ. ಸ್ವಲ್ಪ ದಿವಸಗಳಲ್ಲಿ ಹುಬ್ಬಳ್ಳಿಯಲ್ಲಿ ಒಂದು ಮೆಡಿಕಲ್ ಕಾಲೇಜು ಸ್ಥಾಪನೆಯಾಗುವುದಿದೆ. ನಾನು ಅತಿ ವಿನಯದಿಂದ ಕೇಳುತ್ತೇನೆ, ಆ ಕಾಲೇಜಿನಲ್ಲಿ ಎಷ್ಟರಮಟ್ಟಿಗೆ ಸರಿಯಾದ ವಿದ್ಯಾಭ್ಯಾಸ ಮಾಡುವುದಕ್ಕೆ ಸಲಕರಣೆಗಳಿವೆ, ಎಷ್ಟು ಜನ ಸ್ಪೆಷಲೈಸ್ಡ್ ಡಾಕ್ಟರುಗಳಿದ್ದಾರೆ, ಎಷ್ಟು ಆಸ್ಪತ್ರೆಗಳಿವೆ, ಅಥವ ಅಲ್ಲಿನ ಆಸ್ಪತ್ರೆಗಳಲ್ಲಿರತಕ್ಕ ಸಲಕರಣೆಗಳನ್ನು ಉಪಯೋಗಿಸಿ ಕೆಲವಾರು ಅಭ್ಯಾಸಗಳನ್ನು ಮಾಡಿಸುತ್ತೀರಾ ಅಥವ ಕಾಲೇಜಿಗೇ ಸ್ವಂತವಾಗಿ ಸಲಕರಣೆಗಳನ್ನು ಒದಗಿಸುತ್ತೀರಾ ಎಂದು ಕೇಳುತ್ತೇನೆ. ಈ ಪ್ರಶ್ನೆಗಳು ಸಹಿತ ಉದ್ಭವಿಸುತ್ತವೆ. ಈ ದೃಷ್ಟಿಯಿಂದ ನೋಡಿದರೆ, ಒಂದು ಕಾಲೇಜನ್ನು ಸ್ಥಾಪನೆ ಮಾಡುವಾಗ ಅದು ಸಮರ್ಪಕವಾಗಿ ಕೆಲಸಮಾಡಲು ಯಾವಯಾವ ಸಲಕರಣೆಗಳು ಬೇಕು, ಯಾವ ಪ್ರಮಾಣದಲ್ಲಿ ಬೇಕು, ಎಷ್ಟರಮಟ್ಟಿಗೆ ಅದನ್ನು ಆಗಮಾಡಬೇಕು ಎನ್ನುವ ವಿಚಾರವನ್ನು ಯೋಚನೆ ಮಾಡುತ್ತಿಲ್ಲವೆಂದು ನನ್ನ ಗಮನಕ್ಕೆ ಬರುತ್ತದೆ. ಆದುದರಿಂದ ತಾವು ದಯವಿಟ್ಟು ಈ ವಿಚಾರವಾಗಿ ಉಪೇಕ್ಷೆಯಿಂದ ಇರಬಾರದು. ಏಕೆಂದರೆ ಒಂದು ಕಾಲೇಜನ್ನು ಸ್ಥಾಪನೆ ಮಾಡಿದರೆ ಅದು ಸ್ವಪರಿಪೂರ್ಣವಾಗಿರಬೇಕು. ಸ್ವಪರಿಪೂರ್ಣವಾಗಿ ಇಲ್ಲದೆ ಹೋದರೆ ಆ ರೀತಿ ಇರುವಂತೆ ದಯವಿಟ್ಟು ಮಾಡಬೇಕು. ಸ್ವಪರಿಪೂರ್ಣವಾಗಿಲ್ಲದೆ ಇರುವ ಕಾಲೇಜುಗಳಿಂದ ಬಂದಿರತಕ್ಕವರ ವಿದ್ಯಾಭ್ಯಾಸ ಅಷ್ಟು ಸಮರ್ಪಕವಾಗಿರುವುದಿಲ್ಲ ; ಅವರಿಗೆ ಎಲ್ಲ ವಿಚಾರವೂ ಸರಿಯಾಗಿ ಗೊತ್ತಾಗಿರುವುದಿಲ್ಲ. ನಾನು ಈ ವಿಷಯವನ್ನು ಮೆಡಿಕಲ್ ಕಾಲೇಜುಗಳ ಬಗ್ಗೆ ಮಾತ್ರ ಹೇಳುತ್ತಿಲ್ಲ. ಈಗ ಮೂರು ವರ್ಷದ ಕೆಳಗೆ ಮಾಡರ್ಣ ರೆವ್ಯೂನಲ್ಲಿ ಒಂದು ವಿಷಯವನ್ನು ಓದಿದೆ. ಅದನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ನಮ್ಮ ಹಿಂದೂಸ್ತಾನದ ವಿದ್ಯಾರ್ಥಿಗಳು ಪರದೇಶಕ್ಕೆ ವಿದ್ಯಾಭ್ಯಾಸ ಮಾಡುವುದಕ್ಕೆ ಹೋದರೆ, ಬಹಳ ಹಿಂಜರಿದು ಅವರಿಗೆ ಸ್ಥಳ ಕೊಡತಕ್ಕ ಪದ್ಧತಿ ಪರದೇಶಗಳಲ್ಲಿದೆ ಎಂದು ಓದಿದ್ದೇನೆ. ಇದನ್ನು ಏಕೆ ಹೇಳಿದೆನೆಂದರೆ, ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಸ್ಟ್ಯಾಂಡರ್ಡ್ ಎನ್ನತಕ್ಕುದಕ್ಕೆ ಅಷ್ಟು ಗಮನಕೊಟ್ಟಿಲ್ಲ. ನಮ್ಮ ಸ್ಟ್ಯಾಂಡರ್ಡ್ ಬಹಳ ಕಡಮೆ ಇದೆ. ಆದುದರಿಂದ ನಾವು ವಿದ್ಯಾಭ್ಯಾಸದ ಅಂತಸ್ತನ್ನು ಹೆಚ್ಚಿಗೆ ಮಾಡಬೇಕು ಎಂದು ನಿಜವಾದ ಅಭಿಪ್ರಾಯವಿದ್ದ ಭಾಗದಲ್ಲಿ ಯಾವುದೇ ಒಂದು ವ್ಯವಸ್ಥೆಯನ್ನು ಮಾಡಿದರೂ ಸಹ, ಅದನ್ನು ಕ್ರಮವಾಗಿ, ವ್ಯವಸ್ಥಿತವಾಗಿ ಮತ್ತು ಸಂಪೂರ್ಣವಾಗಿ ಮಾಡಿ, ಅದಕ್ಕೆ ಬೇಕಾಗತಕ್ಕ ಪ್ರತಿಯೊಂದು ಸಲಕರಣೆಗಳನ್ನೂ ಒದಗಿಸದೆ ಹೋದರೆ ಖಂಡಿತವಾಗಿ ವಿದ್ಯಾಭ್ಯಾಸ ಸರಿಯಾಗಿ ಆಗುವುದಿಲ್ಲ. ಪ್ರೊಫೆಸರುಗಳಾದರೂ ಸಹಿತ, ಎಷ್ಟರಮಟ್ಟಿಗೆ ನಮ್ಮಲ್ಲಿದ್ದಾರೆಂದು ಆಲೋಚನೆ ಮಾಡಬೇ

(ಶ್ರೀ ಕೆ. ಕೆಂಚಪ್ಪ.)

ಕಾಗಿಬರುತ್ತದೆ. ಈ ವಿಚಾರವನ್ನು ತಮ್ಮಲ್ಲಿ ಹೇಳುವಾಗ ಒಂದು ವಿಷಾದವಾದ ಪ್ರಕರಣ ಹೇಳಬೇಕಾಗುತ್ತದೆ. ಕೆಲವು ಕಾಲೇಜುಗಳಲ್ಲಿ ಎಷ್ಟು ಪ್ರೊಫೆಸರುಗಳಿರಬೇಕೋ, ಎಷ್ಟು tutors ಇರಬೇಕೋ, ಎಷ್ಟು ecturers ಇರಬೇಕೋ ಅಷ್ಟು ಇರುವುದಿಲ್ಲ. ಚಿತ್ರದುರ್ಗ ಕಾಲೇಜಿನಲ್ಲಿ, ಈಗ್ಗೆ ಒಂದು ವರ್ಷದ ಕೆಳಗೆ ಉಪಾಧ್ಯಾಯರೇ ಇಲ್ಲದೆ ಸತ್ಯಾಗ್ರಹ ನಡೆಯಿತು. ಅಲ್ಲಿ ಸತ್ಯಾಗ್ರಹ ನಡೆದು, ಪರೀಕ್ಷೆ ಸಮೀಪಿಸಿದರೂ ಪಾಠ ಹೇಳತಕ್ಕವರೇ ಇಲ್ಲದೆ ಇತ್ತು. ಈ ರೀತಿಯಾಗಿ ಆಗಿ ದೇಶದಲ್ಲಿ ವಿಶ್ವವಿದ್ಯಾನಿಲಯದ ವ್ಯವಸ್ಥೆಯನ್ನು ಬಹಳ ಕನಿಷ್ಠವಾಗಿ ಜನರು ಕಾಣುವ ರೀತಿಯಲ್ಲಿ ನಾವು ನಡೆದುಕೊಂಡು ಬಂದಿದ್ದೇವೆ. ಇದರ ವಿಚಾರದಲ್ಲಿ ಏನೇ ಕಷ್ಟವಿರಲಿ, ಪಾಠಗಳನ್ನು ಹೇಳಿಕೊಡಲು ಬೇಕಾಗುವ ಸಲಕರಣೆಗಳನ್ನು ತಾವು ಸರಿಯಾಗಿ ಒದಗಿಸದೆಹೋದರೆ, ಮತ್ತು ಆಗಿಂದಾಗ್ಗೆ ಬದಲಾವಣೆ ಮಾಡುವುದಕ್ಕೆ ಅಲ್ಲಿನ ಪ್ರೊಫೆಸರುಗಳಿಗೇ, ಲೆಕ್ಚರರುಗಳಿಗೇ ಅಥವ ಸೂಪರಿಂಟೆಂಡೆಂಟರಿಗೇ ಜವಾಬ್ದಾರಿಯನ್ನು ಗೊತ್ತುಮಾಡದೆ ಹೋದರೆ, ನಮ್ಮ ವಿದ್ಯಾಭ್ಯಾಸದ standard ಎನ್ನತಕ್ಕದ್ದು ಎಂದಿಗೂ ಉತ್ತಮವಾಗಲಾರದೆಂಬ ಅಭಿಪ್ರಾಯವನ್ನು ಹೇಳುತ್ತಿದ್ದೇನೆ.

ಕೆಲವು ಟೆಕ್ನಿಕಲ್ ಕಾಲೇಜುಗಳಲ್ಲಿ ಬಹಳ ಅನ್ಯಾಯಗಳು ನಡೆಯುತ್ತಿವೆ. ಅದನ್ನು ನಾವು ಎಷ್ಟು ಎಂದು ಹೇಳುವ ಹಾಗಿಲ್ಲ. ಕೆಲವು ಕಾಲೇಜುಗಳಲ್ಲಿ ಅಡ್ಮಿಷನ್‌ಗೆ ಹೋದರೆ ಬೇಕಾದಷ್ಟು ವ್ಯಾಪಾರ ನಡೆಯುತ್ತದೆ. ಈ ರೀತಿ ಬಹಳ ವರ್ಷಗಳಿಂದ ನಡೆಯುತ್ತಿದೆ. ಬೆಂಗಳೂರಿನಲ್ಲಿರುವ ಮೆಡಿಕಲ್ ಕಾಲೇಜನ್ನು ತೆಗೆದುಕೊಂಡರೆ ಅಲ್ಲಿ ಈ ರೀತಿ ಮಾಡುವುದಕ್ಕೆ ಸರ್ಕಾರದವರೇ ಅನುಮತಿ ಕೊಟ್ಟಹಾಗೆ ಇದೆ. ಆ ಕಾಲೇಜಿನಲ್ಲಿ ಶೇಕಡ 50ರಷ್ಟು ಸೀಟುಗಳಿಗೆ ಮೂರು ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳಬಹುದೆಂದೂ, ಉಳಿದ ಸೀಟುಗಳನ್ನು ಬೇರೆಯವರಿಗೆ ಕೊಡಬೇಕೆಂದೂ ನಿಗದಿಮಾಡಿದ ಹಾಗೆ ಕಾಣುತ್ತದೆ.

ವಿದ್ಯಾಭ್ಯಾಸದ ವಿಚಾರದಲ್ಲಿ ಒಂದು ಸರಿಯಾದ ಪದ್ಧತಿಯು ಇದ್ದು ಕಾಲೇಜುಗಳಿಗೆ ಪ್ರವೇಶ ದೊರಕುವ ವಿಷಯವಾಗಿ ಸಮಾನವಾದ ಅನುಕೂಲತೆಯನ್ನು ಒದಗಿಸುವಂತೆ ಇರಬೇಕು. ಮೂರು ಸಾವಿರ ರೂಪಾಯಿ ಕೊಟ್ಟರೆ ಅಡ್ಮಿಷನ್ ದೊರಕುವ ಹಾಗಾದರೆ ಯೋಗ್ಯತೆಯು ಇಲ್ಲದ ವಿದ್ಯಾರ್ಥಿಗಳು ಹಣದ ಬಲದಿಂದ ಕಾಲೇಜಿನಲ್ಲಿ ಪ್ರವೇಶವನ್ನು ದೊರಕಿಸಿಕೊಳ್ಳುವರು. ಯೋಗ್ಯತೆಯುಳ್ಳ ವಿದ್ಯಾರ್ಥಿಗಳಿಗೆ ಪ್ರವೇಶವೇ ದೊರಕುವುದಿಲ್ಲ. ನಾಲ್ಕೈದು ಸಾವಿರ ರೂಪಾಯಿ ಕೊಡತಕ್ಕಂಥವರಿಗೆ ಕಾಲೇಜಿನಲ್ಲಿ ಸೀಟು ಕೊಡಬೇಕೆಂಬ ಪದ್ಧತಿಯು ಸಾಗಿಬಂದಿದೆ. ಮಂಗಳೂರು ಕಾಲೇಜಿನಲ್ಲಿ ಈ ಅನಿಷ್ಟ ಪದ್ಧತಿಯು ಇದೆ ಎಂದು ಕೇಳಿದ್ದೇನೆ. ಕೆಲವು ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಸೀಟುಗಳನ್ನು ಕಾಯ್ದಿರಿಸುವ ವ್ಯವಸ್ಥೆ ಇದೆ ಎಂದು ಕೇಳಿದ್ದೇನೆ. ಯೋಗ್ಯತೆಯ ಮೇಲೆ ಸೀಟು ಕೊಡತಕ್ಕಂಥ ಪದ್ಧತಿಯು ಇರಬೇಕು. ನಮ್ಮ ಕಾನ್‌ಸ್ಟಿಟ್ಯೂಷನ್ನಿನಲ್ಲಿ ಸಹ ಪ್ರತಿಯೊಬ್ಬರಿಗೂ ಸಮಾನವಾದ ಅವಕಾಶವು ಇರಬೇಕೆಂದು ಇದೆ. ಆದುದರಿಂದ ಎಲ್ಲರಿಗೂ ಸಮಾನವಾದ ಅವಕಾಶವಿರಬೇಕು. ಇಲ್ಲವಾದರೆ ಈ ಪದ್ಧತಿಯು ಒಂದು ಉಚ್ಚ ನೀತಿಗೆ ವಿರೋಧವಾಗುತ್ತದೆ. ಧರ್ಮದ ದೃಷ್ಟಿಯಿಂದ ಈ ಪದ್ಧತಿಯನ್ನು ತಡೆಗಟ್ಟಬೇಕು. ನಾನು ಪದೇಪದೇ ಉಪಯೋಗಿಸುವ ಪದಗಳನ್ನು ಪುನಃ ಹೇಳಬೇಕಾಗುತ್ತದೆ. Double thinking and double action ಆಗಕೂಡದು. ಸರಕಾರದವರು ಇಂಥ ಸಂಸ್ಥೆಗಳನ್ನು ವಹಿಸಿಕೊಳ್ಳಬೇಕು. ಇಲ್ಲವಾದರೆ ಸೂಕ್ತ ಹತೋಟಿ ಹೊಂದಿರಬೇಕು. ನಮ್ಮ ದೇಶದಲ್ಲಿ casteless society ಮತ್ತು classless society ಸ್ಥಾಪನೆ ಮಾಡುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಹಾಸ್ಟೆಲುಗಳಿಗೋಸ್ಕರ ಕೊಡತಕ್ಕಂಥ ಗ್ರಾಂಟುಗಳ ಲಿಸ್ಟು ನೋಡಿದರೆ ನಿಮ್ನವರ್ಗದವರ ಸಲುವಾಗಿ ಒಂದು ದೊಡ್ಡ ಲಿಸ್ಟು ಇದೆ. ಒಡ್ಡರು, ಕುರುಬರು, ಚಲವಾದಿ ಮಾದಿಗರು, ಹರಿಜನರು, ಲಂಬಾಣಿಗರು ಇವರಿಗಾಗಿ ಬೇರೆಬೇರೆ ಹಾಸ್ಟೆಲುಗಳು ಇವೆ. ಸರಕಾರದವರು ಇಷ್ಟು ಹಣವನ್ನು ಖರ್ಚು ಮಾಡಿದರೂ ಅಸ್ಪೃಶ್ಯತಾ ನಿವಾರಣೆಯು ಆಗುವುದಿಲ್ಲ. ಅಸ್ಪೃಶ್ಯತಾ ನಿವಾರಣೆ ಮಾಡಲಾಗುತ್ತಿದೆ ಎಂದು ಹೇಳಿದರೂ ಅಸ್ಪೃಶ್ಯತೆಯು ಹೆಚ್ಚು ಆಗುತ್ತಾ ಇದೆ. ಹರಿಜನರಿಗೆ, ನಿಮ್ನವರ್ಗದವರಿಗೆ ಎಷ್ಟು ಬೇಕೋ ಅಷ್ಟು ಹೆಚ್ಚಾಗಿ ಸೌಕರ್ಯ ಒದಗಿಸಿಕೊಡಬಹುದು. ಆದರೆ ಬೇರೆಬೇರೆ ಜಾತಿಯವರಿಗೆ ಬೇರೆ ಬೇರೆ ಹಾಸ್ಟೆಲುಗಳನ್ನು ವಸತಿ ಸೌಕರ್ಯವನ್ನು ಒದಗಿಸಿಕೊಟ್ಟರೆ ಅಸ್ಪೃಶ್ಯತಾ ನಿವಾರಣೆಗೆ ಸಹಾಯಕವಾಗುವುದಿಲ್ಲ. ಕೆಲವು ದಿವಸಗಳ ಹಿಂದೆ ಇದನ್ನು ನಮ್ಮ ರಾಷ್ಟ್ರಾಧ್ಯಕ್ಷರಿಗೆ ಬರೆದು ಕೇಳಿದ್ದೇನೆ. ಹಿಂದುಳಿದವರ್ಗದ ಕಮಿಷನರಾದ ಶ್ರೀ ಎಲ್. ಎಂ. ಶ್ರೀಕಾಂತರವರು ನಮ್ಮ ಸಂಸ್ಥಾನಕ್ಕೆ ಬಂದಾಗ ಈ ಪ್ರಶ್ನೆಯನ್ನು ನಾನು ಎತ್ತಿದಾಗ ಹಿಂದುಳಿದವರ್ಗದ ಸ್ಪೆಷಲ್ ಆಫೀಸರರು ಸಹ ಇದ್ದರು. ಈ ರೀತಿಯಾಗಿ ಬೇರೆಬೇರೆ ಜಾತಿಯವರಿಗೆ ಬೇರೆಬೇರೆ ಹಾಸ್ಟೆಲುಗಳನ್ನು ಮಾಡುವುದರಿಂದ ಅಸ್ಪೃಶ್ಯತಾ ನಿವಾರಣೆಗೆ ಸಹಾಯಕವಾಗುವುದಿಲ್ಲ. ತದ್ವಿರುದ್ಧವಾಗಿ ಅಸ್ಪೃಶ್ಯತೆಗೆ ಹೆಚ್ಚಾಗಿ ಸಹಾಯಕವಾಗುತ್ತದೆ ಎಂದು ನಾನು ಹೇಳಿದ್ದೇನೆ. ಹೀಗೆ ನಮಗೆ ಯಾರೂ ತಿಳಿಯಪಡಿಸಿಲ್ಲವೆಂದು ಅವರು ಹೇಳಿದರು. ನಮ್ಮ ರಾಜ್ಯದಲ್ಲಿರುವ ಪಾಲಿಸಿ ಕಮಿಟಿಯ ಅಧ್ಯಕ್ಷರು ನಮ್ಮ ಮುಖ್ಯಮಂತ್ರಿಗಳು ಆಗಿದ್ದಾರೆ. ಈ ವಿಚಾರದಲ್ಲಿ ಪಾಲಿಸಿ ಕಮಿಟಿಯವರು ಏನು ನಿಗದಿ ಮಾಡಿದ್ದಾರೆಂದು ಕೇಳಿದರೆ ಅವರು ಏನೂ ಉತ್ತರ ಕೊಡಲಿಲ್ಲ. ನಿಮ್ನವರ್ಗದವರಿಗೆ ಪ್ರತ್ಯೇಕ ಹಾಸ್ಟೆಲು ಸ್ಥಾಪಿಸುವುದರಿಂದ ಅಸ್ಪೃಶ್ಯತೆ ಹೋಗುವುದಿಲ್ಲ. ಹೀಗೆ ಮಾಡಿದರೆ ಅಸ್ಪೃಶ್ಯತೆ ನಿವಾರಣೆ ಮಾಡುವುದು ಬೂಟಾಟಿಕೆ ಆಗುವುದು ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ನಿಮ್ನವರ್ಗದವರ ವಿದ್ಯಾಭ್ಯಾಸದ ಸಲುವಾಗಿ ಎರಡರಷ್ಟು ಖರ್ಚು ಮಾಡಬಹುದು. ಈ ಪದ್ಧತಿಯನ್ನು ಎಲ್ಲಿಯವರೆಗೆ ಜಾರಿಯಲ್ಲಿ ಇಟ್ಟುಕೊಂಡು ಬರುತ್ತೀರೋ ಅಲ್ಲಿಯವರೆಗೆ ಅಸ್ಪೃಶ್ಯತಾ ನಿವಾರಣೆಯಾಗುವುದಿಲ್ಲ. ಜಾತಿ ಜಾತಿಗಳೊಳಗಿನ ಅಂತರವು ದೊಡ್ಡದು ಆಗುತ್ತಾ ಹೋಗುತ್ತದೆ. ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ವ್ಯತ್ಯಾಸ ಕಾಣುತ್ತದೆ. ಇದನ್ನು ಸರ್ಕಾರದವರು ತೀವ್ರವಾಗಿ ಆಲೋಚನೆಮಾಡಿ ಜಾಗ್ರತೆಯಾಗಿ ತೀರ್ಮಾನಕ್ಕೆ ಬರಬೇಕು. ಹರಿಜನರ ವಿದ್ಯಾಭ್ಯಾಸಕ್ಕೆ ಇಂಡಿಯಾ ಸರ್ಕಾರದವರು ಹಣದ ಸಹಾಯ ಮಾಡುತ್ತಿದ್ದಾರೆ. ಆದುದರಿಂದ ಇದನ್ನು ಬಹಳ ಎಚ್ಚರದಿಂದ ಆಲೋಚನೆ ಮಾಡಬೇಕಾಗಿದೆ.

ಕಾಲೇಜುಗಳು ಹೆಚ್ಚಾಗುತ್ತಾ ಇವೆ. ಆದರೆ ಕಾಲೇಜುಗಳಲ್ಲಿ ಲೆಕ್ಚರರ್ಸ್, ಟ್ಯೂಟರ್ಸ್, ಪ್ರೊಫೆಸರ್ಸ್ ಇವರ ಸಂಖ್ಯೆ ಹೆಚ್ಚುತ್ತಿಲ್ಲ. ಉಪಾಧ್ಯಾಯರುಗಳ ಸಂಖ್ಯೆ ಕಡಮೆಯಾಗುತ್ತಾ ಇದೆ. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದ್ದರೂ ಅದೇ ಪ್ರಮಾಣದಲ್ಲಿ ಉಪಾಧ್ಯಾ

ಯರು ಪ್ರೊಫೆಸರ್ಸ್, ಲೆಕ್ಚರರ್ಸ್, ಟ್ಯೂಟರ್ಸ್ ಇವರ ಸಂಖ್ಯೆ ಹೆಚ್ಚು ಮಾಡುವುದಕ್ಕೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಇದರಿಂದ ವಿದ್ಯಾಭ್ಯಾಸದ ಮಟ್ಟವು ಬಹಳ ಕಡಮೆಯಾಗುತ್ತಿದೆ. ಆದಕಾರಣ ಈ ವಿಚಾರವನ್ನು ಆಲೋಚನೆ ಮಾಡಬೇಕಾಗಿದೆ.

ಸೆಕೆಂಡರಿ ಎಜ್ಯುಕೇಷನ್ನಿನ ಸಲುವಾಗಿ ಮೀಸಲಾಗಿ ಇಟ್ಟಿರತಕ್ಕಂಥ ಹಣವು 1,15,87,600 ರೂಪಾಯಿ ಆಗಿದೆ. ಯೂನಿವರ್ಸಿಟಿ ವಿದ್ಯಾಭ್ಯಾಸಕ್ಕಾಗಿ ಕೊಡತಕ್ಕ ಹಣವು ಒಟ್ಟು ಹಣದ ಹತ್ತರಲ್ಲಿ ಒಂದು ಪಾಲು ಎಂದರೆ ಶೇಕಡಾ ಹತ್ತರಷ್ಟು ಆಗುತ್ತದೆ. ಇದರಿಂದ ಯೂನಿವರ್ಸಿಟಿ ವಿದ್ಯಾಭ್ಯಾಸದ ಮಟ್ಟವು ಕಡಮೆಯಾಗಿದೆ. Laboratory equipment ಉತ್ತಮಪಡಿಸಲು ಆಗುವುದಿಲ್ಲ. ಹಿಂದಕ್ಕೆ 1916ರಲ್ಲಿ ಎಷ್ಟು ಹಣ ಕೊಡುತ್ತಿದ್ದರೋ ಅಷ್ಟೇ ಹಣವನ್ನು ಈಗಲೂ ಸಹ ಕೊಡಲಾಗುತ್ತಿದೆ. ಆ ಕಾಲದಲ್ಲಿ equipment ಸಲುವಾಗಿ ಎಷ್ಟು ಖರ್ಚು ಬರುತ್ತಿತ್ತೋ ಅಷ್ಟು ಹಣ ಗೊತ್ತುಮಾಡಲಾಗಿದೆ. ಆದರೆ ಈಗ ಅದೇ equipmentನ್ನು ಕೊಂಡುಕೊಳ್ಳಬೇಕಾದರೆ ಬೆಲೆ ವಿಪರೀತವಾಗಿ ಜಾಸ್ತಿಯಾಗಿಬಿಟ್ಟಿದೆ. ಈಗ ಕೊಡುತ್ತಿರುವ ಹಣ ಸಾಕಾಗುವುದಿಲ್ಲ. ಇಂದಿಗೂ ಅದನ್ನೇ ಮುಂದುವರಿಸಿಕೊಂಡು ಬಂದರೆ ಸಾಮಾನುಗಳನ್ನು ಕೊಂಡುಕೊಳ್ಳಲು ಆಗುವುದಿಲ್ಲ. ಹೀಗಾಗುವುದರಿಂದ ಪ್ರಾಕ್ಟಿಕಲ್ ಕ್ಲಾಸಸ್ ಸರಿಯಾಗಿ ನಡೆಸಲು ಆಗುವುದಿಲ್ಲ. ಇದರಂತೆಯೇ ಹೈಸ್ಕೂಲುಗಳಲ್ಲಿಯೂ ಕೂಡ ಪ್ರಾಕ್ಟಿಕಲ್ಸ್ ಸಲುವಾಗಿ ಸರಿಯಾದ equipment ಇರುವುದಿಲ್ಲ. ಮುನಿಸಿಪಲ್ ಹೈಸ್ಕೂಲು ಆಗಲಿ, ಜಿಲ್ಲಾ ಬೋರ್ಡ್ ಹೈಸ್ಕೂಲ್ ಆಗಲಿ, ಬೇರೆ ಯಾವುದೇ ಹೈಸ್ಕೂಲ್ ಆಗಲಿ ಅಲ್ಲಿ Laboratory equipment for practical classes ಸರಿಯಾಗಿಲ್ಲ. ನಾನು ಆರು ವರ್ಷ ಜಿಲ್ಲಾಬೋರ್ಡ್ ಅಧ್ಯಕ್ಷನಾಗಿ ಐದು ಶಾಲೆಗಳನ್ನು ನಡೆಸಿ ಬಂದ ಅನುಭವದಿಂದ ಇದನ್ನು ಹೇಳುತ್ತಿದ್ದೇನೆ. ಈಗ ನಿಗದಿಮಾಡಿದ ಹಣದ ನಾಲ್ಕರಷ್ಟು ಹಣ ಹೆಚ್ಚಿಗೆ ಕೊಡಬೇಕು. ಈಗ ಮೂರರಲ್ಲಿ ಒಂದು ಭಾಗದಷ್ಟು ಸಹ ಕೊಡುತ್ತಿರುವುದಿಲ್ಲ. ಹೀಗೆ ಕಡಮೆ ಹಣ ದೊರೆಯುತ್ತಿರುವುದರಿಂದ ಸರಿಯಾದ equipment ಇಲ್ಲ. ಇದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಉಪಾಧ್ಯಾಯರಿಗೆ ಟ್ರೈನಿಂಗ್ ಕೊಡತಕ್ಕಂಥ ವ್ಯವಸ್ಥೆ ಇರಬೇಕು.

The House adjourned for Lunch at Three of the Clock, and re-assembled at Thirty Minutes past Three of the Clock.

[Mr SPEAKER in the Chair].

Mr. SPEAKER.—Before the Hon'ble Member commences his remarks, I would like to announce that this Demand will be finished today. We will go to the next Demand tomorrow. Therefore, I hope that the number of members offering to speak on this Demand will be restricted and also the time of the speeches will be curtailed.

ಶ್ರೀ ಕೆ. ಕೆಂಚಪ್ಪ.—ಸ್ವಾಮಿ, ಟ್ರೈನಿಂಗ್ ವಿಚಾರದಲ್ಲಿ ಒದಗಿಸಿರುವ ಗ್ರ್ಯಾಂಟುಗಳು ಬಹಳ ಕಡಮೆ. ಇದುವರೆಗೆ ಟ್ರೈನಿಂಗಿಗಾಗಿ ಮಾಡಿರುವ ವ್ಯವಸ್ಥೆ ಬಹಳ ಅಸಮರ್ಪಕವಾಗಿದೆ. ಈ ವರ್ಷ ಬಡ್ಜೆಟ್ಟಿನಲ್ಲಿ ಸ್ಪೆಷಲ್ ಗ್ರ್ಯಾಂಟು ಎಂದು 45 ಲಕ್ಷದ 93 ಸಾವಿರದ 800 ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದರಲ್ಲಿ Training Colleges for Men ಎಂಬ ಬಾಬಿಗೆ 77,500 ರೂಪಾಯಿಗಳನ್ನೂ Training Colleges for Women ಎಂಬ ಬಾಬಿಗೆ 28,500 ರೂಪಾಯಿಗಳನ್ನೂ, ಡಿಸ್ಟ್ರಿಕ್ಟ್ ನಾರ್ಮಲ್ ಟ್ರೈನಿಂಗ್ ಸ್ಕೂಲುಗಳಿಗಾಗಿ 90,400 ರೂಪಾಯಿಗಳನ್ನೂ ಒದಗಿಸಿದ್ದಾರೆ. ಈ ನಾರ್ಮಲ್ ಹೈಸ್ಕೂಲುಗಳು ಟ್ರೈನಿಂಗ್ ಆದ ಉಪಾಧ್ಯಾಯರುಗಳನ್ನು ತಯಾರು ಮಾಡುವುವು. ಇಲ್ಲಿ 90 ಮಂದಿ ಮಾತ್ರವಿದ್ದರೆ, ಸಾಕಷ್ಟು ಟ್ರೈನಿಂಗ್ ಆದ ಉಪಾಧ್ಯಾಯರುಗಳನ್ನು ತಯಾರಿಸಲು ಸಾಧ್ಯವಿದೆಯೇ? ಇದರಿಂದ ವಿದ್ಯಾಭ್ಯಾಸ ಕ್ರಮ ತುಂಬ ಹಿಂದೆ ಬಿದ್ದಿದೆ. ಆದ್ದರಿಂದ ಸಾಕಾದಷ್ಟು ಶಕ್ತಿ ನಮ್ಮ ವಿದ್ಯಾರ್ಥಿಗಳಲ್ಲಿ ಇಲ್ಲ ಎನ್ನುವುದಕ್ಕೆ ಮುಖ್ಯ ಕಾರಣಗಳಿವೆ. ಇನ್ನು ಜನಾನ ನಾರ್ಮಲ್ ಸ್ಕೂಲಿಗೆ 21,700 ರೂಪಾಯಿಗಳನ್ನೂ, ಟೀಚರ್ಸ್ ಅಂಡರ್ ಟ್ರೈನಿಂಗ್ ಬಾಬಿಗೆ 5,14,800 ರೂಪಾಯಿಗಳನ್ನೂ ಒದಗಿಸಿದ್ದಾರೆ. ಇವು ಕಣ್ಣಿಗೆ ಕಾಣತಕ್ಕವುಗಳಾಗಿವೆ. ಇದು ಬಹಳ ಕಡಮೆ ಇದೆ. ಇನ್ನು Junior Basic Training College for Primary School Teachers with practising basic schoolsಗಳಿಗಾಗಿ 4,70,300 ರೂಪಾಯಿಗಳನ್ನೂ Scheme in the Second Five Year Plan—Training of teachers of basic type ಬಾಬಿಗೆ 4,12,700 ರೂಪಾಯಿಗಳನ್ನೂ, Starting and development of post-graduate training in basic education ಬಾಬಿಗೆ 1,01,000 ರೂಪಾಯಿಗಳನ್ನೂ, Special training course for teachers and deputation for basic education ಬಾಬಿಗೆ 6,35,700 ರೂಪಾಯಿಗಳನ್ನೂ, Pre-basic training at Vidyanagar ಬಾಬಿಗೆ 3,900 ರೂಪಾಯಿಗಳನ್ನೂ Training of teachers of Multi-purpose High Schools ಬಾಬಿಗೆ 30,000 ರೂಪಾಯಿಗಳನ್ನು ಈ ವರ್ಷದ ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ. ನಿಜವಾಗಿಯೂ ಇದನ್ನು ಖರ್ಚು ಮಾಡುವ ಉದ್ದೇಶದಿಂದ ಮಾಡಿದ್ದಾರೆಯೇ? ಇದನ್ನು ನಿಜವಾಗಿ ಖರ್ಚು ಮಾಡುತ್ತಾರೆಯೇ? ಏತಕ್ಕೆಂದರೆ ಇದುವರೆಗೂ ನಡೆದುಕೊಂಡು ಬರತಕ್ಕ ಬಾಬುಗಳಿಗೆ ಅಷ್ಟು ಕಡಮೆ ಹಣ ಒದಗಿಸಿ, ಬೇರೆ ಖರ್ಚು ಮಾಡಲು ಸಾಧ್ಯವಾಗದೆ ಇರುವ ಕಡೆ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಫೈನಾನ್ಷಿಯಲ್ ಸೆಕ್ರೆಟರಿಯವರು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿಯಲ್ಲಿ ಮಾಡಿರುವ ರಿಮಾರ್ಕ್ಸನ್ನು ತಮ್ಮ ಗಮನಕ್ಕೆ ತರುತ್ತೇನೆ. ಆ ವರದಿಯ 27ನೆಯ ಪುಟದಲ್ಲಿ ಈ ರೀತಿ ಹೇಳಿದ್ದಾರೆ:

> "The Finance Secretary observed that large savings occurred in education budget every year because the department asked for grants which could not be utilised. The Director of Public Instruction explained that the savings was due to non-drawal of grants by aided

(ಶ್ರೀ ಕೆ. ಕೆಂಚಪ್ಪ.)

institutions and non-utilisation of grants for equipment due to late sanction."

ನಾನು ಇದಕ್ಕೆ ಏನು ಹೇಳುತ್ತೇನೆಂದರೆ, ಇದುವರೆಗೂ ನಡೆದುಕೊಂಡುಬಾರದೇ ಇರತಕ್ಕ ವಿಚಾರಗಳಿಗೋಸ್ಕರ ಹೆಚ್ಚಿಗೆ ಗ್ರಾಂಟು ಕೊಡುವ ಮೂಲಕ ಅವರು ಅದನ್ನು ಉಳಿಸಿಕೊಳ್ಳಲಿಕ್ಕೆ ಒಂದು ಪ್ರಯತ್ನ ಮಾಡಿದ್ದಾರೆ ಅವರು ವಿಪರೀತವಾಗಿ ಉಳಿಕೆ ಮಾಡಬೇಕೆಂಬ ಉದ್ದೇಶದಿಂದ ಭಾರೀ ಬಾಬುಗಳಿಗೇ ಖರ್ಚು ತೋರಿಸುತ್ತಿದ್ದಾರೆಂದು ನನಗನ್ನಿಸುತ್ತದೆ. ನಾನು ಈಗಲೂ ಹೇಳುತ್ತೇನೆ. ಟ್ರೈನಿಂಗ್ ಎನ್ನುವ ಮುಖ್ಯ ಬಾಬಿನಲ್ಲಿ ಇದುವರೆಗೂ ನಡೆಸಿಕೊಂಡು ಬಂದಿರತಕ್ಕ ವ್ಯವಸ್ಥೆಗಳಿಗೆ ಎಷ್ಟೋ ಕಡಮೆ ಖರ್ಚು ಮಾಡುತ್ತಾರೆ. ನನಗೆ ಕಾಲಾವಕಾಶ ಇಲ್ಲದಿದ್ದ ಕ್ಕೋಸ್ಕರ ಮುಖ್ಯಮುಖ್ಯವಾದ ವಿಷಯಗಳನ್ನು ಮಾತ್ರ ಕಳಕಳಿಯಿಂದ ಹೇಳುತ್ತಿದ್ದೇನೆ. ಅಂತೂ ವಿದ್ಯಾಭ್ಯಾಸ ಕ್ರಮದಲ್ಲಿ ನಮ್ಮಲ್ಲಿ ಅನುಸರಿಸಿಕೊಂಡು ಬಂದಿರುವ ನೀತಿ ಖಂಡಿತವಾಗಿಯೂ ಉತ್ತೇಜನದಾಯಕವಾಗಿ ಇಲ್ಲ. ನಮ್ಮ ವಿದ್ಯಾಭ್ಯಾಸದ ಸ್ಟ್ಯಾಂಡರ್ಡ್ ಬಹಳ ಕಡಮೆಯಾಗಿದೆ. ಇನ್ನು ಬಿಲ್ಡಿಂಗ್ ಗ್ರಾಂಟು ವಿಚಾರವಾಗಿ ಸ್ವಲ್ಪ ಪ್ರಸ್ತಾಪ ಮಾಡುತ್ತೇನೆ. ಎಷ್ಟೋ ಸ್ಕೂಲುಗಳಿಗೆ ಎಷ್ಟೋ ಬಿಲ್ಡಿಂಗ್ ಗ್ರಾಂಟು ಕೊಟ್ಟರೂ ಸಹಿತ ಡಿಸ್ಟ್ರಿಕ್ಟ್ ಬೋರ್ಡ್ ಸ್ಕೂಲುಗಳಿಗೆ ಏಕೆ ಗ್ರಾಂಟನ್ನು ಇನ್ನೂ ಕೊಟ್ಟಿಲ್ಲ? ಈಗ ಮುನಿಸಿಪಲ್ ಸ್ಕೂಲುಗಳಿಗೆ Lumpsum grant ವಗೈರೆಗಳಿಗೆ 2,73,158 ರೂಪಾಯಿಗಳ ಗ್ರಾಂಟನ್ನು ಒದಗಿಸಿದ್ದಾರೆ. ಡಿಸ್ಟ್ರಿಕ್ಟು ಬೋರ್ಡ್ ಹೈಸ್ಕೂಲುಗಳಿಗೆ ಅಷ್ಟು ಹಣವನ್ನು ಕೊಟ್ಟಿಲ್ಲ. ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲುಗಳಿಗೆ ಕೇವಲ 34,801 ರೂಪಾಯಿಗಳ ಗ್ರಾಂಟನ್ನು ಒದಗಿಸಿದ್ದಾರೆ. ರಾಯರಕೊಪ್ಪಾಳ್ ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲಿಗೆ ಮೂರು ಸಾವಿರ ರೂಪಾಯಿಗಳು, ಗೊರೂರು ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲಿಗೆ ನಾಲ್ಕು ಸಾವಿರ ರೂಪಾಯಿಗಳು, ಶ್ರೀನಿವಾಸಪುರ ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲಿಗೆ ಹತ್ತು ಸಾವಿರರೂಪಾಯಿಗಳು, ನರಸಿಂಹರಾಜಪುರ ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲಿಗೆ 7,801 ರೂಪಾಯಿಗಳು ಮತ್ತು ನಾಗವಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲಿಗೆ ಹತ್ತು ಸಾವಿರ ರೂಪಾಯಿಗಳು—ಹೀಗೆ ಮೊಬಲಗುಗಳನ್ನು ಒದಗಿಸಿದ್ದಾರೆ. ಆದರೆ ಚಿತ್ರದುರ್ಗ ಜಿಲ್ಲೆಯಲ್ಲಿ ಐದು ಹೈಸ್ಕೂಲುಗಳು ಅತ್ಯಾನ್ನತವಾದ ರೀತಿಯಲ್ಲಿ ನಡೆಯುತ್ತಿವೆ. ಅಲ್ಲಿನ ಜನಗಳು ಉದಾರವಾಗಿ 18 ಸಾವಿರ ರೂಪಾಯಿಗಳನ್ನು ಸಹಾಯ ಮಾಡಿದುದರ ದೆಸೆಯಿಂದ ಸ್ಕೂಲುಗಳು ಚೆನ್ನಾಗಿ ನಡೆಯುತ್ತಿವೆ. ನಿಮ್ಮ ಕೋಟಾ ಕೊಡದೇ ಇರಲು ಕಾರಣವೇನು? ಪ್ರೈಮರಿ ವಿದ್ಯಾಭ್ಯಾಸದ ವಿಚಾರವಾಗಿ ಕೆಲವು ವಿಷಯಗಳನ್ನು ಹೇಳಲು ಕೊನೆಗೆ ಇಟ್ಟುಕೊಂಡಿದ್ದೇನೆ. ಅದನ್ನು ಒಂದೆರಡು ಮಾತುಗಳಲ್ಲಿ ಹೇಳುತ್ತೇನೆ. ನಮ್ಮ ಪ್ರೈಮರಿ ಸ್ಕೂಲುಗಳ ವಿದ್ಯಾಭ್ಯಾಸ ವಿಚಾರದಲ್ಲಿ ನಮ್ಮ ಸರ್ಕಾರದವರಿಗೆ ಆಗಿರತಕ್ಕ ಉಪೇಕ್ಷೆ ಇನ್ನಾವ ಬಾಬಿನಲ್ಲೂ ಆಗಿಲ್ಲ. ವಿದ್ಯಾಭ್ಯಾಸವೇ ದೇಶದ ಪ್ರಗತಿಗೆ ಮೂಲಕಾರಣ. ಮೂಲಕಾರಣವಾಗಿರತಕ್ಕ ಮತ್ತು ಪ್ರಗತಿದಾಯಕ ಕಾರ್ಯವಾಗಿರತಕ್ಕ ಈ ಬಾಬಿಗೆ ಹೆಚ್ಚು ಗಮನ ಕೊಡುತ್ತಾ ಇಲ್ಲ. ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಪ್ರೈಮರಿ ಸ್ಕೂಲುಗಳನ್ನು ಹೆಚ್ಚಿಗೆ ಮಾಡಲೇ ಇಲ್ಲ. ಕೇವಲ ಏನೂ ಮಾಡಲೇ ಇಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಇರತಕ್ಕ ಸ್ಕೂಲುಗಳನ್ನು ವಜಾ ಮಾಡಿ, ಹೊಸದಾಗಿ ಕಟ್ಟಿರತಕ್ಕ ಸ್ಕೂಲುಗಳನ್ನು ಈಗ ಕೊಟ್ಟಿರಬಹುದೋ ಏನೋ? ಆ ದೃಷ್ಟಿಯಿಂದ ತಮಗೆ ಒಂದು ನಿದರ್ಶನವನ್ನು ಕೊಡುತ್ತೇನೆ. ಅದನ್ನು ಅತಿ ವಿಷಾದದಿಂದ ಹೇಳಬೇಕಾಗಿದೆ. ನಿನ್ನೆ ದಿವಸವೋ ಅಥವಾ ಮೊನ್ನೆ ದಿವಸವೋ ನಮ್ಮ ಸಂಸ್ಥಾನದಲ್ಲಿರತಕ್ಕ 5,897 ಹಳ್ಳಿಗಳ ಪೈಕಿ ಎಷ್ಟು ಹಳ್ಳಿಗಳಲ್ಲಿ ಸ್ಕೂಲುಗಳಿವೆ, ಎಷ್ಟು ಹಳ್ಳಿಗಳಲ್ಲಿ ಸ್ಕೂಲುಗಳಿಲ್ಲ ಎಂದು ಕೇಳಿದರೆ, ಅಂತಹ ಸ್ಟ್ಯಾಟಿಸ್ಟಿಕ್ಸ್ ಇಲಾಖೆಯಲ್ಲಿ ಇಲ್ಲವೆಂದು ಹೇಳಿದರು. ಆದ್ದರಿಂದ ಈಗ ಇರುವುದಕ್ಕಿಂತ ಇನ್ನೂ ಕನಿಷ್ಠವಾಗಿದೆ ಎಂದು ತಿಳಿದು ಬರುತ್ತದೆ. ಅಂಕಿ ಅಂಶಗಳು ಬೊಂಬಾಯಿ ಕರ್ಣಾಟಕ ಪ್ರಾಂತದ್ದು ಇದೆ. ಮೈಸೂರು ಸಂಸ್ಥಾನಕ್ಕೆ ಇಲ್ಲವೆಂದು ಹೇಳುತ್ತಾರೆ.

ಅಧ್ಯಕ್ಷರು.—ಹಳೆಯ ಮೈಸೂರು ವಿಷಯ ಎಂದು ಹೇಳಿ. ಇಲ್ಲದಿದ್ದರೆ ಈಗಿನ ಮೈಸೂರು ರಾಜ್ಯಕ್ಕೆ ಸಂಬಂಧಪಟ್ಟಂತೆ ಹೇಳುತ್ತಿದ್ದಾರೆಂದು ಇತರರು ತಿಳಿದುಕೊಳ್ಳುತ್ತಾರೆ. ಈಗ ನೀವು ಮೈಸೂರು ಸಂಸ್ಥಾನ ಎನ್ನುವುದಕ್ಕೆ ಬದಲಾಗಿ ಮೈಸೂರು ರಾಜ್ಯ ಎಂಬುದಾಗಿ ಕರೆಯಿರಿ.

ಶ್ರೀ ಕೆ. ಕೆಂಚಪ್ಪ.—ಆಗಲಿ, ಮೈಸೂರು ರಾಜ್ಯ ಎಂದೇ ಇಟ್ಟುಕೊಳ್ಳೋಣ.

ಈಗ ನಮ್ಮ ರಾಜ್ಯದಲ್ಲಿರತಕ್ಕ ಒಟ್ಟು 27,897 ಹಳ್ಳಿಗಳ ಪೈಕಿ ಎಷ್ಟು ಹಳ್ಳಿಗಳಲ್ಲಿ ಸ್ಕೂಲುಗಳಿವೆ, ಎಷ್ಟು ಹಳ್ಳಿಗಳಲ್ಲಿ ಸ್ಕೂಲುಗಳು ಇಲ್ಲ ಎಂಬುದನ್ನು ಪರಿಶೀಲಿಸಿದರೆ ನಾವು ಹಳ್ಳಿಗಾಡಿನ ಜನರ ವಿಚಾರದಲ್ಲಿ ಎಷ್ಟು ಸದ್ಭಾವನೆಯನ್ನು ಇಟ್ಟುಕೊಂಡಿದ್ದೇವೆ ಎಂಬುದು ಗೊತ್ತಾಗುತ್ತದೆ. ಈಗ ತಾನೆ ಮಂತ್ರಿಗಳು ಹೇಳಿದ ಹಾಗೆ ಸಂಸ್ಥಾನದಲ್ಲಿ ಒಟ್ಟು 22,254 ಪ್ರೈಮರಿ ಸ್ಕೂಲುಗಳಿವೆ. ಇವುಗಳಲ್ಲಿ ಟೌನ್ ಮತ್ತು ಕಾರ್ಪೋರೇಷನ್‌ಗಳಲ್ಲಿರುವ ⅔ ಭಾಗ ಎಂದರೆ 14,886 ಸ್ಕೂಲುಗಳು ಹೋದರೆ ಉಳಿದಿರತಕ್ಕದ್ದು 7,418 ಸ್ಕೂಲುಗಳು ಹಳ್ಳಿಗಳಿಗೆ ಇರುತ್ತವೆ. 1849 ಹಳ್ಳಿಗಳಲ್ಲಿ ಸ್ಕೂಲುಗಳು ಇಲ್ಲ ಎಂದು ಹೇಳಬೇಕಾಗಿ ಬರುತ್ತದೆ. ಆದ್ದರಿಂದ ಈಗ ಇನ್ನು 18,479 ಹಳ್ಳಿಗಳಿಗೆ ಸ್ಕೂಲುಗಳನ್ನು ಕೊಡಬೇಕಾಗಿದೆ. 365 ಸ್ಕೂಲುಗಳನ್ನು ಈ ವರ್ಷ ಕೊಡುತ್ತೇವೆಂದು ಮಂತ್ರಿಗಳು ಮೊನ್ನೆ ಹೇಳಿದ್ದಾರೆ. ಇದೇ ರೀತಿ ಮುಂದುವರಿಸಿಕೊಂಡು ಹೋಗುತ್ತಿದ್ದರೆ ಎಲ್ಲಾ ಹಳ್ಳಿಗಳಲ್ಲೂ ಸ್ಕೂಲು ಬರಬೇಕಾದರೆ ಇನ್ನು 50 ವರ್ಷಗಳಾದರೂ ಬೇಕು. ಈ ಬಡ್ಜೆಟ್ಟಿನಲ್ಲಿ ಹಳ್ಳಿಯ ಪ್ರಾಥಮಿಕ ಶಾಲೆಗಳಿಗೋಸ್ಕರ, ಪ್ರಾಥಮಿಕ ಶಾಲೆಗಳ ಕಟ್ಟಡಕ್ಕೋಸ್ಕರ ಮೂರು ಕಾಸೂ ಸಹ ಪ್ರೊವೈಡ್ ಮಾಡಿರುವ ಹಾಗೆ ಕಂಡುಬರುತ್ತಿಲ್ಲ. ಬಡ್ಜೆಟ್ಟಿನಲ್ಲಿ ಪ್ರೈಮರಿ ಸ್ಕೂಲು, ಮಿಡ್ಲ್‌ಸ್ಕೂಲು ಮತ್ತು ಹೈಸ್ಕೂಲ್ ಬಿಲ್ಡಿಂಗಿಗೋಸ್ಕರ 25,36,000 ರೂಪಾಯಿಗಳನ್ನು ಮೀಸಲಾಗಿಟ್ಟಿದ್ದೇವೆಂದು ನಮ್ಮ ಮಾನ್ಯ ಮಂತ್ರಿಗಳು ಹೇಳಿದರು. ಎಲ್ಲಿದೆ? ಕನ್ನಡಕ ಹಾಕಿಕೊಂಡು ಎಲ್ಲಾ ನೋಡಿದರೂ ಈ ಬಡ್ಜೆಟ್ಟಿನಲ್ಲಿ ಆ ವಿವರಗಳು ಸಿಕ್ಕಲಿಲ್ಲ. ಈ ದೃಷ್ಟಿಯಿಂದ ಎಷ್ಟುಮಟ್ಟಿಗೆ ಹಳ್ಳಿಗಳ ಸ್ಕೂಲುಗಳ ವಿಚಾರದಲ್ಲಿ ಸರ್ಕಾರದವರಿಗೆ ಆಸಕ್ತಿ ಇದೆಯೆಂಬುದನ್ನು ಕಳಕಳಿಯಿಂದ ಕೇಳುತ್ತಿದ್ದೇನೆ. ಎಷ್ಟೊಂದು ಟೌನುಗಳಲ್ಲಿ ಖರ್ಚುಮಾಡುತ್ತಿದ್ದಾರೆಯೋ ಅಷ್ಟನ್ನೂ ಹಳ್ಳಿಗಳ ಸ್ಕೂಲುಗಳಿಗೆ ಖರ್ಚುಮಾಡುತ್ತಾ ಇಲ್ಲ. ಇನ್ನು ಒಂದು ಅಂಶವನ್ನು ತಮಾಷೆಯಾಗಿ ಹೇಳಿದ ಹಾಗಿದೆ. 750 ರೂಪಾಯಿಗಳ ಖರ್ಚಿನಿಂದ ಒಂದು ಸ್ಕೂಲು ಕಟ್ಟಡದ ಸ್ಕೀಮನ್ನು ಮಾಡಿದ್ದೇವೆಂದು ಹೇಳಿದ್ದಾರೆ.

ಉಳಿದ ಹಣ ಹಳ್ಳಿಗಾಡಿನ ಜನ ಕೊಡಬೇಕಂತೆ! ಉಡುವುದಕ್ಕೆ ಬಟ್ಟೆಯಿಲ್ಲ. ತಿನ್ನುವುದಕ್ಕೆ ಊಟವಿಲ್ಲ ಅಂತಹ ವರಮೇಲೆಯೇ ಟ್ಯಾಕ್ಸ್ ಹಾಕಬೇಕೆಂದು ಹೇಳುತ್ತಾರೆ. ಇದು ಎಷ್ಟು ಚೆನ್ನಾಗಿದೆ? ಆದರೆ ಟೌನುಗಳಲ್ಲಿ ಸ್ಕೂಲುಗಳನ್ನು ಸರ್ಕಾರದ ಖರ್ಚಿನಲ್ಲಿ ಕಟ್ಟಬೇಕು, ಹಳ್ಳಿಯಕಡೆ ಸ್ಕೂಲುಗಳ ಅವಶ್ಯಕತೆಗೆ ಮೂರು ಕಾಸು ಖರ್ಚು ಮಾಡಬಾರದು, ಎನ್ನುವುದು ಯಾವನ್ಯಾಯ? 750 ರೂಪಾಯಿಗಳನ್ನು ಖರ್ಚುಮಾಡಿ ಒಂದು ಸ್ಕೂಲು ಕಟ್ಟಡ ಕಟ್ಟಬೇಕೆಂಬ ಸಲಹೆಯನ್ನು ಮಾಡಿದ್ದಾರೆಯೇ? ಏನೋ ಒಂದು ಕಣ್ಣು ಒರೆಸುವ ರೀತಿಯಲ್ಲಿ ಮಾಡಿದ್ದಾರೆಂದು ಕಾಣುತ್ತದೆ.

ಇನ್ನು ಉಪಾಧ್ಯಾಯರ ಸಂಬಳಸಾರಿಗೆಗಳ ವಿಚಾರವಾಗಿ ಪೇಸ್ಟ್ರಕ್ಚರ್ ಕಮಿಟಿಯವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಅದನ್ನು ಓದುವುದಕ್ಕೆ ನನಗೆ ವೇಳೆಯಿಲ್ಲ. ಆದರೆ ಒಂದು ವಿಚಾರವನ್ನು ಹೇಳುತ್ತೇನೆ. ಈ ವರ್ಷ ರಿವಿಷನ್ ಆಫ್ ಪೇ ಬಗ್ಗೆ 87 ಲಕ್ಷ ರೂಪಾಯಿಗಳನ್ನು ಲಂಪ್‌ಸಮ್ ಆಗಿ ಎಲಿಮೆಂಟರಿ ಸ್ಕೂಲುಗಳ ಉಪಾಧ್ಯಾಯರಿಗೆ ಇಟ್ಟುಕೊಂಡಿದ್ದಾರೆ. ಮೀಸಲಾಗಿಟ್ಟಿರುವುದು ಬಹಳ ಕಡಮೆ. ಅದನ್ನಾದರೂ ಅವರಿಗೆ ಕೊಡುವುದರ ಮೂಲಕ ಸಮಾಧಾನಪಡಿಸಿ. ಪ್ರೈಮರಿ ಸ್ಕೂಲುಗಳ ಉಪಾಧ್ಯಾಯರು ಈ ವಿಷಯದಲ್ಲಿ ತುಂಬ ಅಸಮಾಧಾನವಾಗಿದ್ದಾರೆ. ಮನಸ್ಸಿಟ್ಟು ಪಾಠ ಹೇಳುವ ಸ್ಥಿತಿಯಲ್ಲಿಲ್ಲ. ಅವರಿಗೆ ಈ ದುಡ್ಡನ್ನು ಈ ವರ್ಷವೇ ಪೂರ್ತಿಯಾಗಿ ಕೊಟ್ಟುಬಿಡಿ. ಈಗಿನ ವಿದ್ಯಾಭ್ಯಾಸಕ್ರಮವನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. Multi-purpose ಹೈಸ್ಕೂಲುಗಳಲ್ಲಿ ಶಿಕ್ಷಣ ಸಮರ್ಪಕವಾಗಿದೆ. ಸೆಕೆಂಡರಿ ಸ್ಕೂಲು ಸ್ಟ್ಯಾಂಡರ್ಡ್ ಮುಗಿದುಹೋದ ಮೇಲೆ ಸ್ವಾವಲಂಬನ ಪದ್ಧತಿಯಿಂದ ಜೀವನ ಮಾಡಲು ಸಾಧ್ಯವಾಗದೆ ಇರುವ ರೀತಿಯಲ್ಲಿ ಮಾಡುತ್ತಿದ್ದಾರೆ. ಸೆಕೆಂಡರಿ ಎಜುಕೇಷನ್ ಆದಮೇಲೆ ಟೆಕ್ನಿಕಲ್ ಕಾಲೇಜಿಗೆ ಹೋಗಲು ಅವರಿಗೆ ಅಷ್ಟಾಗಿ ಅರ್ಹತೆ ಇರುವುದಿಲ್ಲ. ಅಂತಹ ವ್ಯವಸ್ಥೆಮಾಡಿದ್ದಾರೆ. ಅದನ್ನು ಸಮರ್ಪಕವಾಗಿ ಮಾಡಿ ದೇಶವು ಉನ್ನತ ಸ್ಥಿತಿಗೆ ಬರುವಹಾಗೆ ಮಾಡಿ. ಬಡ್ಜೆಟ್ಟಿನಲ್ಲಿ ಅನಾವಶ್ಯಕ ಬಾಬುಗಳು ಬೇಕಾದಷ್ಟಿವೆ. ಉದಾಹರಣೆಗೆ ಸಂಸ್ಕೃತಿ ಪ್ರಚಾರ, ಸಮಾಜ ಕಲ್ಯಾಣ ಕೇಂದ್ರಕ್ಕಾಗಿ 5 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇನ್ನು ವಯಸ್ಕರ ವಿದ್ಯಾಭ್ಯಾಸ, ಸೇವಾದಳ ಮುಂತಾದುವು ಎಷ್ಟೋ ಇವೆ. ಅವೆಲ್ಲಾ ಏತಕ್ಕೋ? ನನಗೆ ಗೊತ್ತಾಗುವುದಿಲ್ಲ. ಮುಖ್ಯವಾಗಿ ಅವುಗಳನ್ನೆಲ್ಲಾ ವಜಾಮಾಡಿ, ವಿದ್ಯಾಭ್ಯಾಸ ಅಭಿವೃದ್ಧಿ ಮಾಡುವರೀತಿಯಲ್ಲಿ ಮಾರ್ಪಾಟಾಗಲು ಮತ್ತು ದೇಶದ ಪ್ರಗತಿಯಾಗಲು ನಮ್ಮ ಸರ್ಕಾರದವರು ಕಾರಣರಾಗಬೇಕೆಂದು ಹೇಳುತ್ತೇನೆ.

*Dr. T. PARTHASARATHY (Malleswaram).—Mr. Speaker, while speaking on the Demand for Education I would like to bring to your kind notice the importance of technical education in Universities and High Schools. The way in which the young men are trained in the high schools and colleges makes them almost unfit for their existence in their normal life. After passing the Intermediate stage, the student will not find a place either in the colleges for science or technical colleges. He will not be permitted to enter into any college. You will be letting loose a person with half education. Therefore, I would suggest that all the high schools may be converted into multi-purpose schools so that every student that comes out of the high school would be equipped with some sort of to that he can trade and make use of the knowledge he gained at school in case he discontinues further study for some reason or other.

Coming to the question of appointment of Professors and Teachers, I would like to bring to the notice of the Minister that appointment of teaching staff both to high schools and colleges is based on no principle, because in several cases persons who are not capable of teaching are appointed. There is a vast difference between a person who knows a thing and a person who can impart it to others. A person may know a thing; but, to impart it to another person is a gift of individuals. As I have observed, communal and other factors come in the way of appointment of a member of teachers and professors both in the high schools and colleges. I appreciate that certain communities should be encouraged. But I do not wish that they should be encouraged in the educational institutions where our children or your children are trained for their living and for taking part in the national activities. If there is a person who is capable of teaching, let him belong to any community, he should be given preference over others who do not know how to speak, in spite of their acquisition of several qualifications, in the alphabetical order. Even in upgrading teachers to higher position, I have found that communal question predominates and thereby the standard of education has deteriorated a great deal when compared to what prevailed two or three decades ago.

Later on, coming to primary education, I would like to bring to the notice of the Hon'ble Minister that primary education given to our children does not in any way help in improving the standard of education. Primary education, I feel, should be of a different type

(DR. T. PARTHASARATHY.)

by which the faculties of the children should be correctly judged. The type of education that is given to children in primary schools will not make the child learn anything at all. The standard of teachers who conduct primary schools is very low. They cannot write two sentences in Kannada or in English. Their only hobby is participating in local politics instead of imparting knowledge to our children. Moreover, I observe in front of educational offices a number of teachers waiting for cancellation of transfers. I do not know how they sanction leave in the institutions concerned and how non-officials recommend their cases for cancellation of transfers. This system of cancellation of transfers on the recommendation of anybody should be avoided.

Regarding physical education, I want to impress upon the Hon'ble Minister that it is almost forgotten in our State and I think the sort of physical education that is imparted in these educational institutions improve neither the brain nor the health. I would like the Hon'ble Minister to make it compulsory in every Institution and to make it a compulsory examination subject. Not that he should vindicate himself before physical experts, but it would make the student anxious to attend physical classes. Another difficulty in physical education is that it is imparted in the Institution itself and by the time the student goes to the Institution either cycling or walking he will be exhausted with the result that he thinks of avoiding the physical exercises. I would like the Hon'ble Minister to see that physical education is imparted in every area for 500 students so that the students should receive physical education in the locality where then live. The present standard of health is applaling. We are undertaking great developmental projects and I think we are handing them over to a nation of sick patients. Unless we thoroughly develop the healthy constitution of our students, I do not think the future generation will enjoy all the benefits of these Plans.

Then coming to the system of examinations that is adopted in high schools and colleges, I should say, I am really wonderstruck as to how the student who undergoes the course in 8 months in such greater detail can vindicate all his knowledge in six hours. I have found from experience that intelligent students fail and some freak students who imagine questions pass. The system of examinations conducted in foreign countries is quite different. Examinations are conducted in different parts of the year and a student after attaining proficiency can appear for examination on any subject immediately thereafter. But if a student is examined after 8 months' study, he cannot have a compressed knowledge of what all he learnt and write an epitome of that in six hours. I do not think this type of examination is correct. I doubt, whether the examiners themselves, know the correct answers. I have found that in many instances, the examiners themselves do not know the answers. It happens that they should be taught as to what they should correct. The examiners therefore should be correctly selected so that student's quality and merit may be classified according to his progress. Regarding text books, I wish the Government take particular interest in subsidising them. According to the Finance Minister's latest taxation proposals' even the turnover on publications is taxed. Taxing textbooks is something like cutting at the very root of education. In fact, every book should be subsidised and sold at half the rates. The general books should be distributed free to students. With regard to primary education, I wish the Government issues text books free of cost to young children, especially to the poor. I have heard about the scheme of adult education sponsored by Government. I think it is mostly a farce. Very little result has been achieved except that the men concerned in continuing adult education got themselves less educated. I would like to impress upon the Government that adult education should be reorientated and according to the necessities of groups of people

certain new methods should be evolved. Visual education and other things should be encouraged so that an illiterate man in the street who has not had an opportunity of early education may be benefited by the facilities that the Government are affording to the people. With regard to admission to schools and colleges, even before the student enters the college, the communal instinct is inculcated in the student. Sometimes we find on the notice board of the colleges that one belongs to such and such a backward or forward community. Every person who has got a basic intellect and who can absorb knowledge and other faculties should be at liberty to be admitted to colleges, whether he belongs to the backward or forward community. If we select the students on the basis of community and forget the aspect of merit, I do not think the purpose of education would be served. They should insist that every student should be of a particular standard of intellect. But if we announce that even if they get a lesser percentage still they can enter a college, the iniciative of the student in the earlier classes will be lost and he will have the feeling that even if he gets lesser marks he can enter the college. That will be the sort of attitude on the part of the student. In the technical colleges, especially in the medical college, unless a student has got proficiency, he should not be admitted. After they pass out of the medical institutions, we are to them going to entrust the lives of our children and if the doctors are not proficient, we will be sacrificing many lives of patients. So, unless a student attains extreme efficiency, he should not be admitted to medical college. With regard to other colleges, I do not mind. But the purpose of education will not be served if students with lesser marks are entertained in medical and engineering colleges. I thank you, Mr. Speaker, for having given me a chance to speak.

4 P.M.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಮಂಡಿಸಿರತಕ್ಕ Education Demandನ್ನು ಸ್ವಾಗತಿಸುತ್ತಾ ಇದೇ ಸಮಯದಲ್ಲಿ ನಮ್ಮ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸದ ಇಲಾಖೆಯಲ್ಲಾಗುತ್ತಿರುವ ಕಷ್ಟಗಳ ವೈಚಿತ್ರ್ಯವನ್ನು ಸರಕಾರದವರ ಮುಂದಿಟ್ಟು ಅದನ್ನು ಪರಿಹರಿಸಬೇಕೆಂದು ಕೇಳಲು ನಿಂತಿದ್ದೇನೆ.

ಮೊದಲನೆಯದಾಗಿ, ಈಗ ನಮ್ಮ ಮೈಸೂರು ಸಿಟಿಯಲ್ಲಿ ಹೆಣ್ಣುಮಕ್ಕಳಿಗಾಗಿ ಒಂದು ಕಾಲೇಜು ಇದೆ. ಇದು ಮೊದಲು Public Library ಯಾಗಿತ್ತು. ಅದನ್ನು ತೆಗೆದು ಕಾಲೇಜಾಗಿ ಮಾಡಿದ್ದಾರೆ. ಇದನ್ನು Shift ಮಾಡುವಾಗ 300 ಜನ ಹೆಣ್ಣುಮಕ್ಕಳಿದ್ದರು ಈಗ 1,200 ಜನ ಮಕ್ಕಳಿದ್ದಾರೆ. ಅಲ್ಲದೆ ಈ ಲೈಬ್ರರಿ ಬಿಲ್ಡಿಂಗಿನಲ್ಲಿ ಬಹಳ ಚಿಕ್ಕ ಚಿಕ್ಕ ರೂಮುಗಳಿವೆ. 300 ಜನ ಹುಡುಗಿಯರಿಗೆ ಇಲ್ಲಿ ಜಾಗ ಸಾಕಾಗುತ್ತಿರಲಿಲ್ಲವೆಂದು ಹಿಂದೆಯೇ ಇದನ್ನು shift ಮಾಡಿದಾಗಲೇ ತಿಳಿದಿತ್ತು. ಹಾಗಿದ್ದರೂ ಕೂಡ ಈಗ 1,200 ಹುಡುಗಿಯರು ಇದ್ದರೂ ಈ ಕಾಲೇಜನ್ನು ದೊಡ್ಡದು ಮಾಡದಿರುವುದು ಬಹಳ ಅನ್ಯಾಯ.

ಅಲ್ಲದೆ ಸರಕಾರದವರು P.C.M., H.E.L., H.E.E., C.B.Z. ಹೀಗೆ ಇನ್ನೇನೋ ಅನೇಕ combination ಗಳನ್ನು ಮಕ್ಕಳು ತೆಗೆದುಕೊಳ್ಳಲು provision ಮಾಡಿದ್ದಾರೆ. ಅದರಲ್ಲೂ Science ತೆಗೆದುಕೊಂಡಿರುವವರ ಪರಿಸ್ಥಿತಿ ನೋಡಿದ್ದೇ ಆದರೆ 1,200 ಜನ ಹುಡುಗಿಯರು ಇದ್ದು, ಇದು first grade college ಆಗಿದ್ದರೂಕೂಡ ಇದಕ್ಕೆ ಒಂದು Laboratory ಯನ್ನು ಕೊಟ್ಟಿಲ್ಲ. Science subject ತೆಗೆದುಕೊಂಡಿರುವ ಹುಡುಗಿಯರು ಈ ಲ್ಯಾಬರೇಟರಿ ವರ್ಕ್‌ಗಾಗಿ ಯುವರಾಜಾ ಕಾಲೇಜಿಗೆ ಹೋಗಬೇಕಾಗಿದೆ. ಹೀಗೆ ಹೋಗುವುದಕ್ಕೆ ಮುಂಚೆ ಈ ಕಾಲೇಜಿನಿಂದ ಯುವರಾಜಾ ಕಾಲೇಜಿಗೆ ಬರೆಯಬೇಕು. ಅವರೇನೋ ದೊಡ್ಡಮನಸ್ಸು ಮಾಡಿ ಅವರ ಕಾಲೇಜಿನ ಹುಡುಗರಿಗೇ ಜಾಗವಿಲ್ಲ ಎಂದೋ ಏನೋ ಹೇಳಿ ಕೊನೆಗೆ ಪರವಾಗಿಲ್ಲ ಐವತ್ತು ಜನ ಹುಡುಗಿಯರೂ ಬರಲಿ ಎಂದು ಬರೆದರೆ ಆಗ ಇಲ್ಲಿಂದ ಈ ಲ್ಯಾಬೊರೇಟರಿ work ಗಾಗಿ ಆ ಕಾಲೇಜಿಗೆ ಹೋಗಬೇಕು. ಇದೊಂದು ದೊಡ್ಡ ಕೊರತೆಯಾಗಿದೆ. ಹೀಗೆ ಈ Science subjectನ್ನು ತೆಗೆದು ಕೊಂಡವರು ಇಲ್ಲಿಂದ ಅಲ್ಲಿಗೆ ಅಲ್ಲಿಂದ ಈ ಕಾಲೇಜಿಗೆ ಅಲೆಯಬೇಕಾಗಿದೆ. ಹೀಗಿದೆ ಈ Science ಹುಡುಗಿಯರ ಸ್ಥಿತಿ.

ಇವರ ಕತೆಯನ್ನು ಹೇಳಬೇಕಾದರೆ ದಿವಸವೆಲ್ಲ ಆಗುತ್ತದೆ. ಅಲ್ಲದೆ ಇಲ್ಲಿರುವ ರೂಮುಗಳು ಬಹಳ ಚಿಕ್ಕಚಿಕ್ಕವಾಗಿವೆ. Daily classes ನಲ್ಲಿ ಒಂದೊಂದು ಸೆಕ್ಷನ್ನಿನಲ್ಲಿ 100 ಜನ ಹುಡುಗಿಯರಿದ್ದಾರೆ. ಅವರಲ್ಲಿ ಕೆಲವರು ನಿಂತಿರುತ್ತಾರೆ, ಕೆಲವರು ಡೆಸ್ಕ್ ಮೇಲೆ ಕೂತಿರುತ್ತಾರೆ, ಮತ್ತೆ ಕೆಲವರು ಪ್ಲಾಟ್ ಫಾರಂಗಳ ಮೇಲೆ ಕುಳಿತಿರುತ್ತಾರೆ. ಎರಡು ಕುರ್ಚಿಗಳನ್ನು ಸೇರಿಸಿ ನಾಲ್ಕು-ಐದು ಜನ ಕುಳಿತಿರುತ್ತಾರೆ. ಅಲ್ಲದೆ ಒಂದೊಂದುಸಾರಿ corridor ನಲ್ಲಿ ಕೂಡ ನಿಂತು ಲೆಕ್ಚರ್ ಕೇಳುತ್ತಾರೆ ಮತ್ತು ನೋಟ್ಸ್ ತೆಗೆದುಕೊಳ್ಳುತ್ತಾರೆ. ಅಲ್ಲದೆ Library ಯನ್ನು ನೋಡೋಣವೆಂದರೆ ಅದೂ ಕೂಡ ಬಹಳ ಚಿಕ್ಕದು. ಅಲ್ಲಿಗೆ ಏನಾದರೂ Reference work ಗಾಗಿ ಈ ಹುಡುಗಿಯರು ಹೋಗೋಣವೆಂದರೆ ಎಂಟು, ಹತ್ತು ಜನ ಹುಡುಗಿಯರು ಒಟ್ಟಿಗೆ ಹೋಗಲಾಗುವುದಿಲ್ಲ. ಅಲ್ಲಿ ಐದಾರು ಜನಗಳ ಮೇಲೆ ಕುಳಿತುಕೊಳ್ಳುವುದಕ್ಕಾಗುವುದೇ ಇಲ್ಲ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ.)

ಇನ್ನು Music College ನ ವಿಷಯ. ಇದನ್ನು ಏಕೆ ಇಟ್ಟಿದ್ದಾರೋ ಎಂದು ಹೇಳಬೇಕಾಗಿದೆ. Music combination ತೆಗೆದುಕೊಳ್ಳಲು provision ಏನೋ ಇದೆ. ಆದರೆ ಈ class ಈಗ ಮಹಾರಾಣೀ ಕಾಲೇಜು ಹಾಸ್ಟಲ್ಲಿನಲ್ಲಿರುವ ಎರಡು ರೂಮುಗಳಲ್ಲಿ ನಡೆಯಬೇಕು. ಓದತಕ್ಕ ಹುಡುಗಿಯರಿಗೇ ಜಾಗವಿಲ್ಲ. ಇನ್ನು ಸಂಗೀತಾಭ್ಯಾಸ ಮಾಡುವವರಿಗೆ ಕಾಲೇಜಿನಲ್ಲಿ ಎಲ್ಲಿ ಜಾಗ ಕೊಟ್ಟಾರು? ಇರುವ ನಾಲ್ಕಾರು ರೂಮುಗಳಲ್ಲಿ ಎರಡು ರೂಮುಗಳು ಈ ಸಂಗೀತದ ಹುಡುಗಿಯರಿಗಾಗಿವೆ.

ಈ Music class ನಲ್ಲಿರುವ Teaching Staff ನಲ್ಲಿ ಒಬ್ಬರು Permanent Lecturer, ಮತ್ತು ಮೂರುಜನ Part-time Lecturers ಇದ್ದಾರೆ. ಇಲ್ಲಿ ಪಾಠ ಹೇಗೆ ನಡೆಯುತ್ತಿದೆ ಎಂಬುದನ್ನು ಯಾರೂ ಕೇಳಬೇಕಾಗಿಲ್ಲ. ಹೊರಗಿನಿಂದ ಯಾರಾದರೂ Examiners ಬಂದು ಇಲ್ಲಿಯ ವಿದ್ಯಾರ್ಥಿನಿಯರನ್ನು Examine ಮಾಡಿಬಿಟ್ಟರೆ ದೇವರೇಗತಿ, ಇವರನ್ನು ಹೇಗೆ ಒಪ್ಪುತ್ತಾರೋ ನನಗೆ ಬೇರೆ ತಿಳಿಯುವುದಿಲ್ಲ. ಇಲ್ಲಿ ಹೇಳಿಕೊಡುತ್ತಿರುವ ಪಾಠದ ರೀತಿ ಆ ರೀತಿಯಾಗಿದೆ. ಅಲ್ಲದೆ ಇದಕ್ಕೆ ತಕ್ಕಹಾಗೆ ಇಲ್ಲಿ ಒಬ್ಬ Assistant Professor ಇರಬೇಡವೇ, ಒಬ್ಬರು Professor ಇರಬೇಡವೇ?

ಈಗ ಎಷ್ಟೋಜನ ಹೊರಗಡೆಯಿಂದ ಬರುತ್ತಾರೆ. ಅವರೇನಾದರೂ "Address" ಮಾಡಲು ಈ ಕಾಲೇಜಿಗೆ ಬಂದರೆ ಇಲ್ಲಿ ಅಡ್ರೆಸ್ಸು ಮಾಡುವುದಕ್ಕೆ ಸರಿಯಾದ Assembly Hall ಇಲ್ಲವೇ ಇಲ್ಲ. ಪಾಠಕ್ಕೇ ಜಾಗವಿಲ್ಲ. ಇನ್ನು ಅಸೆಂಬ್ಲಿ ಹಾಲಿಗೆ ಅವಕಾಶವೆಲ್ಲಿಂದ ಬರುತ್ತದೆ?

ಇನ್ನು ಮಕ್ಕಳು ತಿಂಡಿತಿನ್ನುವುದಕ್ಕೆ ಜಾಗವಂತೂ ಇಲ್ಲವೇ ಇಲ್ಲ. ಅವರು ಹೊರಗಡೆ ಬೀದಿಯಲ್ಲಿ ಕುಳಿತು ತಿನ್ನಬೇಕು. ಹಾಗೆ ತಿನ್ನುವಾಗ ಕಾಗೆಯೋ, ಹದ್ದೋ ಬಂದು ಆ ತಿಂಡಿಗಳನ್ನು ಹಾರಿಸಿಕೊಂಡು ಹೋಗುತ್ತವೆ. ಹೀಗೆ ಈ ಹುಡುಗಿಯರ ಸ್ಥಿತಿ ಬಹಳ ಶೋಚನೀಯವಾಗಿದೆ.

ಇನ್ನು ಮಹಾರಾಣೀ ಕಾಲೇಜು ಹಾಸ್ಟಲನ್ನು ನೋಡೋಣ. ಅಲ್ಲಿ ಇರುವುದು 70 ಜನಕ್ಕೆ ಜಾಗವಿದೆ. ಈಗಿರುವ ಹುಡುಗಿಯರು 115 ಜನ. ಈ ಹಾಸ್ಟೆಲನಲ್ಲಿ, ಮಹಾರಾಜ ಕಾಲೇಜು ಹುಡುಗಿಯರಿಗೆ, ಮಹಾರಾಣಿ ಕಾಲೇಜಿನ ಹುಡುಗಿಯರಿಗೆ, B. Ed. ಕಾಲೇಜಿನ ಹುಡುಗಿಯರಿಗೆ ಮತ್ತು College of Indian Medicine ನಿಂದ ಬರುವ ಎಲ್ಲ ಹುಡುಗಿಯರಿಗೂ ಇಲ್ಲಿಯೇ ಜಾಗಗಳನ್ನು ಒದಗಿಸಿ ಕೊಡಬೇಕಾಗಿದೆ. ಈಗ ಈ ಹಾಸ್ಟೆಲನಲ್ಲಿ accommodation ಬಹಳ ಕಡಮೆಯಿದೆ. ಇಲ್ಲಿ ರೂಮುಗಳು ಹೇಗಿವೆ ಎಂದರೆ ಬಹಳ ಚಿಕ್ಕ ಮತ್ತು ಕತ್ತಲೆ ರೂಮುಗಳು, ಹುಡುಗಿಯರು ಮಧ್ಯದಲ್ಲಿ ಟೇಬಲ್ಲಿಟ್ಟು ಸುತ್ತಲೂ ಕುಳಿತುಕೊಂಡು ಓದಬೇಕು. ಕುರ್ಚಿ ವರಾಂಡದಲ್ಲಿಟ್ಟು ಸಾಲಿಗೆ ಪ್ಲಾಟ್‌ಫಾರಂನಲ್ಲಿ ಮಲಗುವಂತೆ ಮಲಗಬೇಕು. ಇಷ್ಟೆಲ್ಲ ಅನ್ಯಾಯ ಈ ಹೆಣ್ಣುಮಕ್ಕಳಿಗೆ ಆಗಿರುವ ವಿಷಯಗಳನ್ನು ಕುರಿತು Representation ಗಳು ಬಂದಿಲ್ಲವೇ ಎಂದರೆ ಸಾವಿರಸಾರಿ ಕಳಿಸಲಾಗಿದೆ. ಇದೇಕೆ ಇಷ್ಟು ಅಲಕ್ಷ್ಯವೋ, ಹೇಳಲಾರೆ. ಹೆಣ್ಣುಮಕ್ಕಳು—ಇವರೇನು full fees ಗಳನ್ನು ಕೊಡುವುದಿಲ್ಲವೇನು? ಅವರೇನು ಚೆನ್ನಾಗಿ ಓದಿ ಸರಿಯಾದ Results ತರುತ್ತಿಲ್ಲವೇನು? ಇಷ್ಟೆಲ್ಲ ತೊಂದರೆಗಳನ್ನು ಸಹಿಸಿಕೊಂಡೂ, ಓದಿ ಇವರುಗಳೇ ರ್‍ಯಾಂಕುಗಳನ್ನು ಪಡೆದುಬಿಡುತ್ತಾರೆ ಎಂತಲೋ ಏನೋ—ಒಂದೂ ಸರಿಯಾಗಿ ಹೇಳುವುದಕ್ಕಾಗುವುದಿಲ್ಲ. ನಿಜವಾಗಿಯೂ ನಮ್ಮ ಹೆಣ್ಣುಮಕ್ಕಳಿಗೆ ಅನುಕೂಲಗಳನ್ನು ಕೊಟ್ಟುಬಿಟ್ಟರೆ ನಮ್ಮ ಗಂಡು ಹುಡುಗರಿಗಿಂತ ಮುಂದಾಗಿ ಎಲ್ಲಿ ಬಂದು ಬಿಡುತ್ತಾರೆಯೋ ಎಂಬ ಭಯದಿಂದಲೋ ಅಥವ ಅಸೂಯೆಯಿಂದಲೋ ಏನೋ ನನಗಂತೂ ಅರ್ಥವಾಗುತ್ತಿಲ್ಲ.

ಇನ್ನು ಈ ಹಾಸ್ಟೆಲಿನ ಕಮಿಟಿಯವರು ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಕೇಳಿದ್ದೆ. ಅದಕ್ಕೆ ಇಲ್ಲಿಯವರೆಗೂ ಯಾವರೀತಿಯಾದ ಪ್ಲಾನುಗಳಾಗಲಿ, ಎಸ್ಟಿಮೇಟುಗಳಾಗಲಿ ಆಗಿಲ್ಲ. ಅವೇ ನಾಯಿತು ಎನ್ನುವುದು ಒಬ್ಬರಿಗೂ ಗೊತ್ತಾಗಲಿಲ್ಲ.

ನಮ್ಮ ಹೆಣ್ಣುಮಕ್ಕಳ ಪ್ರಗತಿಗೆ ಹಾತೊರೆಯುತ್ತಿರುವ ಮಾನ್ಯ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು, ವಿದ್ಯಾಸಚಿವರು ಮತ್ತು ಈ ಬಾಬಿಗಾಗಿ ಹಣವನ್ನು ಒದಗಿಸತಕ್ಕ ನಮ್ಮ ಆರ್ಥಿಕ ಸಚಿವರು, ಹಾಗೆಯೇ ಆರೋಗ್ಯಕ್ಕೆ ಜವಾಬ್ದಾರರಾದ ನಮ್ಮ ಆರೋಗ್ಯ ಸಚಿವರು ಕಾಲೇಜಿನ ಹಾಸ್ಟೆಲನ್ನು ಕಟ್ಟುವುದಕ್ಕೆ ಸಹಾಯಮಾಡುವ ನಮ್ಮ P.W.D. Minister ಎಲ್ಲರೂ ಒಟ್ಟಿಗೆ ಒಂದು ದಿವಸ ಒಂದೇ ಕಾರಿನಲ್ಲಿ ಅಲ್ಲಿಗೆ ಬಂದು inspection ಮಾಡಿಕೊಂಡು ಈ ಹಾಸ್ಟೆಲ್ಲಿಗೆ ತಕ್ಕ ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದು ನಾನು ಬಹಳ ವಿನಯದಿಂದ ಕೇಳಿಕೊಳ್ಳುತ್ತೇನೆ. ಆಮೇಲೆ ನಮ್ಮ ಮಾನ್ಯ ಗೃಹ ಸಚಿವರೂ ಕೂಡ ಈ ಸ್ಥಳಕ್ಕೆ ಜೊತೆಯಲ್ಲಿ ಹೋಗಿ ನೋಡಿಕೊಂಡು ಬಂದರೆ ಒಳ್ಳೆಯದು. ಏಕೆಂದರೆ ಹೆಣ್ಣು ಹುಡುಗರು ಕಾಲೇಜಿನ ವರಾಂಡಗಳಲ್ಲಿ ನಿಂತುಕೊಂಡು ಲೆಕ್ಚರ್‌ಗಳನ್ನು ಕೇಳುವಾಗ ಅಲ್ಲಿ ಸುತ್ತಲೂ ಜನ ಸುತ್ತಿಕೊಂಡು ನೋಡುವುದನ್ನು ನೋಡಿದರೆ ಒಂದು "Zoo" ಇದ್ದಹಾಗೆ ಕಾಣುತ್ತದೆ. ಇವರಿಗೆ ಸರಿಯಾದ ರಕ್ಷಣೆ ಕೂಡ ಇಲ್ಲ. ಹೀಗೆ ಇವರಿಗೆ ಪ್ರೊಟೆಕ್ಷನ್ನು ಕೊಡಲು ನಮ್ಮ ಗೃಹ ಸಚಿವರು ಅಲ್ಲಿಗೆ ಬಂದು ನೋಡಿದರೆ ಒಳ್ಳೆಯದು. ಇವರೆಲ್ಲರೂ ಒಟ್ಟಿಗೆ ಅಲ್ಲಿಗೆ ಏತಕ್ಕೆ ಬರಬೇಕು ಎಂದು ನಾನು ಕೇಳುತ್ತಿದ್ದೇನೆಂದರೆ, ಈ ಸಭೆಯಲ್ಲಿ ಪ್ರತಿ ದಿವಸವೂ ಮಂತ್ರಿಗಳು ಜವಾಬು ಕೊಡುವಾಗ ಎದುರು ಪಕ್ಷದ ಕಡೆಯ ಸದಸ್ಯರು ಯೋಚನೆ ಮಾಡದ ಭಾಷಣಗಳನ್ನು ಇಲ್ಲಿ ಮಾಡುತ್ತಾರೆ ಅಥವಾ ಉತ್ಪ್ರೇಕ್ಷೆಯಿಂದ ಮಾತನಾಡುತ್ತಾರೆ ಎಂದು ಹೇಳುತ್ತಾರೆ. ನಾನು ಇವೊತ್ತಿನ ದಿವಸ ತಮ್ಮ ಮುಂದೆ ಹೇಳುತ್ತಿರುವುದು ಉತ್ಪ್ರೇಕ್ಷೆಯಾದ ವಿಷಯಗಳೇನೂ ಅಲ್ಲ. ನಿಜವಾದ ಮಾತುಗಳನ್ನೇ ಹೇಳುತ್ತಿದ್ದೇನೆಂದು ತಾವುಗಳೆಲ್ಲ ಬಂದು ನೋಡಿ ತಿಳಿದುಕೊಳ್ಳಬೇಕು. ಅದಕ್ಕಾಗಿ ನಾನು ಮತ್ತೊಮ್ಮೆ ಈ ವಿಷಯಗಳಿಗೆ ಗಮನ ಕೊಡಬೇಕೆಂದು ಅತಿ ವಿನಯದಿಂದ ವಿಜ್ಞಾಪನೆ ಮಾಡಿಕೊಳ್ಳುತ್ತಿದ್ದೇನೆ.

ಇನ್ನೊಂದು ಸಲಹೆಯನ್ನು ನಾನು ಇಲ್ಲಿ ಕೊಡಬೇಕೆಂದಿದ್ದೇನೆ. ಮಹಾರಾಜ ಹೈಸ್ಕೂಲು ಈ ಮಹಾರಾಣಿ ಕಾಲೇಜಿಗೆ ಸಮೀಪದಲ್ಲಿದೆ ಮತ್ತು ಮಧ್ಯಭಾಗದಲ್ಲಿದೆ. ಇದನ್ನು surrender ಮಾಡಿ ಈ ಹೆಣ್ಣು ಮಕ್ಕಳ ಕಾಲೇಜಿಗೆ ಕೊಟ್ಟರೆ ಬಹಳ ಸಹಾಯವಾಗುತ್ತದೆ. ಈಗಿರುವ ಮಹಾರಾಜಾ ಹೈಸ್ಕೂಲಿಗೆ ಬೇಕಾದರೆ ಬೇರೆ ಜಾಗವನ್ನು ಒದಗಿಸಿ ಕೊಡಬಹುದು. ಇದನ್ನು ಮಹಾರಾಣೀ ಕಾಲೇಜಿಗಾಗಿ ದೊಡ್ಡ ಮನಸ್ಸುಮಾಡಿ ಕೊಟ್ಟರೆ, ಇದರಲ್ಲಿ ಲ್ಯಾಬೋರೇಟರಿ ಸೌಕರ್ಯಗಳನ್ನೂ ಕಲ್ಪಿಸಿಕೊಳ್ಳಬಹುದು. ಮೈಸೂರಿನಲ್ಲಿ ಬೇಕಾದಷ್ಟು ಬಿಲ್ಡಿಂಗುಗಳಿವೆ. Palace office ಇದೆ ಮತ್ತು ಅದಕ್ಕೆ ಸೇರಿದ ಜಾಗಗಳಿವೆ ಗಂಡುಹುಡುಗರಿಗೆ

Sri M. C. NARASIMHAN (Kolar Gold Fields).—I have a suggestion to make in respect of two matters. One is about the Education Demand and the other is about the general programme read out to us. It may be true that the Leader of the House and the Leader of the Opposition might have agreed. But, so far as we are concerned, that is, those who are outside the P.S.P., there is a certain difficulty. I do not say, we do not stick to that particular programme. But, we did not think that this would be spread over in this fashion. We are also here however small we may be. We are also not a negligible element. Now that the programme has been chalked out, I would suggest that in respect of such Demands on which there may be a possibility of a prolonged debate, we may extend the sitting. Instead of 5 hours, we may sit for 7 or 8 hours. I do not think it would be difficult for us to accommodate such a position.

So far as Education Demand is concerned, I suggest that it might be taken up tomorrow. Even tomorrow, instead of sitting for five hours, we can sit for seven hours. In respect of other items of the programme, we shall think over and discuss with our colleagues and make suggestions. If that is accepted we are glad; if that is not accepted, we leave it to the House.

Mr. SPEAKER. After all, we cannot have the cake and eat it too. Hon'ble Members want to have a chance to speak and at the same time they want to cover all the Demands; that would be rather impossible. Now, according to the programme drawn by the Leaders of both the Parties, it has been decided that we should take only such Demands on such days. Of course, if you want me to sit longer, I will sit. Do Hon'ble Members want me to sit longer?

5-30 P. M.

Sri M. C. NARASIMHAN.—One submission in respect of the programme itself. We have something to say in this connection, and that is, those people who are not included in the Praja Socialist Party are under a handicap. If it is the impression of the House and of the Speaker that we are not an important element at all, that is another matter. All the same, we are not a negligible element. That is the unfortunate position in which we hav been placed. We were not consulted about the programme and we do not know on what particular Demand how much time has been given. My submission is that so far as Education Demand is concerned, it might be taken up tomorrow. We can discuss with the Leader of the Opposition in regard to this matter, and with regard to the rest of the programme, we could make further suggestions, if it is not totally unacceptable to you.

Mr. SPEAKER.—The other programme will be upset if Education Demand is taken up tommorrow.

Sri M. C. NARASIMHAN.—So far as tommorrow is concerned, my friends will be prepared to sit a little longer; at least those who are anxious to participate in the debate will sit a little longer. We may elongate the proceedings, if necessary tomorrow.

*ಶ್ರೀ ಟಿ. ಎನ್. ಮುದಲಗಿರಿಗೌಡ (ಕುಣಿಗಲು).—ಒಂದು ವಿಷಯವನ್ನು ತಮ್ಮಲ್ಲಿ ಅರಿಕೆ ಮಾಡಬೇಕೆಂದು ಇದ್ದೇನೆ. ಈ ಡಿಮಾಂಡುಗಳನ್ನು ಪ್ರಾರಂಭಮಾಡುವುದಕ್ಕೆ ಮೊದಲು ನಾವು ಒಂದು ಪಾಲಿಸಿಯನ್ನು ಹಾಕಿಕೊಂಡು ಬಂದಿದ್ದೆವು. ಈಗ ನಮ್ಮ ಪಾರ್ಟಿ ಲೀಡರು ಮತ್ತು ವಿರೋಧ ಪಕ್ಷದ ಲೀಡರೂ ಕೂಡ ಮಾತನಾಡಿಕೊಂಡು ಮೊದಲು ಇದ್ದ ಎರಡು ದಿವಸಗಳ ಅವಧಿಯನ್ನು ಈಗ ಕಡಮೆಮಾಡಿ ಕೆಲವನ್ನು ಒಂದೊಂದು ದಿವಸದಲ್ಲೇ ಮುಗಿಸಬೇಕೆಂದು ಮಾಡಿದ್ದಾರೆ. ಯಾವ ಯಾವತ್ತಿನ ದಿವಸ ಯಾವ ಯಾವ ಡಿಮಾಂಡುಗಳನ್ನು ತೆಗೆದುಕೊಳ್ಳಬೇಕೆಂದಿದ್ದಾರೋ ಅದರಂತೆ ಮುಗಿಸಬೇಕಾಗಿದೆ. ಆದುದರಿಂದ ನಾವು ಪ್ರೋಗ್ರಾಮು ಈಗ ಯಾವ ರೀತಿಯಾಗಿ ಫಿಕ್ಸ್ ಮಾಡಿಕೊಂಡಿದ್ದೇವೋ ಅದೇ ರೀತಿಯಾಗಿ ಮುಗಿಸಬೇಕು. ಅದರಂತೆ ನಮ್ಮ ಪಾರ್ಟಿಯ ಲೀಡರೂ ಒಪ್ಪಿರುವುದರಿಂದ ನಾವು ಅದನ್ನು ಒಪ್ಪಬೇಕು. ಅದರಂತೆ ಇವೊತ್ತಿನದಿವಸವೇ ಈ ಡಿಮ್ಯಾಂಡನ್ನು ಮುಗಿಸಬೇಕು

(ಶ್ರೀ ಟಿ. ಎನ್. ಮೂಡಲಗಿರಿಗೌಡ)

ನಾವು ಈಗ ಯಾವ ರೀತಿ ಪ್ರೋಗ್ರಾಂ ಇದೆಯೋ ಅದರಂತೆ ಹೋಗುವುದು ಸೂಕ್ತವೆಂದು ಕಾಣುತ್ತದೆ.

ಶ್ರೀ ಎಂ. ರಾಮಪ್ಪ.—ಶ್ರೀಯುತ ನರಸಿಂಹನ್ ಅವರು ತಮ್ಮ ಅಭಿಪ್ರಾಯವನ್ನು ಕೇಳದೆ ನಮ್ಮ ಲೀಡರು ಈ ರೀತಿಯಾದ ಬದಲಾವಣೆಯನ್ನು ಸೂಚಿಸಿದರೆಂದು ಹೇಳಿದರು. ಕೆಲವು ಮುಖ್ಯ ವಿಷಯಗಳಿಗಾಗಿ ಅವರು ಈ ರೀತಿಯಾಗಿ ಪ್ರೋಗ್ರಾಮನ್ನು ಬದಲಾಯಿಸಬೇಕಾಯಿತು. ಅದಕ್ಕೆ ಈಗಲಾದರೂ ಅವರು ತಮ್ಮ ಸಮ್ಮತಿಯನ್ನು ಕೊಡಬೇಕೆಂದು ಶ್ರೀ ನರಸಿಂಹನ್ ಅವರನ್ನು ಕೇಳುತ್ತೇನೆ.

Sri M. C. NARASIMHAN.—What do we do? We are in a state of suspended animation so far as the programme is concerned.

Mr. SPEAKER.—I do not wish to keep you in a state of suspended animation. We will sit a little longer today and finish it.

Sri B. R. SUNTHANKAR (Belgaum City).—I thank you very much for giving me this opportunity to speak, particularly when there is so much rush of speakers. An amount of Rs. 10,55,11,900 is provided for Education in the Budget. It amounts to 17 per cent of the total expenditure. This is a fairly large amount. A scrutiny of the various Heads under Education shows that most of the activities under this Head are all of a routine character and no new directions are shown under this Demand for Education in the Budget. A new outlook and a broad perspective are required in the matter of education to set the democracy on a sound footing in our country. The famous dictum of the great Greek philosopher Plato that "Education is the foundation of democracy." is all the more applicable to our Nation. Education required for democracy is something more than simple literary education. It is the education to live a fuller and greater life. It is the education of humanity. There is nothing in the Budget that assures us on this account. I will take only one aspect of education, that is, social education, the adult education. My Hon'ble friend Sri Subramaniam has all praise for the Government in this respect. Of course, we do not know what are the achievements in this respect of the Government. But from the knowledge that we have got, our impression is that much more is still left to be done. We are not given any idea of the real achievements of this Government. That is my difficulty while studying the whole Budget. We are not given any idea about the achievements in real terms in any Department of this Government. For that, I would suggest that the Schedule of real achievements during the previous year should be appended to the Budget. The schedule should mention a bout the achievements in real terms, say, so many schools were opened, so many hospitals were opened, so many beds were added and so on. Such sort of detailed schedule should be apppended to the Budget every time so that we may get a real idea of the achievements.

Sri V. VENKATAPPA.—You can find it in the Administration Report of the Department.

Sri B. R. SUNTHANKAR.—It is not in our hands. We are new Members. I am told that there is no Administration Report for the whole of Mysore.

With these remarks, I turn to the various cut motions I have sent in. These cut motions relate mainly to the question of protection of linguistic minorities or minority languages, particularly Marathi language. The question of linguistic minorities is a vexed problem and has to be solved satisfactorily. The Hon'ble Member of Parliament, Mr. Frank Anthony, has boldly stated this problem of linguistic minority in his Minute of Dissent to the Report of the Joint Select Committee on States Reorganisation Bill. The Hon'ble Mr. Frank Anthony has observed:

> "The absence of a single guarantee or safeguard on behalf of the linguistic minorities marks a sad gap between promise and performance and is a challenge to the conscience of the Government. This lacuna underlines, I submit with respect, the inability of those in power or of those belonging to majority groups to understand the real fears, born of bitter experience, of linguistic minorities. Promises and paper assurances which have no legal or executive sanction are poor comfort to those who, in their day to

day lives, come up against the stark and cruel realities of discrimination and oppression."

The Hon'ble Mr. Frank Anthony has precisely stated the fate of linguistic minorities in our country. Linguistic minorities are now left to the mercies of the State Government and in practice of the ruling party. As for ourselves, the Marathi speakers, our problem is quite different from other minorities. As a matter of fact, we are an absolute majority in our own tract. We are a part and parcel of Maharashtra. We are a majority in our own region. But on account of the reorganisation of States, the majority has been turned into a minority; we are an artificially created minority. My contention, I submit, Sir, is that this Government cannot protect the language and culture of the Marathi people in the manner in which these would have been protected in the normal course and without any effort, had we been a part of Maharashtra in Bombay State.

But on account of this reorganisation we have to suffer as a minority. I take here the instance of the condition of Marathi instruction in the technical high school at Belgaum. There is a Government Technical High School at Belgaum. The total number of students in this high school is 160 or so. More than 50 per cent, that is, the majority of the students are Marathi speaking. There are two divisions in the high school, one division for Marathi and the other for Kannada. The media of instruction are of course Marathi and Kannada. The Marathi division is always overcrowded, but there is not a single Marathi teacher in the institution. The Kannada teachers teach Marathi boys and their knowledge of Marathi is very poor, quite inadequate to impart nstruction in Marathi. That is why the Marathi boys in that institution are suffering and are not able to make much progress. The question papers in the last annual examination set at this institution were set by Kannadateachers in Marathi and these question papers set in Marathi were incorrect and ungrammatical. You know Marathi well, Sir. I may read out to you some of the sentences.

Mr. SPEAKER.—I know Marathi, but not well.

Sri B. R. SUNTHANKAR.—But you can understand whether it is correct or not.

Sarva prashanana Sarkhi guna aheta. Swachhatela panch marks rakhun thevale ahe.

The Hon,ble Member Sri Kothavale is an expert in Marathi. But he is not here. There are a number of members on the other side who know Marathi swell.

Mr. SPEAKER.—Hi Vakye barobar kashli aswat he ki Songa

Sri B. R. SUNTHANKAR.—This sentence Khali dilelya vakye poorna Kara " It should be as "Khali dilete vakye poorna Kara "

Here is another sentence.

"French Polish Tayar Karyachi Krati baddalhi Sanga to lavanyachi Kratili sanga."

In such manner the papers are set in Marathi and you can imagine what is the fate of Marathi students there. That is our usual day to day experience. The assurances so loudly given by the Hon'ble the Chief Minister in respect of the protection of linguistic minorities remain in words and on paper only.

Then as regards cultural activities, I submit that Marathi speakers, are under a great handicap in this respect. You may be very well knowing that our area, particularly, Belgaum Town, is an important centre of Marathi drama and stage. At Belgaum there are several dramatic associations and they are active. They perform a number of dramas every year. The Bombay Government had a scheme of encouraging Marathi drama and stage, particularly amateur dramatists. The Goverment of Bombay used to hold annual drama competitions to encourage amateur dramatists. A number of associations from Belgaum were taking part in it, and Belgaum amateurs stood creditably in the competitions. But since the first of November 1956, our Belgaum people are debarred from taking part in those competitions and the Mysore Government has not

(SRI B. R. SUNTHANKAR)

provided for any competitions or any encouragement to Marathi drama or stage.

One redeeming feature of the Budget is the provision for publication of Kannada encyclopaedia as well as popular literature. As a humble author of Marathi of some repute, I welcome this move on the part of the Government and I congratulate the Government upon it. At the same time the Government should see that the scheme of Kannada encyclopaedia materialises as early as possible and attempts should be made to make this encyclopaedia as exhaustive and as up-to-date as possible.

As for popular literature, there is provision for Kannada literature and for children's literature in Kannada, but there is no provision for popular literature or children's literature in the minority languages. My suggestion is that provision should also be made in the Budget for publication of popular literature, in minority languages, particularly, Marathi language.

Then about University education. So much has been said here about University education. I want to draw the attention of this Hon'ble House to one point. We are horrified at the discrimination that is made while admitting students to the Colleges, particularly the Bhoomereddi Engineering College of Hubli. We have received representations and appeals from the students of Hubli that in the matter of admissions to this Engineering College, discrimination is made against certain communities. The students have appealed to us to do something in this respect. Under the pretext of giving admisssions to backward classes, merit is placed at a disadvantage. In the Bombay State, so far as our area is concerned, admissions have been made on merit except for a certain per centage reserved for the Scheduled Castes. As for other castes, admissions were strictly on merit. I do not know about the old Mysore State, but I can speak with authority about Hubli. There has been a great discrimination in that College. Merit is set aside and only students of certain communities are admitted and students of certain other communities are denied admissions. That should not be the case. Merit should be placed first in educational institutions. Thank you.

ಶ್ರೀ ಜಿ. ದುಗ್ಗಪ್ಪ (ಚಿತ್ರದುರ್ಗ).—ಸ್ವಾಮಿ, ವಿದ್ಯಾಭ್ಯಾಸಕ್ಕೆ ಸಂಭಂಧಪಟ್ಟ ಬೇಡಿಕೆಯನ್ನು ಸಭೆಯ ಮುಂದಿಟ್ಟಿದ್ದಾರೆ. ಹಿಂದಿನಿಂದಲೂ ಬಹಳ ಗುರುತರವಾದ ಹಣವನ್ನು ವಿದ್ಯಾಭ್ಯಾಸಕ್ಕಾಗಿ ಮೈಸೂರು ಸರ್ಕಾರದವರು ಖರ್ಚು ಮಾಡುತ್ತಿದ್ದಾರೆ. 10,55,11,900 ರೂಪಾಯಿಗಳನ್ನು ಸರ್ಕಾರದವರು ಈ ಸಾರಿ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುವುದಕ್ಕಿಟ್ಟಿದ್ದಾರೆ. ಈ ದೊಡ್ಡ ಅಂಕಿಯನ್ನು ನಾನು ನೋಡಿ ಬಜೆಟ್ಟಿನ ಹಾಳೆಗಳನ್ನು ತಿರುವಿಹಾಕಿದೆ. ಈ ದೊಡ್ಡ ಸಂಖ್ಯೆಯಲ್ಲಿ ಹರಿಜನರಿಗಾಗಿ ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆಂದು ಸ್ವಾಭಾವಿಕವಾಗಿ ನನಗೆ ಕುತೂಹಲ ಕೆರಳಿ ಈ ವರ್ಗದ ವಿದ್ಯಾರ್ಥಿಗಳ ವೇತನಕ್ಕಾಗಿ ಎಷ್ಟು ಹಣ ಒದಗಿಸಲಾಗಿದೆ ಎಂದು ನೋಡಿದೆ. ಇದರಲ್ಲಿ Other than Depressed Classes ಎಂದರೆ ಬೇರೆ ಹಿಂದುಳಿದ ವರ್ಗಗಳಿಗೆ Backward Classesಗೆ ಎಷ್ಟು ವೇತನಗಳನ್ನು ಕೊಟ್ಟಿದ್ದಾರೆಂದರೆ 12,79,100 ರೂಪಾಯಿಗಳನ್ನೊದಗಿಸಿದ್ದಾರೆ. ಒಂದು ವಿಚಾರವನ್ನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಈ ಹೊಸ ರಾಜ್ಯವಾದಮೇಲೆ, ನೂತನ ಮೈಸೂರು ರಾಜ್ಯದಲ್ಲಿ ಪ್ರೈಮರಿ ವಿದ್ಯಾಭ್ಯಾಸಕ್ಕೆ new type middle schools, middle schools and high schools ಹುಡುಗರು ಮತ್ತು ಹುಡುಗಿಯರಿಗೆ—ಹರಿಜನರ ಹಿಂದುಳಿದ ವಿಧ್ಯಾರ್ಥಿಗಳಿಗೆ ಎಷ್ಟು ಹಣವನ್ನಿಟ್ಟಿದ್ದಾರೆಂದು ತಿಳಿಯುವ ಕುತೂಹಲ ನನ್ನಲ್ಲಿ ಕೆರಳಿತು. 72,495 ರೂಪಾಯಿಗಳನ್ನಿಟ್ಟಿದ್ದಾರೆ. ಈ ವಿಚಾರ ಶ್ರೀಮಾನ್ ಚೆನ್ನಿಗರಾಮಯ್ಯನವರಿಗೂ ಚೆನ್ನಾಗಿ ಗೊತ್ತಿದೆ; ಅವರೂ ಡಿಪ್ರೆಸ್ಡ್ ಕ್ಲಾಸ್ ವೇತನವನ್ನು ತೆಗೆದುಕೊಂಡು ಓದಿದ್ದಾರೆ. 1941ನೆಯ ಇಸವಿಯಲ್ಲಿ ನಾನು ಇಂಟರ್‌ಮೀಡಿಯಟ್‌ನಲ್ಲಿ ಓದುವುದಕ್ಕೆ ಬಂದಾಗ ನನಗೆ ವೇತನವಿರಲಿಲ್ಲ. ವರ್ಷದ ಕೊನೆಯಲ್ಲಿ ಸರ್ಕಾರದಿಂದ ವೇತನ ಬಂತು. ಹರಿಜನ ವಿದ್ಯಾರ್ಥಿಗಳಿಗೆ ವೇತನವಿಲ್ಲದಿದ್ದರೆ ಎಷ್ಟು ತೊಂದರೆಯಾಗುತ್ತದೆ, ವೇತನ ದೊರಕದೆ ಹೋದರೆ ಇಡೀ ಸಮಾಜದ ಪ್ರಗತಿ ಎಷ್ಟು ಕುಂಠಿತವಾಗುತ್ತದೆಂಬುದು ಮನವರಿಕೆಯಾಗಲೆಂದು ಒತ್ತಿಹೇಳುತ್ತಿದ್ದೇನೆ. ಒಟ್ಟು ಹರಿಜನರಿಗೆ 72,495 ರೂಪಾಯಿ ಎಂದರೆ ಒಂದೊಂದು ಜಿಲ್ಲೆಗೆ ಎಷ್ಟಾಗುತ್ತದೆ ಎಂಬುದನ್ನು ನೋಡಬೇಕು. ಹರಿಜನರಲ್ಲದ ಬೇರೆ ಹಿಂದುಳಿದ ವರ್ಗದವರಿಗೆ 12,79,100 ರೂಪಾಯಿ ಕೊಟ್ಟಿದೆ. ಇವೆರಡನ್ನೂ ಹೋಲಿಸಿದರೆ ಹರಿಜನರಿಗೆ ಕೊಡುವುದು ಕೇವಲ ಶೇಕಡ 5·66ರಷ್ಟಾಗುತ್ತದೆ. ಯಾವ ಆಧಾರದ ಮೇಲೆ ಇಷ್ಟು ಹಣವನ್ನು ಸರ್ಕಾರದವರು ಒದಗಿಸಿದ್ದಾರೋ ಗೊತ್ತಿಲ್ಲ. ಹಿಂದೆ ಎಷ್ಟು ಮಂದಿ ಹರಿಜನ ವಿದ್ಯಾರ್ಥಿಗಳಿಂದ ಅರ್ಜಿ ಬರುತ್ತಿತ್ತು ಎಂಬುದರ ಮೇಲೆ ಕೊಟ್ಟಿದ್ದಾರೆಯೆ, ಅಥವಾ ಜನ ಸಂಖ್ಯೆಯ ಮೇಲೆ ಕೊಟ್ಟಿದ್ದಾರೆಯೆ ಎಂದು ಕೇಳುತ್ತೇನೆ. ಈ ವರ್ಷ ಈ ವರ್ಗದವರಿಗೆ ವೇತನಕ್ಕಾಗಿ ಹೆಚ್ಚು ಹಣವನ್ನಿಡುವ ಅವಶ್ಯಕತೆ ಹೆಚ್ಚಾಗಿದೆ. ಏಕೆಂದರೆ, ತಮಗೇ ಗೊತ್ತಿರುವಂತೆ ಹಳೆಯ ಮೈಸೂರಿನಲ್ಲಿ ಸಾಮಾನ್ಯವಾಗಿ ವಿದ್ಯಾಪ್ರಗತಿ ಜಾಸ್ತಿಯಾಗಿತ್ತು. ಬೊಂಬಾಯಿ, ಹೈದರಾಬಾದು ಕರ್ಣಾಟಕದಲ್ಲಿ ಎಲ್ಲೋ ಒಬ್ಬೊಬ್ಬ ಬಿ. ಎ. ಪಾಸ್ ಮಾಡಿದ

ವರಿದ್ದಾರೆ. ನಮ್ಮ ಹಳೆಯ ಮೈಸೂರಿನಲ್ಲಿ ಸಂಖ್ಯೆ ಜಾಸ್ತಿ ಇತ್ತು. ಅಕ್ಷರಸ್ಥರ ಸಂಖ್ಯೆ ಜಾಸ್ತಿಯಾಗಿತ್ತು. ಹೀಗೆ ಬೇರೆ ಜಿಲ್ಲೆಗಳಲ್ಲಿರುವ ಪರಿಸ್ಥಿತಿಯನ್ನು ನೋಡಿದರೆ, ಅಲ್ಲಿರುವ ಹಿಂದುಳಿದವರನ್ನು ಇಲ್ಲಿನ ಮಟ್ಟಕ್ಕೆ ತರಬೇಕೆಂದರೆ ಹೆಚ್ಚು ಹಣವನ್ನೊದಗಿಸಬೇಕಾಗಿತ್ತು. ಈ ದೃಷ್ಟಿಯಿಂದ ಸಾಕಷ್ಟು ಹಣವನ್ನೊದಗಿಸಿಲ್ಲ.

ಅಧ್ಯಕ್ಷರು.—ಬೊಂಬಾಯಿಗೆ ಸೇರಿದ್ದ ಭಾಗಗಳು ತಾವು ಹೇಳಿದ ಹಾಗೆ ವಿದ್ಯಾಭ್ಯಾಸದಲ್ಲಿ ಹಿಂದುಳಿದಿಲ್ಲ. ಮಂಗಳೂರು ಬಹಳ ಮುಂದಿದೆ. ಹೀಗೆ ಅನೇಕ ಭಾಗಗಳು ಹಿಂದುಳಿದಿಲ್ಲ.

ಶ್ರೀ ಜಿ. ದುಗ್ಗಪ್ಪ.—ಸರ್ಕಾರದವರು ಇಲ್ಲಿ ಕೆಲವು ಕೋಮುಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಆದರೆ ಹಿಂದುಳಿದವರ ಕೋಮುಗಳವರು, ವರ್ಗದವರು ಎಷ್ಟಿದ್ದಾರೆಂಬುದನ್ನು ತಿಳಿದುಕೊಳ್ಳಲು ಈ ಪಟ್ಟಿ ಸಾಲದು. ಈ ಪಟ್ಟಿಯಲ್ಲಿ ಹಳೆಯ ಮೈಸೂರಿನಲ್ಲಿ ಕೆಲವು ರೀತಿಯ ಹೆಸರುಗಳಿವೆ. ಬಳ್ಳಾರಿಯಲ್ಲಿ ಹೇಳಿರತಕ್ಕ ಹೆಸರುಗಳೇ ಒಂದು ರೀತಿಯಾಗಿವೆ. ಕೊಡಗು—ಮಂಗಳೂರು ಇತ್ಯಾದಿ ಪ್ರಾಂತಗಳಲ್ಲಿ ಸೂಚಿಸಿರತಕ್ಕ ಹೆಸರುಗಳೆಲ್ಲ ಒಂದೊಂದು ರೀತಿಯಾಗಿರುತ್ತವೆ. ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ. ಈಗಲಾದರೂ ಸರ್ಕಾರದವರು ದೇಶದಲ್ಲಿ ನಿಜವಾಗಿಯೂ ಹಿಂದುಳಿದ ಕೋಮುಗಳು ಎಷ್ಟಿವೆ, ಆ ಪೈಕಿ ಯಾವ ಯಾವ ಕೋಮುಗಳಿಗೆ ಸರ್ಕಾರದವರಿಂದ ಎಷ್ಟೆಷ್ಟು ಸಹಾಯ ದೊರೆಯುತ್ತಿದೆ ಎನ್ನುವುದಕ್ಕೆ ಒಂದು ಖಚಿತವಾದ ಪಟ್ಟಿಯನ್ನೇ ಈಗ ತಯಾರು ಮಾಡಿ ಅದನ್ನು ಅವರು ಪ್ರಸಿದ್ಧಪಡಿಸಬೇಕಾಗಿದೆ. ಇತ್ತೀಚೆಗೆ ಹೊಸ ಮೈಸೂರು ರಾಜ್ಯ ಉದಯಿಸಿದ ಮೇಲಂತೂ ಇದರ ಅಗತ್ಯವಿನ್ನೂ ಹೆಚ್ಚಾಗಿರುತ್ತದೆ. ನಮ್ಮ ಹಳೆಯ ಮೈಸೂರು ಸಂಸ್ಥಾನದಲ್ಲಿ ಸರ್ಕಾರದಿಂದ ದ್ರವ್ಯಸಹಾಯ ಪಡೆಯುತ್ತಿದ್ದಂಥ ಹಾಸ್ಟಲ್‌ಗಳು ಅನೇಕವಿರುತ್ತವೆ. ಸರ್ಕಾರದವರು ಈ ಸಂಸ್ಥೆಗಳಿಗೆ ವಿದ್ಯಾ ಇಲಾಖೆಯ ಹೆಡ್ಡಿನಲ್ಲಿ ಧನಸಹಾಯ ಮಾಡುತ್ತಿದ್ದಾರೆ. ಹೀಗೆ ಅನೇಕ ಖಾಸಗೀ ವಿದ್ಯಾಸಂಸ್ಥೆಗಳಿಗೂ ಖಾಸಗೀ ಹಾಸ್ಟಲುಗಳಿಗೂ ಈ ವಿದ್ಯಾ ಇಲಾಖೆಯ ಮೂಲಕ ನಮ್ಮ ಸರ್ಕಾರದವರು ಗ್ರಾಂಟು ರೂಪವಾಗಿ ಧನಸಹಾಯ ಮಾಡುತ್ತಿರುತ್ತಾರೆ. ಆದರೆ ಈ ವಿಚಾರದಲ್ಲಿ ನನ್ನ ಸ್ವಂತ ಅನುಭವ ಕೂಡ ಹೆಚ್ಚಾಗಿಯೇ ಇದೆ. ನನಗೆ ತಿಳಿದಿರುವಮಟ್ಟಿಗೂ ಸರ್ಕಾರದವರು ಯಾವುದಾದರೊಂದು ಖಾಸಗೀ ಸಂಸ್ಥೆಗೆ ಸಹಾಯ ನೀಡುತ್ತಿದ್ದಾರೆಂದು ಕಂಡು ಬಂದರೆ ಆ ರೀತಿ ಸರ್ಕಾರದವರು ಆ ಸಂಸ್ಥೆಗೆ ನೀಡತಕ್ಕ ಸಹಾಯವನ್ನು ಮೂರು ವರ್ಷಗಳಿಗೊಮ್ಮೆ ರಿವೈಜ್ ಮಾಡುತ್ತಿದ್ದರೆಂದು ತಿಳಿದುಕೊಂಡಿದ್ದೇನೆ. ಆದರೆ ಈಗ ಇಲಾಖೆ ಮೂಲಕ ಆ ಸಂಬಂಧಪಟ್ಟ ಸಂಸ್ಥೆಗಳ ತಿಳಿವಳಿಕೆಗೋಸ್ಕರವಾಗಿ ಆ ಸಂಸ್ಥೆಗಳೆಲ್ಲ ಪ್ರತಿ ವರ್ಷವೂ ಅವುಗಳಿಗೆ ದೊರೆಯುತ್ತಿರುವ ಗ್ರಾಂಟ್-ಇನ್-ಏಯ್ಡ್‌ನ್ನು ರಿವೈಸ್ ಮಾಡಿಸಿಕೊಳ್ಳಬೇಕೆಂಬ ಬಗ್ಗೆ ಒಂದು ಸರ್ಕ್ಯುಲರನ್ನೇ ಹೊರಡಿಸಲಾಗಿದೆ. ಹಾಗೆ ಆ ಸಂಸ್ಥೆಗಳವರು ಗ್ರಾಂಟನ್ನು ರಿವೈಜ್ ಮಾಡಿಸಿಕೊಳ್ಳುವ ಮೊದಲೇ ಒಬ್ಬ ಸರ್ಕಾರಿ ಆಡಿಟರಿಂದ ಆ ಸಂಸ್ಥೆಯ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸಬೇಕೆಂಬ ನಿಯಮವಿದೆ. ಇದಕ್ಕಾಗಿ ಸಂಬಂಧಪಟ್ಟ ಸಂಸ್ಥೆಯವರು ಸರ್ಕಾರಕ್ಕೆ ಮುಂಗಡವಾಗಿ ಆಡಿಟ್ ಛಾರ್ಜಿನ ಬಗ್ಗೆ ಶೇಕಡ ಎರಡರಂತೆ ಛಾರ್ಜನ್ನು ಕೊಡಬೇಕು. ಆ ರೀತಿ ಆಡಿಟರ್ ಅವರಿಂದ ಒಂದು ರಿಪೋರ್ಟ್ D.P.I. ಅವರಿಗೆ ತೆಲುಪಿದ ಮೇಲೆ ಅನಂತರ ಅವರು ಆ ಗ್ರಾಂಟನ್ನು ರಿವೈಸ್ ಮಾಡಬೇಕು. ಇಷ್ಟೆಲ್ಲಾ ಕೆಲಸಗಳೂ ಏಪ್ರಿಲ್ ತಿಂಗಳಿನೊಳಗಾಗಿ ಮುಗಿಯಬೇಕು. ಹೀಗೆ ಆ ಬದುಕನ್ನು ಮುಗಿಸಲು ಎಲ್ಲಿಯಾದರೂ ಸಾಧ್ಯ ಉಂಟೇ ಎಂದು ಕೇಳುತ್ತೇನೆ. ಈ ದಿವಸ ಧಾರ್ವಾಡದಲ್ಲಿ 39 ಖಾಸಗೀ ಹೈಸ್ಕೂಲುಗಳಿವೆ. ಬೆಳಗಾಂನಲ್ಲಿ 39 ಖಾಸಗೀ ಹೈಸ್ಕೂಲುಗಳಿವೆ. ಈ ಶಾಲೆಗಳ ಆಡಿಟ್ ಲೆಕ್ಕವೆಲ್ಲ ಏಪ್ರಿಲ್‌ನೊಳಗಾಗಿ ಮುಗಿಯಬೇಕೆಂದರೆ ಇದು ಸಾಧ್ಯವೇ? ಒಂದುವೇಳೆ ಸ್ಪೆಷಲ್ ಸಿಬ್ಬಂದಿ ನೇಮಕ ಮಾಡಿಕೊಂಡಾಗ್ಯೂ ಪಾಠಶಾಲೆಗಳನ್ನು ಯಾವಾಗ ಪ್ರಾರಂಭಿಸಬೇಕು? ಇದೆಲ್ಲಾ ಮೇ ತಿಂಗಳೊಳಗಾಗಿ ಆಗಬೇಕು. ಈ ತೆರನಾದ ಪ್ರಾಕ್ಟಿಕಲ್ ತೊಂದರೆಗಳಿವೆ. ಈ ವರ್ಷ ಪ್ರತಿಯೊಂದು ಸಂದರ್ಭದಲ್ಲೂ ಸರ್ಕಾರದವರು pending revision of the grants ಹಂಗಾಮಿ ಗ್ರಾಂಟನ್ನು ಕೊಡಬಹುದೆಂದು ಮಾಡಿದ್ದಾರೆ. ಆ ರೀತಿ ಕೆಲವು ಹಾಸ್ಟಲುಗಳಿಗೂ ಸ್ಕೂಲುಗಳಿಗೂ ಕೊಟ್ಟರು. ಆದರೆ ಡಿಪ್ರೆಸ್ಡ್ ಕ್ಲಾಸ್ ಹಾಸ್ಟಲುಗಳಿಗೆ ಆ ರೀತಿ ಯಾವುದಕ್ಕೂ ಗ್ರಾಂಟನ್ನು ಕೊಡಲಿಲ್ಲ. ಆಗ ನಾನು ಈ ವಿಚಾರವನ್ನು ಆ ಇಲಾಖೆಯ ಡೈರೆಕ್ಟರವರಿಗೆ ತಿಳಿಸಿದೆನು. ಆಗ ಅವರು ನಮಗೆ ''ಇಷ್ಟರಲ್ಲೇ ತರಿಸಿಕೊಡುತ್ತೇನೆ'' ಎಂಬುದಾಗಿ ಹೇಳಿದ್ದರು. ಈ ರೀತಿ ಅವರು ತಿಳಿಸಿದ್ದು ನಾನು ಹೋದ ಸಾರಿ—ಈ ಅಧಿವೇಶನಕ್ಕೆ ಬಂದಿದ್ದಾಗ. ಆದರೆ ನಾನು ಆ ಅಧಿವೇಶನವನ್ನು ಮುಗಿಸಿಕೊಂಡು ಊರಿಗೆ ಹೋಗಿ ಪುನಃ ವಾಪಸ್ಸು ಈ ಅಧಿವೇಶನಕ್ಕೆ ಬಂದರೂ ಆ ಕಾರ್ಯವಿನ್ನೂ ಆಗಿಲ್ಲ. ಪಾಠಶಾಲೆಗಳೆಲ್ಲಾ ಮೇ ತಿಂಗಳಿಂದಲೇ ಪ್ರಾರಂಭವಾಗಿರುತ್ತವೆ. ಆದರೆ ಸರ್ಕಾರದವರು ಗ್ರಾಂಟನ್ನೇ ಕೊಡದಿದ್ದರೆ ನಾವು ಹೇಗೆ ಹಾಸ್ಟಲನ್ನು ನಡೆಸುವುದು? ಇದಕ್ಕಾಗಿ ಸರ್ಕಾರದವರು ಕೆಲವು ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಹಾಗೆ ಮಾಡದೆ ಇಂಗ್ಲೀಷಿನಲ್ಲಿರುವ "An ingenious man in every house" ಎಂಬ ಗಾದೆಯಂತೆ "ಒಂದು ದೊಡ್ಡ ಸ್ಪ್ಯಾನರ್ ತೆಗೆದುಕೊಂಡು ಒಂದು ರೇಡಿಯೋ ಸರಿಮಾಡಿದ" ಎನ್ನುವಂತೆ ತಾವು ಈ ಕಾರ್ಯವನ್ನು ಮಾಡಬಾರದು. ತಾವು ಈ ವಿಚಾರದಲ್ಲಿ ಏನಾದರೂ ಚರ್ಚೆಮಾಡಿ ಆಖೈರಿನಲ್ಲಿ ಒಂದು ತೀರ್ಮಾನ ತೆಗೆದುಕೊಳ್ಳಿ. ನಾನು ಅನೇಕ ಹಾಸ್ಟಲುಗಳನ್ನು ನಡೆಸಿದ್ದೇನೆ. ಅವುಗಳ ಅನುಭವ ನನಗೆ ಚೆನ್ನಾಗಿದೆ. ಆದರೆ ಈ ದಿವಸ ನಮ್ಮ ಮುಂದಿರತಕ್ಕ ಬಡ್ಜೆಟ್ಟಿನಲ್ಲಿ ನಾನು ಒಂದು ವಿಚಾರ ನೋಡಿದೆನು. ಇದೇನಿಷ್ಟು ಜಾಸ್ತಿ ಮೊಬಲಗನ್ನೊದಗಿಸಿದ್ದಾರಲ್ಲಾ ಎಂದು ನಾನು ಪ್ರತಿಯೊಂದು ಐಟಂನ್ನೂ ನೋಡುತ್ತಾ ಹೋದರೆ ಡಿಪ್ರೆಸ್ಡ್ ಕ್ಲಾಸ್ ಪ್ರತ್ಯೇಕ ಪ್ರೈಮರಿ ಸ್ಕೂಲುಗಳಿಗಾಗಿ ಹಣ ಖರ್ಚು ಮಾಡುತ್ತೀರಿ. ಇದು ಖಂಡಿತಬೇಡ ಎಂದು ಸರ್ಕಾರದವರಿಗೆ ನಾನು ದೇವರಾಣೆ ಮಾಡಿ ಬಹಳ ನಮ್ರತೆಯಿಂದ ಬೇಡಿಕೊಳ್ಳುತ್ತೇನೆ. ಅಷ್ಟು ದೊಡ್ಡ ಮೊಬಲಗಿನಲ್ಲಿ ನಮ್ಮ ಜನರ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಖರ್ಚಾಗುತ್ತಿರುವುದು ಕೇವಲ ಆರು ಲಕ್ಷ 55 ಸಾವಿರ ಚಿಲ್ಲರೆ ಮಾತ್ರ. ಹೀಗೆ ಇವರಿಗಾಗಿ ಪ್ರತ್ಯೇಕ ಪಾಠಶಾಲೆಗಳಿಗಾಗಿ ಹಣ ಖರ್ಚು ಮಾಡುವುದನ್ನು ಕೂಡಲೆ ನಿಲ್ಲಿಸಬೇಕೆಂದು ಹೇಳುತ್ತೇನೆ.

ಶ್ರೀ ವಿ. ವೆಂಕಟಪ್ಪ.—ನಾವು ಈಚೆಗೇನೂ ಆ ಹಣವನ್ನು ಹೊಸದಾಗಿ ಒದಗಿಸುತ್ತಿಲ್ಲ. ಈ ಹಿಂದಿನಿಂದಲೂ ಯಾವುವು ನಡೆದುಕೊಂಡು ಬರುತ್ತಿವೆಯೋ ಅಂಥವುಗಳಿಗೋಸ್ಕರವಾಗಿ ಆ ಮೊಬಲಗನ್ನು ತೋರಿಸಿ

(ಶ್ರೀ ವಿ. ವೆಂಕಟಪ್ಪ)

ದೆಯೇ ಹೊರತು ಹೊಸದಾಗಿ ತೆರೆಯುವುದಕ್ಕಾಗಿ ಏನೂ ಅಲ್ಲ ಎಂಬುದನ್ನು ತಾವು ತಿಳಿಯಬೇಕು.

ಶ್ರೀ ಜಿ. ದುಗ್ಗಪ್ಪ.—ತಾವು ಈ ಬಾಬುಗಳನ್ನೆಲ್ಲಾ ಕೂಡಲೇ ನಿಲ್ಲಿಸಿಬಿಡಬೇಕೆಂದು ಹೇಳುತ್ತೇನೆ. ಬಾಬು ಗಳಿಗೆ ತೆಗೆದಿಟ್ಟಿರುವ ಹಣವನ್ನು ತಾವು ಆಯಾ ಕೋಮಿನ ವಿದ್ಯಾರ್ಥಿಗಳ ವಿದ್ಯಾರ್ಥಿವೇತನಕ್ಕಾಗಿ ಉಪಯೋಗಿಸಿ ಎಂದು ಸಲಹೆ ಮಾಡುತ್ತೇನೆ. ಜಾತಿ ಗಳನ್ನು ಪ್ರಬಲಗೊಳಿಸುವಂಥ ಕಾರ್ಯಕ್ರಮಗಳಿಗೆ ಕಾಂಗ್ರೆಸ್ ಸರ್ಕಾರ ಉತ್ತೇಜನ ಕೊಡಬಾರದು. ಡಿಪ್ರೆಸ್ಡ್ ಕ್ಲಾಸಿನವರಿಗಾಗಿ ಪ್ರತ್ಯೇಕ ಹಾಸ್ಟಲುಗಳೂ ಇರಬಾರದು—ಸ್ಕೂಲುಗಳೂ ಇರಬಾರದು. ಈ ದಿವಸ ಆದಿಕರ್ಣಾಟಕರಿಗೆ ಪ್ರತ್ಯೇಕ ಸ್ಕೂಲುಗಳಿರುತ್ತ ವೆಂದು ಹೇಳಿದರೆ ಅದು ತೀರ ನಾಚಿಗೆಗೇಡು. ಆದ್ದ ರಿಂದ ತಾವೀಗ ಬಡ್ಜೆಟ್ಟಿನಲ್ಲಿ ಆದಿಕರ್ಣಾಟಕರ ಸ್ಕೂಲು ಗಳಿಗೆ ತೆಗೆದಿಟ್ಟಿರುವ ಮೊಬಲಗನ್ನು ಅವರಿಗೆ ಸ್ಕಾಲರ್‌ಷಿಪ್ ಕೊಡಲು ಉಪಯೋಗಿಸಿ ಆ ಶಾಲೆ ಗಳನ್ನು ವಜಾ ಮಾಡಿ ಸಾರ್ವಜನಿಕ ಶಾಲೆಗಳನ್ನೇ ಜಾರಿಗೆ ತರಬೇಕೆಂದು ಹೇಳುತ್ತೇನೆ.

6 P.M.

ಇನ್ನೊಂದು ವಿಚಾರವನ್ನು ನಮ್ರತೆಯಿಂದ ಮನವಿ ಮಾಡಿಕೊಳ್ಳುತ್ತೇನೆ. ದ್ವಿತೀಯ ಪಂಚವಾರ್ಷಿಕ ಯೋಜನೆಯ ಬಗ್ಗೆ ನಮ್ಮ ಸರ್ಕಾರದ ಮುಂದೆ ಒಂದು ನೀತಿ ಇಲ್ಲ. ಹರಿಜನರ ಪ್ರಗತಿ ಆಗಬೇಕು ಎಂದು ಬಹಳವಾಗಿ ಹೇಳುತ್ತೇವೆ. ಒಂದು ವರ್ಷದಲ್ಲಿ ಇಷ್ಟು ಲಕ್ಷ ರೂಪಾಯಿ ಖರ್ಚಾದರೆ ಅಥವಾ ಐದು ವರ್ಷದ ಅವಧಿಯಲ್ಲಿ ಒಂದು ಕೋಟಿ ರೂಪಾಯಿ ಖರ್ಚಾದರೆ ಆ ಐದು ವರ್ಷದ ಅಂತ್ಯದಲ್ಲಿ ಎಷ್ಟು ಜನರು ವಿದ್ಯಾ ವಂತರಾಗಿದ್ದಾರೆ ಎಂಬುದನ್ನು ಗಮನಿಸಿಲ್ಲ. ಇಷ್ಟೊತ್ತು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಐದು ವರ್ಷದ ಕೊನೆಯಲ್ಲಿ ನಾವು ಏನು ನೋಡುತ್ತಾ ಇದ್ದೇವೆ ? ಮೋಟು ಗೋಡೆ, ಒಡಕು ಹೆಂಚುಗಳನ್ನು ನೋಡುತ್ತಾ ಇದ್ದೇವೆ. ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ, ನಾವು ಪ್ರಗತಿ ಸಾಧಿಸಿರುವುದಾದರೂ ಏನು ? ಅಲ್ಲಲ್ಲಿ ಕೆಲವು ಒಳ್ಳೆಯ ಮನೆಗಳಿರಬಹುದು, ಆದರೂ ಹೆಚ್ಚಾಗಿರುವುದೆಲ್ಲಾ ಮೋಟು ಗೋಡೆ, ಒಡಕು ಹೆಂಚು. ಇದು ಪ್ರಗತಿಯ ಕುರುಹು ಅಲ್ಲ. ಒಂದು ಕೋಟಿ ರೂಪಾಯಿ ಖರ್ಚು ಮಾಡಿದರೆ ಎಷ್ಟು ಜನ ವಿದ್ಯಾವಂತರಾಗಿದ್ದಾರೆ ಎಂಬುದನ್ನು ನೋಡ ಬೇಕು. ಹಿಂದೆ ಇದೇ ಸಂಸ್ಥಾನದಲ್ಲಿ ಘನಹೊಂದಿದ ಆಡಳಿತಗಾರರು ಈ ದೃಷ್ಟಿಯನ್ನರಿತು ನಮ್ಮ ವಿದ್ಯಾ ಭ್ಯಾಸದ ನೀತಿಯನ್ನು ಹಾಕಿದ್ದರು. ಇಂದು ಈ ಸಭೆ ಯಲ್ಲಿ ನಾನು ಭಾಷಣ ಮಾಡಬೇಕಾಗಿದ್ದರೆ ಹಿಂದೆ ಅವರು ಸ್ಥಾಪನೆ ಮಾಡಿದ ಹಾಸ್ಟಲುಗಳಿಂದ ಸಾಧ್ಯ ವಾಗಿದೆ ಎಂದು ಹೇಳಬೇಕಾಗಿದೆ. ವಿದ್ಯಾಪ್ರಗತಿ ಎಂದರೆ ಯಾವುದು ? ದೊಡ್ಡ ದೊಡ್ಡ ಮನೆಗಳನ್ನು ಕಟ್ಟುವುದು ಪ್ರಗತಿ ಅಲ್ಲ. ಹೆಚ್ಚು ದುಡ್ಡು ಖರ್ಚು ಮಾಡಿ, ಹೆಚ್ಚು ಜನರನ್ನು ವಿದ್ಯಾವಂತರನ್ನಾಗಿ ಮಾಡಿದರೆ ಅದು ಒಂದು ಆದರ್ಶ ನೀತಿಯಾಗುತ್ತ ದೆಯೇ ಹೊರತು ಮತ್ತೆ ಬೇರೆ ಅಲ್ಲ.

ಇನ್ನು ಒಂದೇ ಒಂದು ಅಂಶವನ್ನು ಈ ಸಮಯದಲ್ಲಿ ಹೇಳಬೇಕಾಗಿದೆ. ಈ ಸಂಸ್ಥಾನದಲ್ಲಿ ಕೆಲವು ಮುನಿಸಿ ಪಲ್ ಹೈಸ್ಕೂಲುಗಳಿವೆ. ಮುನಿಸಿಪಾಲಿಟಿಯವರ ಆದ್ಯ ಕರ್ತವ್ಯ ಆರೋಗ್ಯ ಮತ್ತು ನೈರ್ಮಲ್ಯದ ಕಡೆಗೆ ಗಮನ ಕೊಡುವುದು. ಅದರ ಜೊತೆಗೆ ಈ ಹೈಸ್ಕೂಲು ಗಳ ಭಾರವನ್ನು ಕೂಡ ಹೊರಿಸುವುದು ನ್ಯಾಯವಲ್ಲ. ಒಂದು ಉದಾಹರಣೆ ಹೇಳುವುದಾದರೆ, ಹೊಳಲ್ಕೆರೆ ಯಲ್ಲಿ ಒಂದು ಮುನಿಸಿಪಲ್ ಹೈಸ್ಕೂಲು ಇದೆ. ಇದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಅಲ್ಲಿ ಕೆಲಸ ಮಾಡತಕ್ಕ ಉಪಾಧ್ಯಾಯರಿಗೆ ಮೂರು ತಿಂಗಳಾ ದರೂ ಸಂಬಳ ಕೊಟ್ಟಿಲ್ಲ. ಯಾರು ಇದನ್ನು ನೋಡ ಬೇಕು ? ಯಾವ ಮುನಿಸಿಪಾಲಿಟಿಯವರಿಗೆ ಈ ಕರ್ತವ್ಯವನ್ನು ನೆರವೇರಿಸಲಿಕ್ಕೆ ಶಕ್ತಿ ಇಲ್ಲವೋ ಅಂತಹ ವರ ಮೇಲೆ ಈ ಭಾರವನ್ನು ಹೊರಿಸಬೇಡಿ. ಬೇರೆ ಸಂಸ್ಥೆಗಳಿಗೆ ವಹಿಸಿ, ಇಲ್ಲದೇ ಇದ್ದರೆ ಜಾಸ್ತಿ ಗ್ರಾಂಟು ಕೊಟ್ಟು ಸೂಸೂತ್ರವಾಗಿ ನಡೆಯುವಂತೆ ಮಾಡಿ ಎಂದು ಹೇಳಿ, ತಾವು ನನಗೆ ಅವಕಾಶ ಕೊಟ್ಟದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಡಾ॥ ಸರ್ದಾರ್ ಬಿ. ಕೆ. ನಾಗೂರ್ (ಬಿಜಾ ಪುರ).—ಮಾನ್ಯ ಸಭಾಪತಿಯವರೇ, ಐದು ನಿಮಿಷ ಕೊಟ್ಟಿದ್ದೀರಿ. ಬಹಳ ತೀವ್ರವಾಗಿ ಮಾತನಾಡ ಬೇಕೆಂದು ಇದ್ದೇನೆ ಎಂದು ವಿನಂತಿ ಮಾಡಿಕೊಂಡು ಮಾತನಾಡುತ್ತಾ ಇದ್ದೇನೆ. ಪ್ರತಿ ಸಾರಿ ನಾನು ನಿಂತಾಗಲೂ 20 ಜನ ಎದ್ದು ನಿಲ್ಲುತ್ತಾ ಇದ್ದರು. ಕಡೆಯದಾಗಿ ನನಗೆ ಅವಕಾಶ ಕೊಟ್ಟರಿ. ಕೆಲವರಿಗೆ 15 ನಿಮಿಷ, ಕೆಲವರಿಗೆ 10 ನಿಮಿಷ ಕೂಡ ಕೊಟ್ಟಿದ್ದೀರಿ. ಈಗ ಐದು ನಿಮಿಷ ಇರುವುದು ಮೂರು ನಿಮಿಷಕ್ಕೆ ಬರಬಾರದು ಎಂದು ಹೇಳಿ ವಿನಂತಿ ಮಾಡುತ್ತೇನೆ.

ಅಧ್ಯಕ್ಷರು.—ಇದು ಏನಿದ್ದರೂ ಅವರವರ ಅದೃಷ್ಟ ಅದಕ್ಕೆ ಏನು ಮಾಡುವುದು ?

ಡಾ॥ ಸರ್ದಾರ್ ಬಿ. ಕೆ. ನಾಗೂರ್.—ಅಂತು ಅದು ಹೇಗಾದರೂ ಇರಲಿ. ಶಿಕ್ಷಣ ಶಾಖೆಯ ವೆಚ್ಚ ದಲ್ಲಿ ಹಳೆಯ ಮೈಸೂರು ಪ್ರದೇಶ ಮತ್ತು ಹೊಸ ಮೈಸೂರು ಪ್ರದೇಶ ಎಂದು ಹೇಳಿ ಮಾನ್ಯ ಮಂತ್ರಿ ಗಳೇ ಹೇಳುತ್ತಾ ಇದ್ದಾರೆ. ಈ ರೀತಿ ನಿಚ್ಚಳವಾದ ಪಕ್ಷಪಾತ ತೋರಿಸಲಾಗಿದೆ. ಈಗ ಎಲ್ಲವೂ ಸೇರಿ ಒಂದು ಪ್ರದೇಶವಾಗಿರುವಾಗ ಈ ರೀತಿಯ ಭಿನ್ನಾಭಿ ಪ್ರಾಯವುಂಟಾಗುವಂತೆ ನೀವು ಏನು ಹೇಳುತ್ತಾ ಇದ್ದೀರಿ ಆ ರೀತಿ ಅನ್ನಲಿಕ್ಕೆ ನಾವು ತಯಾರಿಲ್ಲ. ಈಗ ಇಲ್ಲಿ ಎರಡು ವಿಶ್ವವಿದ್ಯಾನಿಲಯಗಳು ಇವೆ. ಒಂದು ಮೈಸೂರು ವಿಶ್ವವಿದ್ಯಾನಿಲಯ, ಇನ್ನೊಂದು ಕರ್ನಾ ಟಕ ವಿಶ್ವವಿದ್ಯಾನಿಲಯ. ಇದು ಹಿಂದಿನಿಂದ ಬಂದಿದೆ. ಇದಕ್ಕೆ ಹೊಸ ಮೈಸೂರು ಹಳೆಯ ಮೈಸೂರು ಎಂಬ ಪರಿಪಾಟ ಬರುವುದಿಲ್ಲ. ಮಾನ್ಯ ಮಂತ್ರಿಗಳು ಉತ್ತರ ಕೊಡುವ ಕಾಲಕ್ಕೆ ಹೊಸ ಮೈಸೂರು, ಹಳೆಯ ಮೈಸೂರು ಎಂದು ಹೇಳಿದರೂ ಹೇಳಬಹುದೇನೋ. ನಾವು ಮಾತ್ರ ಅನ್ನಲಿಕ್ಕೆ ತಯಾರಿಲ್ಲ. ಅಂತು ಈಗ ಏನಾಗಿದೆ ಎಂದರೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ 54 ಲಕ್ಷ ರೂಪಾಯಿ ಗ್ರಾಂಟು ಕೊಡುತ್ತಾ ಇದ್ದೀರಿ. ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಏಳು ಲಕ್ಷ ರೂಪಾಯಿ ಗ್ರಾಂಟು ಕೊಡುತ್ತಾ ಇದ್ದೀರಿ. ಇದು ಯಾವ ನ್ಯಾಯಸಮ್ಮತವಾದ ಮಾತು ? ಮಲತಾಯಿಯ ದೃಷ್ಟಿಯನ್ನಿಟ್ಟುಕೊಂಡಿಲ್ಲವೇ ಎಂದು ಕೇಳುತ್ತಾ ಇದ್ದೇನೆ. ನೀವು ಇದೇ ರೀತಿ ಅಲಕ್ಷ್ಯಮಾಡಿದರೆ, ಕರ್ನಾಟಕದ ಆ ಭಾಗದವರನ್ನು ಕಡೆಗಾಣಿಸಿದ್ದೇ ಆದರೆ ರಾಜ್ಯದಲ್ಲಿ ಅಸಂತೊಷ ಹೆಚ್ಚಬಹುದು. ಮಂತ್ರಿಗಳು ಉತ್ತರ ಕೊಟ್ಟಮೇಲೆ ತಿರುಗಿ ಮಾತ ನಾಡಲಿಕ್ಕೆ ನನಗೆ ಅವಕಾಶವಿರುವುದಿಲ್ಲ. ಆದ್ದರಿಂದ ಆ ರೀತಿ ಆಗಬಾರದು ಎಂದು ಹೇಳಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಹರಿಜನರ ವಿಚಾರದಲ್ಲಿ ನಮ್ಮ ಮಿತ್ರರಾದ ದುಗ್ಗಪ್ಪನವರು ಬೇಕಾದಷ್ಟು ಹೇಳಿದ್ದಾರೆ. ಆದರಿಂದ ಮತ್ತೆ ನಾನು ಆ ವಿಷಯದಲ್ಲಿ ಹೆಚ್ಚಿಗೆ ಹೇಳುವುದಕ್ಕೆ ಇಷ್ಟ ಪಡುವುದಿಲ್ಲ.

ಎಲ್ಲವನ್ನೂ ರಾಷ್ಟ್ರೀಕರಿಸುವ ಸರ್ಕಾರ ಶಿಕ್ಷಣವನ್ನೇಕೆ ರಾಷ್ಟ್ರೀಕರಿಸಬಾರದು ? ಪಾನಪ್ರತಿಬಂಧದ ಬಗ್ಗೆ ಎದೆಗೆ ಕೈಹಚ್ಚಿ ಧೈರ್ಯದಿಂದ ಮಾತನಾಡುವ ಮಾನ್ಯಮಂತ್ರಿಗಳು ಶಿಕ್ಷಣದ ವಿಷಯದಲ್ಲಿ ಏಕೆ ಧೈರ್ಯದಿಂದ ಕಾರ್ಯ ಮಾಡುತ್ತಿಲ್ಲ? ಶಿಕ್ಷಣಶಾಖೆಯಲ್ಲೂ ಜಬರ್ದಸ್ತಿನಿಂದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಐದು ವರ್ಷದ ಮಕ್ಕಳನ್ನು ಇಲ್ಲೂ ಕೂಡ ಶಾಲೆಗೆ ಒತ್ತಾಯವಾಗಿ ಕಳಿಸುತ್ತಾ ಇದ್ದಾರೆ. ಈ ಪದ್ಧತಿ ತಪ್ಪು. ಆರು ವರ್ಷ ಆಗುವವರೆಗೂ ಅವರಿಗೆ ಸರಿಯಾದ ಜ್ಞಾನ, ತಿಳಿವಳಿಕೆ ಇರುವುದಿಲ್ಲ. ಆದ್ದರಿಂದ ಆ ರೀತಿ ಮಾಡಬಾರದೆಂದು ಕೇಳಿಕೊಳ್ಳುತ್ತೇನೆ.

ಮೆಡಿಕಲ್ ಕಾಲೇಜು, ಇಂಜನಿಯರಿಂಗ್ ಕಾಲೇಜು ಇವುಗಳಲ್ಲಿ ತಾವು ಯಾವರೀತಿ ಬೇಕಾದರೂ ಮಾಡಿಕೊಳ್ಳಿ, ಹಳೆಯ ಮೈಸೂರು, ಹೊಸ ಮೈಸೂರು ಎನ್ನುವ ಮಾತನ್ನು ಬಿಡಿರಿ. ಮೈಸೂರಿನವರು, ಮಾದರೀ ಮೈಸೂರಿನವರೆಂದು ಹೇಳಿಕೊಳ್ಳುತ್ತೀರಿ, ಇದು ಮುಂದುವರಿದ ಪ್ರದೇಶ ಸಂತೋಷ. ಉತ್ತರ ಕರ್ನಾಟಕ, ಹೈದರಬಾದು ಪ್ರದೇಶಗಳವರಿಗೂ ಶಾಲಾ ಕಾಲೇಜುಗಳಲ್ಲಿ ಒಂದು ಹೆಚ್ಚಿನ ಆಸ್ಪದ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಉತ್ತರ ಕರ್ನಾಟಕದ ಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕೆಂದು ಹೇಳುತ್ತೇನೆ.

ಸ್ಕೂಲು ಬೋರ್ಡ್ ಎಂದು ಹೇಳಿ ಇದೆ. ಅಲ್ಲಿ ತಪ್ಪು ಅಂತೂ ಹೇಳತೀರದು. ಕನ್ನಡ ಶಾಲೆಯಲ್ಲಿ ಮೊದಲಿನಿಂದಲೂ ಮಾತೃ ಭಾಷೆಯಲ್ಲಿ ಪಾಠ ಹೇಳಿಕೊಡತಕ್ಕ ಮಾಸ್ತರರನ್ನು ಯಾವರೀತಿ ನೋಡುತ್ತಾ ಇದ್ದೀರಿ ಎನ್ನುವುದು ವಿಚಿತ್ರವಾಗಿದೆ. ಏಕೆಂದರೆ ಇಲ್ಲಂತೂ ಲಂಚಕ್ಕೆ ಕೊರತೆಯೇ ಇಲ್ಲ. ಎದ್ದ ಕೂಡಲೇ ನಮಸ್ಕಾರ ಸ್ವಾಮಿ ಎದ್ದೀರಾ? ಎಂದು ಕೇಳುವ ಪರಿಪಾಠವಿದೆ. ಅದರ ಬದಲು ಈಗ ಎದ್ದ ಕೂಡಲೇ 'ಲಂಚ ರಿ' ಎನ್ನುವ ಕಾಲ ಬಂದಿದೆ. ವಿಷಾದ. ಈರೀತಿಯಾಗಿ ಸ್ಕೂಲ್ ಬೋರ್ಡಿನಲ್ಲಿ ಪವಿತ್ರವಾಗಿರತಕ್ಕ ಶಿಕ್ಷಣ ಶಾಖೆಯಲ್ಲಿ, ಕನ್ನಡ ಶಾಲೆಯ ಮಾಸ್ತರುಗಳನ್ನು ನೌಕರಿಗೆ ತೆಗೆದುಕೊಳ್ಳುವ ಕಾಲದಲ್ಲಿ ಲಂಚ ಪಡೆದು ನೇರವಾಗಿ ತೆಗೆದುಕೊಂಡರೆ, ಲಂಚ ಪಡೆದು ವರ್ಗಾ ವರ್ಗಿ ಮಾಡಿದರೆ, ಪವಿತ್ರವಾಗಿರತಕ್ಕ ಶಿಕ್ಷಣಖಾತೆಯಲ್ಲಿ ಕಲಿಯುವ ಹಳ್ಳಿಯ ಮಕ್ಕಳಮೇಲೆ ಅದರ ಪರಿಣಾಮವಾಗುತ್ತದೆ. ವಿದ್ಯಾಭ್ಯಾಸಮಾಡುವ ಕಾಲದಲ್ಲಿ ಕೊಟ್ಟಿದ್ದ ಲಂಚವನ್ನು ಬೇರೆ ರೀತಿಯಿಂದ ತೆಗೆದುಕೊಳ್ಳುವುದಕ್ಕೆ ಅವರಿಗೆ ತಾವಾಗಿಯೇ ಕಲಿಸಿಕೊಡುತ್ತಿದ್ದೀರಿ. ನನಗೆ ಶಿಕ್ಷಣಖಾತೆಯ ಬಗ್ಗೆ ಹೆಚ್ಚಿನ ಅಭಿಮಾನವಿದೆ. ಕನ್ನಡ ಮಾಸ್ತರುಗಳು ಲಂಚ ತಿನ್ನುವುದಕ್ಕೆ ಅವಕಾಶ ಇರುವುದಿಲ್ಲ. ಒಂದುವೇಳೆ ಅವರು ಲಂಚ ತಿಂದರೆ ಏನು ತಿನ್ನಬೇಕು? ಪಾಟಿ, ಪೆನಶೀಲು ತಿನ್ನಬೇಕು ಇಲ್ಲವೇ ಫಳ ಹಾಗೂ ಖಡು ತಿನ್ನಬೇಕು. ಇಂಥ ಪವಿತ್ರವಾಗಿರತಕ್ಕ ಮಾಸ್ತರುಗಳು ತಮ್ಮ ವರ್ಗಾ ವರ್ಗಿ ಕಾಲದಲ್ಲಿ ಲಂಚ ಕೊಡುವುದು ಬಹಳ ವಿಚಿತ್ರವಾಗಿ ಕಾಣುತ್ತದೆ.

ಗಂಡ ಹೆಂಡತಿ ಇಬ್ಬರೂ ಶಿಕ್ಷಕ ಶಿಕ್ಷಕಿಯರಿದ್ದರೆ, ಗಂಡನನ್ನು ಒಂದುಕಡೆ ಹಾಕಿ, ಹೆಂಡತಿಯನ್ನು ಮತ್ತೊಂದು ಕಡೆ ವರ್ಗ ಮಾಡುವುದು, ಅವರಿಂದ ಲಂಚ ತಿಂದು, ನಿಮ್ಮ ಭಾಷೆಯಲ್ಲಿ ಹೇಳುವುದಾದರೆ, ಏನಾದರೂ ಸ್ವಲ್ಪ ಸಂಭಾವನೆಯನ್ನು ತೆಗೆದುಕೊಂಡು ಅವರ ವರ್ಗಾವರ್ಗಿಯನ್ನು ರದ್ದುಮಾಡಿ, ಇಬ್ಬರನ್ನೂ ಒಂದು ಕಡೆಗೆ ಹಾಕುವುದು ಇಂಥ ಪರಿಪಾಠವಿದೆ. ಪವಿತ್ರವಾದ ಶಿಕ್ಷಣ ಖಾತೆಯಲ್ಲಿ ಈ ತರಹ ಅನ್ಯಾಯಗಳಾಗುತ್ತಿವೆ.

ಇನ್ನು ಕೊನೆಯ ದಾಗಿ ಒಂದೇ ಒಂದು ಮಾತನ್ನು ಹೇಳುತ್ತೇನೆ. Changing map of Asia ಎಂಬ ಒಂದು ಪುಸ್ತಕದಲ್ಲಿ ಒಂದು ಮಾತು ಹೇಳಿದ್ದಾರೆ. ಅದರಲ್ಲಿ ಮಣ್ಣು ಹೆಂಚಿಯ ಪಾಠಶಾಲೆ, ಅದರ ಮೇಲೆ ಇಟ್ಟಿಗೆಯ ಹೈಸ್ಕೂಲು, ಅದರಮೇಲೆ ಕಾಂಕ್ರೀಟಿನ ಕಾಲೇಜು, ಇದು ಹಿಂದೂಸ್ತಾನದ ಶಿಕ್ಷಣ ಪದ್ಧತಿ ಎಂದು ಹೇಳಿದ್ದಾರೆ. ಆದುದರಿಂದ ಹಿಂದೂಸ್ಥಾನವು ಸ್ವತಂತ್ರವಾಗಿರುವಾಗ ಬೇರೆಯವರು ಹೀಗೆ ಹೇಳುವುದು ನಮಗೆ ಅಗೌರವ. ನಮ್ಮ ಶಿಕ್ಷಣ ಪದ್ಧತಿಯಲ್ಲಿ ಇತರರು ಅದನ್ನು ನೋಡಿ ಕಲಿಯುವ ರೀತಿಯಲ್ಲಿ ಮಾರ್ಪಾಡು ಮಾಡಬೇಕೆಂದು ಹೇಳುತ್ತೇನೆ. ನನಗೆ ಕೊಟ್ಟ ಐದು ಮಿನಿಟುಗಳಲ್ಲಿ ಅಧ್ಯಕ್ಷರಿಂದ ಗಂಟೆ ಬಡಿಸಿಕೊಳ್ಳದೆ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್ (ಪುತ್ತೂರು—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ನಾನು ಇವೊತ್ತಿನ ಭಾಷಣಕ್ಕಾಗಿ ಎಷ್ಟೋಸಾರಿ ನಿಂತಿದ್ದಕ್ಕೆ ಕೊನೆಗೆ ನನ್ನ ಅದೃಷ್ಟವಶದಿಂದ ಈಗಲಾದರೂ ಒಂದು ಅವಕಾಶವನ್ನು ಒದಗಿಸಿಕೊಟ್ಟುದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ವಿದ್ಯಾಭ್ಯಾಸ ವಿಭಾಗ ಬಹಳ ಮುಖ್ಯವಾದುದು. ಎಲ್ಲ ಉದ್ಯೋಗಗಳಿಗೂ, ಎಲ್ಲಾ ನೌಕರಿಗಳಿಗೂ ಮತ್ತು ದೇಶದ ಯಾವುದೇ ವಿಭಾಗಗಳಿಗೂ, ವಿದ್ಯಾಭ್ಯಾಸವೇ ಮೂಲವೆಂಬುದನ್ನು ನಾವೆಲ್ಲ ಒಪ್ಪಿಕೊಂಡಿರುವ ಮಾತು. ವಿದ್ಯಾಭ್ಯಾಸ ಪ್ರಸಾರವಾಗಿದೆ, ಅದು ದೇಶದಲ್ಲೆಲ್ಲರಿಗೂ ಲಭಿಸದೆ ಇದ್ದರೆ, ದೇಶದ ಏಳಿಗೆ ಅಥವಾ ನಾಗರಿಕತೆ ಮೇಲ್ಮಟ್ಟಕ್ಕೆ ಬರಲಾರದು ಎಂದು ಸಾರಿಸಾರಿ ಹೇಳುತ್ತಿದ್ದೇವೆ. ಇಂಥ ಸಮಯದಲ್ಲಿ ನಮ್ಮ ಮೈಸೂರು ಸರ್ಕಾರದ ಬಜೆಟ್ಟನ್ನು ನೋಡಿದರೆ ಒಟ್ಟಿನಲ್ಲಿ ಹೆಚ್ಚು ಹಣವನ್ನು ಒದಗಿಸಿದ್ದಾರೆ. ನಾವು ಇದನ್ನು ಸಮರ್ಥಿಸಲೇಬೇಕು, ಇದನ್ನು ಸ್ವಾಗತಿಸಲೇಬೇಕು ಎಂದು ಹೇಳುತ್ತಿದ್ದೇನೆ. ಈಗ ನಮ್ಮಲ್ಲಿರುವ ವಿದ್ಯಾಭ್ಯಾಸ ಕ್ರಮ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯಾಗಿದೆ ಇದರಲ್ಲಿ ತಳಪಾಯದಿಂದ, ಅಡಿಕಟ್ಟಿನಿಂದ, ಒಂದೇರೀತಿಯಾಗಿ ವಿದ್ಯಾಭ್ಯಾಸವನ್ನು ಕೊಡತಕ್ಕ ಕ್ರಮ ಬರಬೇಕು. ಏಕೆಂದರೆ ವಿದ್ಯಾಭ್ಯಾಸ ಕ್ರಮ ಒಂದೇರೀತಿ ಇರುವುದು ನಿಜವಾಗಿಯೂ ಪ್ರಾಮುಖ್ಯವಾದುದು. ಇವೊತ್ತಿನ ಪಾಠಕ್ರಮದಲ್ಲಿ, ಪಾಠಪ್ರವಚನಗಳಲ್ಲಿ ಮೊದಲು ಏಕರೂಪತೆ ಬಂದರೆ ಅದರಿಂದ ಎಷ್ಟೋ ಸಮಸ್ಯೆಗಳು ಬಗೆಹರಿದಾವು ಎಂದು ತಿಳಿಯುತ್ತೇನೆ. ನನ್ನ ಕ್ಷೇತ್ರದಲ್ಲಿ ಒಬ್ಬರು ಹೇಳಿದುದನ್ನು ಕೇಳಿದ್ದೇನೆ. ಅವರು ಸರ್ಕಾರದಲ್ಲಿ ತುಂಬ ಅಭಿಮಾನ ಇರುವವರು, ಕಾಂಗ್ರೆಸ್ ಸಂಸ್ಥೆಯಲ್ಲಿ ಅಭಿಮಾನವಿರುವವರು, ಆದರೂ ಉಪಾಧ್ಯಾಯರ ಗೋಳಿನಿಂದ ಮರುಕಗೊಂಡು ನಮ್ಮ ಸರ್ಕಾರದಲ್ಲಿ ಶಿಕ್ಷಣ ವಿಭಾಗವೇ ಇಲ್ಲವೋ, ಅಥವಾ ಶಿಕ್ಷಣ ಇಲಾಖೆಯೇ ಇಲ್ಲವೋ ಎಂದು ಹೇಳಿದುದನ್ನು ಕೇಳಿದ್ದೇನೆ. ಏಕೆಂದರೆ ಸಾಧಾರಣವಾಗಿ ವಿದ್ಯಾ ಸಂಸ್ಥೆಗಳಿಗೆ ಕೊಡಬೇಕಾದ ಗ್ರ್ಯಾಂಟ್ ನಮ್ಮ ಕಡೆ ಕೆಲವು ಸಂಸ್ಥೆಗಳಿಗೆ 1956-57 ರಿಂದ ಬಂದಿಲ್ಲ. ಪುತ್ತೂರು ಪಂಚಾಯಿತಿಯಿಂದ ಈ ವಿಷಯವನ್ನು ಕೇಳಲಿಕ್ಕೆ ಆ ಕಡೆಯಿಂದ ಒಬ್ಬರು ಬಂದಿದ್ದಾರೆ. ಇಷ್ಟೇ ಅಲ್ಲ, ನಮ್ಮ ಕಡೆ ಇರುವ ಉಪಾಧ್ಯಾಯರು

(ಶ್ರೀ ಎಸ್. ಸುಬ್ಬಯ್ಯನಾಯಕ್.)

ತಮ್ಮ ವೇತನದ ವಿಷಯದಲ್ಲಿ ಕೇಳುತ್ತಿದ್ದಾರೆ. ಅದಕ್ಕೆ ಏನು ಜವಾಬು ಹೇಳಬೇಕೆಂಬುದೇ ನನಗೆ ಗೊತ್ತಾಗುವುದಿಲ್ಲ. ಅವರಿಗೆ ಕೆಲವು ತೊಂದರೆಗಳಿವೆ. ಅಲ್ಲಿನ ಉಪಾಧ್ಯಾಯರುಗಳು ತಮ್ಮ ವೇತನಗಳು ಪುನರ್ವಿಮರ್ಶೆಯಾಗಿ, ರಿವೈಸ್ಡ್ ಸ್ಕೇಲ್ ದೊರೆಯುತ್ತದೆ ಎಂದು ಭಾವಿಸಿದ್ದರು. ಆದರೆ ಈಗ ಅದು ಕನ್ನಡಿಯಲ್ಲಿನ ಗಂಟಾಗಿದೆ. ಏಕೆಂದರೆ ಮದರಾಸು ಪ್ರಾಂತದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ಇದ್ದಾಗ್ಗೆ ಇವರಿಗೆ ಏನು ಸಂಬಳ ಬರುತ್ತಿತ್ತೋ ಇವೊತ್ತು ಅಷ್ಟೇ ಬರುತ್ತಿದೆ. 1—11—1956 ರಿಂದ ಅವರು ಮದರಾಸು ರಾಜ್ಯವನ್ನು ಬಿಟ್ಟು ಮೈಸೂರು ರಾಜ್ಯವನ್ನು ಸೇರಿದರು. ಮದರಾಸಿನವರಿಗೆ ತುಟ್ಟಿಭತ್ಯ ಏರಿತು ಮತ್ತು ಸಂಬಳದ ಏರಿಕೆಯೂ ಆಯಿತು. ಆದರೆ ಇವರುಗಳು ಮೈಸೂರಿಗೆ ಸೇರಿದ್ದರಿಂದ ಇವರ ಸಂಬಳ ಮತ್ತು ತುಟ್ಟಿಭತ್ಯದಲ್ಲಿ ಏರಿಕೆಯಾಗಿಲ್ಲ. ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ್ದ ಕಾಸರಗೋಡು ತಾಲ್ಲೂಕು ನಮ್ಮ ಕೈಬಿಟ್ಟು ಈಚೆಗೆ ಕೇರಳ ಪ್ರಾಂತಕ್ಕೆ ಸೇರಿದೆ. ಪುತ್ತೂರು ತಾಲ್ಲೂಕು ಇದಕ್ಕೆ ಲಗತ್ತಾಗಿದೆ. ಕಾಸರಗೋಡು ತಾಲ್ಲೂಕಿನ ಉಪಾಧ್ಯಾಯರುಗಳಿಗೆ ಮತ್ತು ಅಲ್ಲಿಯ ಇನ್ನೂ ಕೆಲವು ನೌಕರರಿಗೆ ಸಂಬಳ ಹೆಚ್ಚಾಗಿದೆ. ಹೀಗೆ ಅಕ್ಕಪಕ್ಕದ ಭಾಗಗಳಲ್ಲಿರುವ ಉಪಾಧ್ಯಾಯರುಗಳ ಸಂಬಳ ಸಾರಿಗೆಗಳು ಹೆಚ್ಚಾಗಿರುವಾಗ ನಮ್ಮ ಉಪಾಧ್ಯಾಯರಿಗೆ ಏನೂ ಅನುಕೂಲವಾಗಿಲ್ಲ. ಅವರಿಗೆ ರಿವೈಸ್ಡ್ ಸ್ಕೇಲುಗಳಿಂದ ಉಪಯೋಗವೂ ಆಗಿಲ್ಲ. ಕೇರಳ ಸರ್ಕಾರ ಹೆಚ್ಚು ಸಂಬಳವನ್ನು ಕೊಟ್ಟಿದೆ, ಹಾಗೆಯೇ ಮದರಾಸು ಸರ್ಕಾರವೂ ಕೊಟ್ಟಿದೆ, ನಮ್ಮ ಜೊತೆಯಲ್ಲಿದ್ದ, ನಮ್ಮ ನೆರೆಹೊರೆಯವರಾದ ಉಪಾಧ್ಯಾಯರುಗಳಿಗೆ ಅನುಕೂಲವಾಗಿರುವಾಗ ಮೈಸೂರು ರಾಜ್ಯದಲ್ಲೆ ರಿವೈಸ್ಡ್ ಸ್ಕೇಲ್ ಜಾರಿಗೆ ಬಂದರೂ ನಮ್ಮ ಜಿಲ್ಲೆಯ ಉಪಾಧ್ಯಾಯರಿಗೆ ಮಾತ್ರ ಏನೂ ಅನುಕೂಲವಾಗದೆ ಹಿಂದೆ ಇದ್ದಂತೆಯೇ ಇರುವುದನ್ನು ನೋಡಿದರೆ, ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಇಟ್ಟಂತಾಗಿದೆ ಎಂದು ಹೇಳುತ್ತೇನೆ. ಇದಕ್ಕೆ ಸರಿಯಾದ ಉತ್ತರ ಕೊಡುವುದಕ್ಕೆ ನಮಗೆ ಬರುವುದಿಲ್ಲ. ಆದುದರಿಂದ ಸರ್ಕಾರದವರು ಈ ವಿಷಯಕ್ಕೆ ತೀವ್ರ ಗಮನಕೊಟ್ಟು, ದಕ್ಷಿಣ ಕನ್ನಡ ಜಿಲ್ಲೆಯ ಉಪಾಧ್ಯಾಯರಿಗೆ ಅನ್ಯಾಯವಾಗದಂತೆ ತ್ವರಿತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಮೈಸೂರು ರಾಜ್ಯದಲ್ಲಿ ಐದು ಪ್ರಾಂತದ ಭಾಗಗಳು ಸೇರಿವೆ. ಈ ಎಲ್ಲ ಭಾಗಗಳಿಗೂ ಸಹ, ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸ ಮಟ್ಟದಲ್ಲಿಯಾದರೂ ಒಂದೇರೀತಿಯಾಗಿ ಪಾಠಪ್ರವಚನಗಳು ನಡೆದರೆ, ಅದರಿಂದ ಎಷ್ಟೋ ಸಮಸ್ಯೆಗಳು ಬಗೆಹರಿದಾವು ಎಂದು ಈ ಮೊದಲೇ ಹೇಳಿದ್ದೇನೆ. Depressed Class ಇತ್ಯಾದಿ ಯಾವ ವರ್ಗಭೇದಗಳೂ ಇಲ್ಲದೆ, ಆರು ವರ್ಷದಿಂದ 14 ವರ್ಷ ವಯಸ್ಸಿನೊಳಗಿರುವ ಪ್ರತಿಯೊಬ್ಬರಿಗೂ ಪ್ರಾಥಮಿಕ ವಿದ್ಯಾಭ್ಯಾಸವು ಕಡ್ಡಾಯವಾಗಿ ಸಿಕ್ಕುವಂತೆಮಾಡಿದರೆ ಎಷ್ಟೋ ತೊಂದರೆಗಳು ಪರಿಹಾರವಾಗಿ, ವರ್ಗ ಭೇದಗಳು ಅಥವಾ ತಾರತಮ್ಯಗಳುಂಟಾಗಲಾರವು ಎಂದು ಹೇಳುತ್ತೇನೆ. ಇಷ್ಟು ಮಾತುಗಳನ್ನಾಡಲು ನನಗೆ ತಾವು ಸಮಯ ಕೊಟ್ಟಿರುವುದಕ್ಕೆ ತಮ್ಮನ್ನು ವಂದಿಸಿ, ನನ್ನ ಮಾತನ್ನು ನಿಲ್ಲಿಸುತ್ತೇನೆ.

ಶ್ರೀ ಟಿ. ಕೆ. ಕಂಬ್ಳಿ (ಕುಂದಗೋಳ್).—ಸನ್ಮಾನ್ಯ ಅಧ್ಯಕ್ಷರೇ, ಮತ್ತು ಮಾನ್ಯರೇ, ಈ ದಿವಸ ನಮ್ಮ ಮುಂದಿರುವ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಡಿಮ್ಯಾಂಡನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಆದರೆ ಈಗ ನಮ್ಮ ಕಡೆ ಇರುವ ಭಾಗದ ಕೆಲವು ತೊಂದರೆಗಳನ್ನು ಹೇಳಬಯಸುತ್ತೇನೆ. ಈಗಿನ ಮೈಸೂರು ಸಂಸ್ಥಾನ ಆಗಲಿಕ್ಕೆ ಪೂರ್ವದಲ್ಲಿದ್ದಂಥ ಅನೇಕ ಸಣ್ಣ ಸಣ್ಣ ಸಂಸ್ಥಾನಗಳು 1948 ರಲ್ಲಿ ವಿಲೀನವಾದುವು. ಆ ಹೊತ್ತಿನಲ್ಲಿ ಅವರುಗಳು ಸ್ವತಂತ್ರವಾಗಿ ಶಾಲೆಗಳನ್ನು ನಡೆಸುತ್ತಿದ್ದರು. ಅವುಗಳಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಸ್ಥಾನವನ್ನು ಕೊಟ್ಟಂಥವು ಎಂದರೆ ಬೊಂಬಾಯಿ ಕರ್ನಾಟಕದಲ್ಲಿನ ಸಾಂಗ್ಲಿ, ಮಿರಜ್, ಜಮಖಂಡಿ, ರಾಮದುರ್ಗ ಮುಂತಾದ ಸಂಸ್ಥಾನಗಳು. ಈ ಸಂಸ್ಥಾನಗಳೆಲ್ಲ ವಿಲೀನವಾದುವು. ಇವುಗಳು ವಿಲೀನವಾಗುವುದಕ್ಕೆ ಮೊದಲೇ, ಸಂಸ್ಥಾನೀಕರು ತಮ್ಮ ಸಂಸ್ಥಾನಗಳೆಲ್ಲ ವಿಲೀನವಾಗುತ್ತವೆ ಎಂದು ತಿಳಿದುಕೊಂಡು 1948 ರ ಪೂರ್ವದಲ್ಲಿ ಎರಡು ಮೂರು ವರ್ಷಗಳಿಂದಲೂ ಆಯಾ ಸಂಸ್ಥಾನಗಳಲ್ಲಿದ್ದ ಶಾಲಾ ಕಟ್ಟಡಗಳನ್ನು ರಿಪೇರಿಮಾಡಲಿಲ್ಲ ಮತ್ತು ಅವುಗಳ ಗೋಜಿಗೇ ಹೋಗಲಿಲ್ಲ. ಇದರಿಂದ ಅಲ್ಲಿನ ಶಾಲೆಗಳು ಯಾವರೀತಿ ಕೆಡಲಿಕ್ಕೆ ಹತ್ತಿದವು. ಆದರೆ ಈ ಸಂಸ್ಥಾನಗಳು ವಿಲೀನವಾದನಂತರವೂ ಇಲ್ಲಿಯವರೆಗೂ ಆ ಕಟ್ಟಡಗಳ ರಿಪೇರಿಯಾಗಲಿಲ್ಲ. ಈಗ ನಮ್ಮ ನವ ಮೈಸೂರು ಸರ್ಕಾರದವರು ಈ ಬಜೆಟ್ಟಿನಲ್ಲಿ ಶಾಲಾ ಕಟ್ಟಡಗಳ ರಿಪೇರಿಗಾಗಿ ಸ್ವಲ್ಪವೇ ದುಡ್ಡನ್ನು ಇಟ್ಟಿರುತ್ತಾರೆ. ಇದು ಸಾಕಾಗುವುದಿಲ್ಲ. ಆದರೆ ಈಗ ಒಂದೊಂದು ಜಿಲ್ಲೆಗೆ 300 ರಿಂದ 400 ರ ತನಕ ಸರ್ಕಾರದವರ ಕಟ್ಟಡಗಳಿರುತ್ತವೆ.

ಈ ಇಮಾರತಿಗಳಿಗೆ ಕರಂಟ ರಿಪೇರ್ಸ್ ಮಾಡುವದು ಅವಶ್ಯಕವಾಗಿದೆ. ಇಲ್ಲದಿದ್ದರೆ ಸ್ವಲ್ಪ ದಿವಸಗಳಲ್ಲಿ ಬಿದ್ದು ಹೋಗುತ್ತವೆ. ಮುಂಬಯಿ ಕರ್ನಾಟಕ ಜಿಲ್ಲೆಗಳಾದ ಧಾರವಾಡ, ಬೆಳಗಾಂವ, ವಿಜಾಪುರ, ಕಾರವಾರಗಳಲ್ಲಿ ಸರ್ಕಾರಿ ಶಾಲೆಯ ದೆಸೆಯಿಂದ ಒಂದು ನಾಲ್ಕಂಶ ದುಡ್ಡು ಸಾರ್ವಜನಿಕರಿಂದ ಇಡಬೇಕೆಂಬ ನಿಯಮವನ್ನು ಅನುಸರಿಸಲಾಗುತ್ತಿದೆ. ಈಗಾಗಲೇ ಒಂದೊಂದು ಜಿಲ್ಲೆಗೆ ಒಂದು, ಒಂದುವರೆ ಲಕ್ಷ ರೂಪಾಯಿಗಳಷ್ಟು ಹಣವನ್ನು ಟ್ರೆಝರಿಗೆ ಸ್ಕೂಲ ಬೋರ್ಡಿಗೆ ತುಂಬಿರುತ್ತದೆ. ಈ ರಕಮು ಹಾಗೆಯೇ ಉಳಿದು ಬಿಟ್ಟಿದೆ. ಎಲ್ಲೆಲ್ಲಿ ಶಾಲಾ ಕಟ್ಟಡಗಳ ಅವಶ್ಯಕತೆಯಿಂದ ತುಂಬಿರುವುದೋ ಅಲ್ಲಲ್ಲ ಈ ಹಣದಿಂದ ಕಟ್ಟಡಗಳನ್ನು ಕಟ್ಟಿಸಿ ಕೊಡುವದಕ್ಕೆ ಸರಕಾರದವರು ತೀವ್ರಗಮನ ಕೊಡಬೇಕೆಂದು ಕಳಕಳಿಯಿಂದ ಹೇಳುತ್ತೇನೆ. ಶಾಲಾ ಕಟ್ಟಡಗಳು ರಿಪೇರಿ ಆಗದಿದ್ದರೆ ನಾಶವಾಗುತ್ತವೆ, ಇದರಿಂದ ಪ್ರತಿಯೊಂದು ಇಮಾರತಿಗೆ ಎಂಟು ಹತ್ತು ಸಾವಿರ ರೂಪಾಯಿ ಲುಕ್ಸಾನಾಗುತ್ತದೆ. ನೂರಾರು ರೂಪಾಯಿಗಳನ್ನು ಖರ್ಚು ಮಾಡಿ ರಿಪೇರಿ ಮಾಡಿಸಿದರೆ ಈ ಕಟ್ಟಡಗಳು ಉಳಿಯುತ್ತವೆ. ರಿಪೇರಿ ಆಗುವುದು ಅತ್ಯಾವಶ್ಯಕವಾಗಿರುವುದರಿಂದ ಆದಷ್ಟು ತೀವ್ರವಾಗಿ ರಿಪೇರಿ ಆಗುವಂತೆ ಮಾಡಿಸಬೇಕು. ಮುಂಬಯಿ ಕರ್ನಾಟಕದ ಪ್ರದೇಶದಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಪುಸ್ತಕ, ಪಾಟಿ, ಪೆನ್ಸಿಲುಗಳನ್ನು ಉಚಿತವಾಗಿ ಹಂಚಲಾಗುತ್ತದೆ. ಇವುಗಳನ್ನು ಹಂಚುವುದು ಬಹಳ ತಡವಾಡಿ ಆಗುತ್ತದೆ. ಒಂದೊಂದು ಸಾರಿ ವರ್ಷದ ಕೊನೆಗೆ ಕೊಡುತ್ತಾರೆ. ಹಾಗೆ ಮಾಡದೆ ತ್ವರಿತವಾಗಿ ಶಾಲೆಗಳು ಪ್ರಾರಂಭವಾದ ಕೂಡಲೇ ಹಂಚುವಂತೆ ವ್ಯವಸ್ಥೆ ಮಾಡಬೇಕು

ಇನ್ನೊಂದು ವಿಚಾರ. ಮೈಸೂರಿನಲ್ಲಿದ್ದಂತೆ, ಮುಂಬಯಿ ಕರ್ನಾಟಕದ ಪ್ರದೇಶದಲ್ಲಿರುವ ತಳವಾರ

ಸುಣಗಾರ, ಉಪ್ಪಾರ, ಕುರುಬರು ಮುಂತಾದ ಜಾತಿಗಳವರು ಹಿಂದುಳಿದ ವರ್ಗಗಳಲ್ಲಿ ಸೇರ್ಪಡೆಯಾಗಿಲ್ಲ. ಮೈಸೂರು ರಾಜ್ಯದಲ್ಲಿ ಹೇಗೆ ಇದೆಯೋ ಅದೇ ರೀತಿಯಾಗಿ ಇವರೆಲ್ಲರನ್ನೂ ಹಿಂದುಳಿದ ವರ್ಗದಲ್ಲಿ ಸೇರಿಸಿ ಅವರಿಗೆ ದೊರೆಯಬೇಕಾದಂಥ ಎಲ್ಲ ಸವಲತ್ತುಗಳನ್ನೂ ಕಲ್ಪಿಸಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ ಮುಂಬಯಿ ಕರ್ಣಾಟಕದಲ್ಲಿರುವ ಈ ಜನರಿಗೆ ಎಲ್ಲ ಸೌಕರ್ಯಗಳೂ ಸಿಕ್ಕುವಂತೆ ಆಗಬೇಕೆಂದು ಹೇಳ ಬಯಸುತ್ತೇನೆ.

Mr. SPEAKER.—Sri M. C. Narasimhan. He will be the last speaker.

Sri M. C. NARASIMHAN (Kolar Gold Fields).—Sir, I shall be very brief and I shall not take much time. First I would like to bring to the notice of the Hon'ble Minister about full freeship Concession to the Scheduled Castes. There is one stigma. Scheduled Castes who have been converted as Christians are not given those facilities. I suggest that such facilities should be given also to those Scheduled Caste persons who are converted to Christianity. This particularly affects Kolar Gold Fields and Bangalore so far as I know. When there is no distinction made in the case of Scheduled Tribes converted into Christianity, I do not know why such a distinction should be made in the case of Scheduled Castes.

Sri R. CHENNIGARAMIAH.—Any community that is converted has no right to ask for those facilities.

Sri M. C. NARASIMHAN.—I am told on authority that in Assam and other places, the Scheduled Tribes who have been converted into Christianity have been given full free concession. I am definite that in Kerala also it has been given.

Sri R. CHENNIGARAMIAH.—This is Mysore.

Sri M. C. NARASIMHAN.—Even in the case of converts to Buddhism also the same concession may be given. After all if conversion were to bring about economic change I would certainly welcome it. But everybody knows it does not.

With regard to the educational policy, I say that the targets laid down in the Second Five-Year Plan cannot be realised at the rate at which we are progressing. I would give one particular instance. The total number of multi-purpose high schools scheduled to be started were 250 all over India in the First Five-Year Plan *i.e.*, by 1955-56. But so far as Mysore State was concerned, no multi-propose high school came on its legs till 1955-56. By the way they are making progress they cannot reach the target by 1960-61. But the number of high schools has increased five-fold and therefore the demand for converting them all into multi-purpose high schools by 1960-61 will never be realised. The same thing with regard to primary education also. We will not to be able to implement the Directive Principles laid down in the Constitution with regard to primary education at the rate at which we are progressing for the simple reason that the administrative set-up is not in a position to meet the increased demand. Further the teachers are dissatisfied. The demands of the teachers in municipal high schools in regard to pay scales so far as old Mysore is concerned have not been settled, though so many committees like the Educational Reforms Committee and A. Bheemappa Naik Committee had recommended that these schools should be on the same footing as Government schools in the matter of scales. In the Circular that was issued in 1947, Government gave a definite directive with regard to the pay scales of teachers in municipal high schools and local board high schools. But the latest circular saying that the local board authorities or municipal authorities are at liberty even to cut down their salaries is very strange coming as it does at this late stage. In respect of municipal and aided high school teachers I suggest that immediately without waiting for the committee's recommendations, Government may implement the order relating to enhanced scales of pay as in the case of Government schools.

In respect of certain educational institutions, especially Engineering, it is a very sad state of affairs to find that large scale profiteering is going on. I am not referring to all but in some institutions it is existing. This situation should be put an end to. Government must come forward with a Bill on the lines similar to that of Kerala, to regulate the conditions in private institutions.

6-30 P.M.

[Sri Balwant Rao spoke in Hindi. His speech appears in the Appendix number to this volume.]

Sri C. J. MUCKANNAPPA (Gubbi).—In this way, if the P.S.P. Leader and the Ldader of the House come to an understanding then all the demands may be finished within one day itself.

Mr. SPEAKER.—It is not the Leader of the House who has taken the time of the House. It is the Leader of the Opposition who has taken much time of the House. I hope from tomorrow he will accommodate more Members.

Sri N. G. NARASIMHE GOWDA (Sravanabelagola).—The Congress Party members may not be given chance to speak and more Opposition members may be given chance to speak. That is the understanding.

Mr. SPEAKER.—I am concerned with all the members. I have to rise above party considerations. I will call upon whoever catches my eye first. The Opposition members should not grumble on that account. All the same, I have always taken care to see that the Opposition members are given proportionately more chances than the party in power.

ಶ್ರೀ ಎನ್. ಜಿ. ನರಸಿಂಹೇಗೌಡ.—ನಾಳೆಯಿಂದ ಈ ರೀತಿ ಮಾಡಬಹುದು. ಪಿ.ಎಸ್.ಪಿ. ಪಾರ್ಟಿಯವರಿಗೆ ಇಬ್ಬರಿಗೆ ಮೂವರಿಗೆ ಕೊಡುವುದು ಸರಿಯಲ್ಲ. ನಾವು ಒಬ್ಬರಿಗೊಬ್ಬರು ಇರುವ ಕಾಲವನ್ನು ಹಂಚಿಕೊಳ್ಳುತ್ತೇವೆ. ಈ ಸಭೆಯು ಒಂದು ಘಂಟೆಯಿಂದ ಆರು ಘಂಟೆಯವರೆಗೂ ನಡೆಯುವ ಕಾಲದಲ್ಲಿ ನಮಗೆ ಎರಡು ಘಂಟೆಗಳಕಾಲ ಅವಕಾಶ ಕೊಟ್ಟು ಮಿಕ್ಕ ಕಾಲವನ್ನು ಇತರರಿಗೆ ಕೊಡಿ.

Mr. SPEAKER.—That rule will go against you.

ಶ್ರೀ ಪಿ. ವೆಂಕಟಪ್ಪ.—ಮಾನ್ಯ ಸಭಾಧ್ಯಕ್ಷರೇ, ಈ ಸಭೆಯ ಯಾವಭಾಗದ ಸದಸ್ಯರಿಗೂ, ಸರ್ಕಾರದವರಿಗೂ, ವಿದ್ಯಾಭ್ಯಾಸದ ಉದ್ದೇಶದ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ ಎಂದು ಹೇಳುವುದರಲ್ಲಿ ಏನೂ ಸಂಶಯವಿಲ್ಲ. ನಮ್ಮ ದೇಶದಲ್ಲಿ ಬಹು ಮುಖ್ಯವಾದಂಥ ಈ ವಿದ್ಯಾಭ್ಯಾಸದ ಪ್ರಗತಿ ಅವಶ್ಯಕವಾದ, ಸರಿಯಾದ ರೀತಿಯಲ್ಲಿ ನಡೆಯಬೇಕು ಎನ್ನುವುದು ಎಲ್ಲರ ಆಶಯ. ಆ ವಿಷಯದಲ್ಲಿ ಏನೂ ಭಿನ್ನಾಭಿಪ್ರಾಯವಿಲ್ಲ. ಆ ಉದ್ದೇಶವನ್ನು ನೆರವೇರಿಸತಕ್ಕ ಸಂದರ್ಭದಲ್ಲಿ ಇರತಕ್ಕಂಥ ತೊಡಕುಗಳನ್ನು ನಾವು ಸ್ವಲ್ಪ ಮನವರಿಕೆ ಮಾಡಿಕೊಂಡರೆ ನಾವು ಇನ್ನೂ ಯಾವರೀತಿ ಬದಲಾವಣೆಗಳನ್ನು ಮಾಡಬೇಕೆಂದಿಟ್ಟುಕೊಂಡಿದ್ದೇವೋ ಅದನ್ನು ಮಾಡುವುದಕ್ಕೆ ಸ್ವಲ್ಪಕಾಲ ಹಿಡಿಯುತ್ತದೆ ಎಂದು ಈ ಮಾನ್ಯ ಸಭೆಯವರು ಅರಿತುಕೊಂಡಿದ್ದಾರೆಂಬುದು ನನಗೆ ಗೊತ್ತಿದೆ. ಆದರೂ ಅವರು ಮಾಡಿರತಕ್ಕ ಸೂಚನೆಗಳನ್ನು ನಾವು ಅಗತ್ಯವಾಗಿ ಕೇಳಬೇಕು. ಅದರಲ್ಲಿ ಬಹುಮಟ್ಟಿಗೆ ಈ ದಿವಸ ಮಾಡಿರತಕ್ಕ ಸೂಚನೆಗಳನ್ನು ನಾನು ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳಿದರೆ ತಪ್ಪಲ್ಲ. ಕೆಲವರು ಎಜುಕೇಷನಲ್ ಸಿಸ್ಟಮ್ ಏನೂ ಬದಲಾವಣೆಯಾಗಿಲ್ಲ, ಹಿಂದೆ ಇದ್ದಂತೆಯೇ ಇದೆ ಎಂದು ಹೇಳಿದ್ದಾರೆ. ಈಗ ನಮ್ಮ ಪ್ರೈಮರಿ ಎಜುಕೇಷನ್ ಯಾವರೀತಿ ಬದಲಾವಣೆಯಾಗಬೇಕು ಎನ್ನುವ ವಿಷಯದಲ್ಲಿ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಅದು ಬೇಸಿಕ್ ಪ್ಯಾಟ್ರನ್ ಆಗಬೇಕೆಂದು ಒಪ್ಪಿಕೊಂಡಿದ್ದಾರೆ. ಅದನ್ನು ಬಹುಮಟ್ಟಿಗೆ ಜಾರಿಗೆ ತರುತ್ತಿದ್ದೇವೆ. ಅದಕ್ಕೆ ಏನೇನು ಅನುಕೂಲಗಳು ಬೇಕೋ ಅವುಗಳನ್ನು ಕೂಡಲೇ ಒದಗಿಸುವುದು ಕಷ್ಟದ ಮಾತು. ಆದ್ದರಿಂದ ಇನ್ನೈದು ವರ್ಷಗಳಲ್ಲಿ ಸುಮಾರು ನಾಲ್ಕುಸಾವಿರ ಸ್ಕೂಲುಗಳನ್ನು ಬೇಸಿಕ್ ಎಜುಕೇಷನ್ ಸ್ಕೂಲುಗಳನ್ನಾಗಿ ಬದಲಾವಣೆ ಮಾಡಬೇಕುಎಂದು ಅಂದು ಕೊಂಡಿದ್ದೇವೆ. ಮತ್ತೆ ಸೆಕೆಂಡರಿ, ಯೂನಿವರ್ಸಿಟಿ, ಎಜುಕೇಷನ್ ಬಗ್ಗೆ ಸರ್ಕಾರದವರು ಒಂದು ಕಮಿಟಿಯನ್ನು ಏರ್ಪಾಡು ಮಾಡಿದ್ದರು. ರಾಧಾಕೃಷ್ಣನ್ ಸೆಕೆಂಡರಿ ಎಜುಕೇಷನ್ ವರದಿ ನಮ್ಮ ಮುಂದೆ ಇದೆ. ಅದೇ ರೀತಿಯಲ್ಲಿ ಏನು ಬದಲಾವಣೆಗಳು ಆಗಬೇಕಾಗಿವೆಯೋ ಅವೆಲ್ಲವನ್ನೂ ದೇಶದ ಎಲ್ಲಾ ಕಡೆಯಲ್ಲೂ ಜಾರಿಗೆ ತರುವುದಕ್ಕೆ ಪ್ರಯತ್ನ ನಡೆಯುತ್ತಿದೆ. ಈಗ ತಾವು ಸೆಕೆಂಡರಿ ಎಜುಕೇಷನ್ ಮತ್ತು ಕಾಲೇಜ್ ಎಜ್ಯುಕೇಷನ್ನಿನಲ್ಲಿ ತಾಂತ್ರಿಕ ಎಜುಕೇಷನ್ನಿಗೆ ಹೆಚ್ಚು ಅವಕಾಶ ಮಾಡಬೇಕೆಂದು ಹೇಳುತ್ತಿದ್ದೀರಿ. ಅದನ್ನು ಏರ್ಪಾಡು ಮಾಡಬೇಕು ಎನ್ನುವುದು ಈ ಸರ್ಕಾರದ ಮತ್ತು ಇಂಡಿಯಾ ಸರ್ಕಾರದ ಪೂರ್ಣ ಆಶಯವಾಗಿದೆ. ಇಂಡಿಯಾ ಸರ್ಕಾರದವರು ಒಂದು ಕಮಿಟಿಯನ್ನು ಮಾಡಿ ಎಲ್ಲೆಲ್ಲಿ, ಯಾವಾಗ, ಎಷ್ಟು ಅಂತಹಸಂಸ್ಥೆಗಳನ್ನು ಏರ್ಪಾಡುಮಾಡಬೇಕು, ಅಂತಹ ಸಂಸ್ಥೆಗಳಲ್ಲಿ ಹೆಚ್ಚು ವಿದ್ಯಾರ್ಥಿಗಳನ್ನು ತೆಗೆದುಕೊಳುವುದಕ್ಕೆ ಏನು ಏರ್ಪಾಡು ಮಾಡಬಹುದು ಎನ್ನುವುದನ್ನು ನೋಡಿ ಅವರ ಸಲಹೆಯಂತೆ ನಾವು ಕಾರ್ಯವನ್ನು ಮಾಡುತ್ತಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರು ಏನೂ ಇದರಲ್ಲಿ ಬದಲಾವಣೆಯಿಲ್ಲ ಎಂದು ಹೇಳಿದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಕೆಂಚಪ್ಪನವರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಇವೊತ್ತಿನ ದಿವಸ ಅವರ ಮುಂದೆ ಇಟ್ಟಿರತಕ್ಕ ಬೇಡಿಕೆಯ ವಿಷಯದಲ್ಲಿ ಸ್ವಲ್ಪ ವ್ಯತ್ಯಾಸವಿದೆ ಎಂದು ಹೇಳಿದರು. ಇವೊತ್ತಿನ ದಿವಸ ಹತ್ತು ಕೋಟಿ ಚಿಲ್ಲರೆ ಕೇಳುತ್ತಿದ್ದೇವೆ. ಶ್ರೀ ಟಿ. ಮರಿಯಪ್ಪನವರು ತಮ್ಮ ಭಾಷಣದಲ್ಲಿ ಹನ್ನೊಂದು ಕೋಟಿ ಚಿಲ್ಲರೆ ಎಂದು ಹೇಳಿದ್ದಾರೆ. ಹೀಗೆ ಇದರಲ್ಲಿ ವ್ಯತ್ಯಾಸ ಇರುವುದುಸರಿಯೇ ಎಂದು ಕೇಳಿದ್ದಾರೆ. ನಾವು ಏನು ಬೇಡಿಕೆಯನ್ನು ಮಂಡಿಸಿದ್ದೇವೆ ಅದರಲ್ಲಿ ವೆಟರ್‌ನರಿ ವಿದ್ಯಾಭ್ಯಾಸ ಮತ್ತು ಅಗ್ರಿಕಲ್‌ಚರಲ್ ವಿದ್ಯಾಭ್ಯಾಸ ಸೇರಿಲ್ಲ. ಅವುಗಳನ್ನು ಸೇರಿಸಿ ಅವರು ಹೇಳಿದ್ದಾರೆ. ಮೈಸೂರು ಯೂನಿವರ್ಸಿಟಿಗೆ ಕೊಟ್ಟಿರತಕ್ಕ ಗ್ರಾಂಟ್ ಮತ್ತು ಕರ್ನಾಟಕ ಯೂನಿವರ್ಸಿಟಿಗೆ ಕೊಟ್ಟಿರತಕ್ಕ ಗ್ರಾಂಟಿಗೆ ವ್ಯತ್ಯಾಸವಿದೆ; ಆ ರೀತಿ ಮಾಡಬಾರದು ಎಂದು ಹೇಳಿದ್ದಾರೆ. ಅವರಿಗೆ ವಿಷಯಗೊತ್ತಿಲ್ಲವೆ ಹೋದ್ದರಿಂದ ಎಲ್ಲ ಯೂನಿವರ್ಸಿಟಿಗಳೂ ಒಂದೇ ಎಂದು ಆ ರೀತಿ ಹೇಳಿದ್ದಾರೆ, ಯಾವ ವಿಧವಾದ ವ್ಯತ್ಯಾಸವನ್ನೂ

ನಾವು ಮಾಡಿಲ್ಲ. ಕರ್ನಾಟಕ ಯೂನಿವರ್ಸಿಟಿ ಟೀಚಿಂಗ್ ಯೂನಿವರ್ಸಿಟಿಯಲ್ಲ. ಅವುಗಳಿಗೆ ಎಷ್ಟು ಗ್ರಾಂಟನ್ನು ಕೊಡಬಹುದೋ ಅಷ್ಟು ಗ್ರಾಂಟನ್ನೂ ಕೊಟ್ಟಿದ್ದೇವೆ. ಟೀಚಿಂಗ್ ಕಾಲೇಜುಗಳು ಮಾತ್ರ ಏನು ಇರುತ್ತವೋ ಅವುಗಳಿಗೆ ಗ್ರಾಂಟನ್ನು ಕೊಟ್ಟಿವೆ. ಆ ಯೂನಿವರ್ಸಿಟಿಗೂ, ಈ ಯೂನಿವರ್ಸಿಟಿಗೂ ವ್ಯತ್ಯಾಸ ಮಾಡಿದ್ದೇವೆಂದು ಹೇಳಿದರೆ ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಏನೂ ಪ್ರಗತಿ ಆಗಿಲ್ಲ ಎಂದು ಅವರು ಹೇಳಿದರು ಅದು ಸತ್ಯಕ್ಕೆ ದೂರವಾದ ಮಾತು. ಈ ಹತ್ತು ವರ್ಷಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಏನು ಒಂದು ಪ್ರಗತಿ ಆಗಿದೆಯೋ ಅದು ಹಿಂದೆ 50 ವರ್ಷಗಳಲ್ಲಿ ಆಗದೆ ಇದ್ದಂಥಾದ್ದು ಎಂದು ಹೇಳಿದರೆ ತಪ್ಪಾಗಲಾರದು. 1946-47 ರಲ್ಲಿ ಎಂಟು ಸಾವಿರ ಸ್ಕೂಲುಗಳು ಇದ್ದು ಈಗ 21 ಸಾವಿರದ ಮೇಲೆ ಆಗಿವೆ ಎಂದು ಹೇಳುವಾಗ ನಾವು ತಲೆ ತಗ್ಗಿಸಿ ನಡೆಯುವಂತೆ ಮಾಡಿದ್ದೇವೆಂದು ಹೇಳುವುದಕ್ಕಾಗುವುದಿಲ್ಲ.

ಕಾಲೇಜುಗಳಲ್ಲಿ ಹುಡುಗರನ್ನು ಸೇರಿಸುವ ಸಂದರ್ಭದಲ್ಲಿ ಕೆಲವು ಕಷ್ಟಗಳಿವೆ. ಹಿಂದೆ ಮೈಸೂರಿನಲ್ಲಿ ಏನು ರೀತಿ ನೀತಿಯನ್ನು ಅನುಸರಿಸುತ್ತಿದ್ದೆವೋ ಅದನ್ನು ಬದಲಾವಣೆ ಮಾಡಬೇಕು ಹೆಚ್ಚು ಮಾರ್ಕ್ಸ್ ತೆಗೆದುಕೊಂಡಿರುವವರಿಗೆ ಅವಕಾಶ ಇರುವಂತೆ ಒಂದು ಬದಲಾವಣೆ ಮಾಡಬೇಕೆನ್ನುವ ರೀತಿಯಲ್ಲಿ ಮಾತನಾಡಿದ್ದಾರೆ. ಈ ವಿಷಯದಲ್ಲಿ ಯಾರಿಗೂ ಏನೂ ಭಿನ್ನಾಭಿಪ್ರಾಯವಿಲ್ಲ. ಆದರೆ ನಮ್ಮ ಮೈಸೂರಿನ ಹಿಂದಿನ ಪರಿಸ್ಥಿತಿಯಲ್ಲಿ ಹಿಂದುಳಿದ ಜನಾಂಗದವರಿಗೆ ಓದುವುದಕ್ಕೆ ಸಾಕಾದಷ್ಟು ಅನುಕೂಲ ಇಲ್ಲದೇಇದ್ದ ಕಾಲದಲ್ಲಿ ಎಲ್ಲರ ಜೊತೆಯಲ್ಲಿ ಅವರು ಕಾಂಪೀಟ್ ಮಾಡುವಷ್ಟು ಅನುಕೂಲ ಇಲ್ಲದೆ ಇರುವ ಸಂದರ್ಭದಲ್ಲಿ ಹಿಂದುಳಿದಿರುವವರನ್ನು ಮುಂದಕ್ಕೆ ತರಬೇಕೆಂದು ಏನು ಏರ್ಪಾಡು ಇತ್ತೋ ಅದನ್ನು ಎಲ್ಲರೂ ಒಪ್ಪುತ್ತಾರೆ. ಅದನ್ನು ಒಪ್ಪದಿರುವುದಕ್ಕಾಗುವುದಿಲ್ಲ. ಯಾರು ಯಾರು ಹಿಂದೆ ಬಿದ್ದಿದ್ದಾರೊ ಅವರಿಗೆ ಕೆಲವುಕಾಲ ಅನುಕೂಲ ಕಲ್ಪಿಸಿಕೊಡಬೇಕೆಂದು ಎಲ್ಲರೂ ಹೇಳುತ್ತಾರೆ. ಆದ್ದರಿಂದ ಆ ರೀತಿ ಯಾವ ಯಾವ ಪಂಗಡದವರು ಹಿಂದುಳಿದಿದ್ದಾರೆ ಅಂಥವರಿಗೆ ಅನುಕೂಲಮಾಡಿ ಕೊಡಬೇಕೆಂಬ ದೃಷ್ಟಿಯಿಂದ ಕೆಲವು ನಿಯಮಗಳನ್ನು ಮಾಡಿದ್ದಾರೆ. ಆದರೆ ಆ ನಿಯಮಗಳಿಂದ ಈ ದಿವಸ ಅನ್ಯಾಯವಾಗುತ್ತದೆಂದು ನಾನಂತೂ ಖಂಡಿತ ಒಪ್ಪುವುದಕ್ಕಾಗುವುದಿಲ್ಲ. ಆಯಾ ಪಂಗಡದಲ್ಲಿರುವ ಉತ್ತಮ ವಿದ್ಯಾರ್ಥಿಗಳಿಗೆ ಉತ್ತೇಜನ ಕೊಡಲಾಗುತ್ತದೆ, ಅದರಲ್ಲೇನೂ ಅನುಮಾನವಿಲ್ಲ. ಆದ್ದರಿಂದ ಏನೂ ಬದಲಾವಣೆಯಾಗಬೇಕಾಗಿಲ್ಲ.

ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಸೇರಿಸುವ ರೀತಿಯಲ್ಲಿ ಬದಲಾವಣೆಯಾಗಬೇಕೆಂದು ಕೆಲವು ಸ್ನೇಹಿತರು ಹೇಳುತ್ತಾರೆ. ಅದು ಅಗತ್ಯವೆಂದು ನನಗೆ ಕಂಡುಬಂದಿಲ್ಲ. ಕೆಲವು ಕಾಲೇಜುಗಳಲ್ಲಿ ಬ್ಲಾಕ್ ಮಾರ್ಕೆಟ್ ನಡೆಯುತ್ತಿದೆ, ಸೀಟುಗಳನ್ನು ಮಾರಲಾಗುತ್ತಿದೆ ಎಂದು ಮಾನ್ಯ ಸ್ನೇಹಿತರು ಕೆಲವರು ಹೇಳಿದರು; ಶ್ರೀ ಕೆಂಚಪ್ಪನವರೂ ಕೂಡ ಸ್ವಲ್ಪಮಟ್ಟಿಗೆ ಈ ಪದ್ಧತಿ ತಪ್ಪು, ಹಾಗೆ ಮಾಡುವುದಕ್ಕೆ ಅವಕಾಶ ಸಂಸ್ಥೆ ಕೊಡಬಾರದು ಎಂದು ಹೇಳಿದರು. ಕೆಲವು ಖಾಸಗಿ ಸಂಸ್ಥೆಗಳು ಪ್ರಾರಂಭಮಾಡುವಾಗ ಕಟ್ಟಡಕ್ಕೆ ಸಲಕರಣೆಗಳನ್ನು ಒದಗಿಸಿಕೊಳ್ಳುವುದಕಾಗಿ ಡೊನೇಷನ್ ಪಡೆಯುತ್ತಾರೆ. ಕಸ್ತೂರಿಬಾಯಿ ಮೆಡಿಕಲ್ ಕಾಲೇಜಿನಲ್ಲಿ ಕಟ್ಟಡ ಕಟ್ಟುವುದಕ್ಕೆ ಸಲಕರಣೆಗಳಿಗೆ ಹಣ ಒದಗಿಸಲು ಆ ರೀತಿ ಹಣ ಪಡೆಯಲಾಯಿತು; ಬೇಕಾದ ಹಣ ಒದಗಿದ ಮೇಲೆ ಈಗ ಬೆಂಗಳೂರಿನ ಮೆಡಿಕಲ್ ಕಾಲೇಜಿನಲ್ಲಾಗಲಿ ಅಥವಾ ಇತರ ಕಾಲೇಜುಗಳಲ್ಲಾಗಲಿ ಆ ರೀತಿ ಹಣ ವಸೂಲು ಮಾಡುತ್ತಿಲ್ಲ. ಶ್ರೀ ಕೆಂಚಪ್ಪನವರು ಬಹುಶಃ ಸರ್ಕಾರಕ್ಕೆ ಗೊತ್ತಿಲ್ಲದ ಹಾಗೆ ಏನಾದರೂ ನಡೆಯುತ್ತಿದೆಯೋ ಏನೋ ಎಂದು ಹೇಳಿದರು. ಅದು ನಮ್ಮ ಗಮನಕ್ಕೆ ಬಾರದಿರುವುದು. ಶ್ರೀಮಾನ್ ಕೆಂಚಪ್ಪನವರಂಥವರು ಅಂಥದ್ದು ನಡೆಯುತ್ತಿದೆಯೆಂದು ಕಂಡರೆ ಯಾರ ಗಮನಕ್ಕೆ ತರಬೇಕೋ ಅವರ ಗಮನಕ್ಕೆ ತಂದರೆ ಅದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದರಲ್ಲೇನೂ ಅಭ್ಯಂತರವಿಲ್ಲವೆಂದು ತಿಳಿಸುತ್ತೇನೆ.

ಶ್ರೀ ಕೆ. ಕೆಂಚಪ್ಪ.—ಇಲ್ಲೇ ಗಮನಕ್ಕೆ ತಂದಿದ್ದೇವೆ.

ಶ್ರೀ ವಿ. ವೆಂಕಟಪ್ಪ.—ಇಲ್ಲಿ ಜನರಲ್ಲಾಗಿ ಹೇಳಿದ್ದಾರೆ. ತೆಗೆದುಕೊಂಡವರು ಯಾರು ಎಂದು ಗೊತ್ತಿಲ್ಲದೆ ಹೇಳಿದರೆ, ಖಚಿತವಾಗಿ ಹೇಳದಿದ್ದರೆ, ಹೇಗೆ ಕಂಡು ಹಿಡಿಯುವುದು ?

ಅಧ್ಯಕ್ಷರು.—ಹೆಸರು ಇಲ್ಲಿ ಹೇಳುವುದು ಬೇಡ, ಛೇಂಬರಿನಲ್ಲಿ ಆ ವಿಷಯ ಹೇಳುವುದಿದ್ದರೆ ಹೇಳಲಿ.

ಶ್ರೀ ವಿ. ವೆಂಕಟಪ್ಪ.—ನನಗೆ ಗೊತ್ತಿರುವ ಮಟ್ಟಿಗೆ ಮೈಸೂರು ಪ್ರದೇಶದಲ್ಲಿ ಒಂದೆರಡು ಕಾಲೇಜಿನಲ್ಲಿ ಡೊನೇಷನ್ ತೆಗೆದುಕೊಳ್ಳುತ್ತಿದ್ದರು. ಈ ವರ್ಷ ಹೋದವರ್ಷ ಈ ಎರಡು ವರ್ಷ ಡೊನೇಷನ್ ತೆಗೆದುಕೊಳ್ಳುವುದನ್ನು ನಿಲ್ಲಿಸಿದ್ದಾರೆ; ಹೊಸದಾಗಿ ಸ್ಥಾಪನೆ ಮಾಡಿರುವ ಮೆಡಿಕಲ್ ಕಾಲೇಜಿನಲ್ಲಿಯೂ ನಿಲ್ಲಿಸಿದ್ದಾರೆ. ಆದ್ದರಿಂದ ಎಲ್ಲಿ ಮಾನ್ಯ ಸದಸ್ಯರು ಹೇಳಿದಂತೆ ಆಗಿದೆಯೆಂಬುದನ್ನು ಸರಿಯಾಗಿ ಗಮನಕ್ಕೆ ತಂದ ಹೊರತು ಅವರು ಹೇಳಿದ್ದು ಸರಿಯೆಂದು ಒಪ್ಪಿಕೊಳ್ಳಲಾಗುವುದಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಚಂದ್ರಶೇಖರಪುರ).—ಸರ್ಕಾರಿ ಸಂಸ್ಥೆಗಳಲ್ಲಿ ಸೀಟುಗಳನ್ನು ಹಂಚುವಾಗ ಯಾವ ಕ್ರಮ ಅನುಸರಿಸುತ್ತೀರೋ, ಯಾವರೀತಿ ಹಂಚಬೇಕೆಂದು ಹೇಳುತ್ತೀರೋ ಅದೇರೀತಿ ಖಾಸಗಿ ಸಂಸ್ಥೆಗಳಲ್ಲೂ ಮಾಡಲು ಕಡ್ಡಾಯವಿರುವಂತೆ ಹುಕುಂ ಮಾಡುವುದಕ್ಕಾಗುವುದಿಲ್ಲವೆ ?

ಶ್ರೀ ವಿ. ವೆಂಕಟಪ್ಪ.—ಅದನ್ನು ಯೋಚನೆಮಾಡುತ್ತಿದ್ದೇವೆ. ಈಗ ಎರಡು ಕಾಲೇಜುಗಳವರು ಮಾತ್ರ ಅದಕ್ಕೆ ಒಪ್ಪಿಲ್ಲ. ಅದಕ್ಕಾಗಿ ಅವರಿಗೂ ನಮಗೂ ಪತ್ರವ್ಯವಹಾರ ನಡೆಯುತ್ತಿದೆ. ಅದರಿಂದ ಈಗ ಇಂಡಿಯಾ ಸರ್ಕಾರದಿಂದ ಬರುವ ಗ್ರಾಂಟು ಕೂಡ ನಿಂತಿದೆ. ಅವರು ಅದನ್ನು ಒಪ್ಪಿಕೊಳ್ಳುವುದಾದರೆ ತೊಂದರೆಯಿಲ್ಲ. ನಾವು ಕಾಲೇಜುಗಳಲ್ಲೇನು ನಿಯಮವನ್ನಿಟ್ಟಿದ್ದೇವೋ ಅದಕ್ಕೆ ಒಪ್ಪದಿರುವುದರಿಂದ ನಮ್ಮ ಭಾಗ ಕೊಡುವುದು ಕಷ್ಟ, ಒಂದು ಕಾಲೇಜಿನಲ್ಲಿ ಒಂದು ನಿಯಮ, ಇನ್ನೊಂದು ಕಾಲೇಜಿನಲ್ಲಿ ಇನ್ನೊಂದು ನಿಯಮ ಇರುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿರುವುದರಿಂದ ಬಹುಶಃ ಅವರು ಏನು ನೀತಿ, ನಿಯಮ ನಾವಿಟ್ಟುಕೊಂಡಿದ್ದೇವೋ ಅದಕ್ಕೆ ಒಪ್ಪುತ್ತಾರೆ, ಅದರಲ್ಲಿ ಹೆಚ್ಚು ತೊಂದರೆಯಾಗುವುದಿಲ್ಲ ಎಂದು ಅವರು ಜೊತೆಯಲ್ಲಿ ಮಾತನಾಡಿದಾಗ ಗೊತ್ತಾಯಿತು. ಸ್ವಲ್ಪ ಹೆಚ್ಚುಕಡಮೆ ಅವರು ಒಪ್ಪುತ್ತಾರೆಂದು ನಂಬಿದ್ದೇನೆ.

ಶ್ರೀ ಕೆಂಚಪ್ಪನವರು ಹುಬ್ಬಳ್ಳಿಯಲ್ಲಿ ಮೆಡಿಕಲ್ ಕಾಲೇಜನ್ನು ಸ್ಥಾಪಿಸುವುದರಿಂದ ಪ್ರಯೋಜನವಿಲ್ಲವೆಂದು ಹೇಳಿದರು.

ಶ್ರೀ ಕೆ. ಕೆಂಚಪ್ಪ.—ಪ್ರಯೋಜನವಿಲ್ಲವೆಂದು ನಾನು ಹೇಳಲಿಲ್ಲ, ಒಂದು ಕಾಲೇಜು ತೆರೆಯುವಾಗ ಸರಿಯಾದ ವ್ಯವಸ್ಥೆ ಮಾಡದಿದ್ದರೆ ಅನರ್ಥವಾಗುತ್ತದೆಂದು ಹೇಳಿದೆ.

ಶ್ರೀ ವಿ. ವೆಂಕಟಪ್ಪ.—ಹೌದು, ಎರಡು ಅಡ್ಡ ಒಂದು ಹಣ, ಎಲ್ಲಾ ಒಂದೇ. ಆದರ ವಿಷಯದಲ್ಲಿ ಶ್ರೀ ಪಾಟೀಲ್ ಅವರು ಸಭೆಯ ಮುಂದೆ ಅವರಿಗೆ ಸಂಬಧಪಟ್ಟ ವಿಷಯ ಮಂಡಿಸಿದಾಗ ಉತ್ತರ ಹೇಳುತ್ತಾರೆ, ಕಾಲೇಜುಗಳಲ್ಲಿ ಮತ್ತು ಇತರ ಕಡೆಗಳಲ್ಲಿ ಪ್ರೊಫೆಸರುಗಳ ಮತ್ತು ಉಪಾಧ್ಯಾಯರನ್ನು ನೇಮಕ ಮಾಡುವ ವಿಷಯದಲ್ಲಿ ಅವರು ಸ್ವಲ್ಪ ಆಕ್ಷೇಪಣೆ ಮಾಡಿದರು. ಸರಿಯಾದ ರೀತಿಯಲ್ಲಿ ನೇಮಕಮಾಡುತ್ತಿಲ್ಲ, ಅರ್ಹರನ್ನು ತೆಗೆದುಕೊಳ್ಳುತ್ತಿಲ್ಲ ಅದರಿಂದ ನಮ್ಮ ಸ್ಟ್ಯಾಂಡರ್ಡ್ ಕಡಮೆಯಾಗಿದೆ ಎಂದು ಹೇಳಿದರು. ಅದನ್ನು ಇತರರು ಕೆಲವರೂ ಹೇಳಿದ್ದಾರೆ. ಕಾಲೇಜಿನಲ್ಲಿ ಆ ರೀತಿ ಪಕ್ಷಪಾತದಿಂದ ಯೋಗ್ಯತೆಯಿಲ್ಲದಿರುವವರನ್ನು ನೇಮಕ ಮಾಡಿಕೊಳ್ಳುತ್ತಾರೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಪ್ರೈಮರಿ ಸ್ಕೂಲುಗಳಲ್ಲಿ ಉಪಾಧ್ಯಾಯರನ್ನು ಯೋಗ್ಯತೆಯಿದೆಯೆ ಇಲ್ಲವೆ ಎಂದು ಪರೀಕ್ಷೆಮಾಡಿ ತೆಗೆದುಕೊಳ್ಳದಿದ್ದರೆ ಅನ್ಯಾಯವಾಗುತ್ತದೆಂದು ಒಬ್ಬ ಮಿತ್ರರು ಹೇಳಿದರು. ಅದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಉಪಾಧ್ಯಾಯನಾಗುವವನು ನಿಜವಾಗಿಯೂ ಎಲ್ಲ ಕೆಲಸಗಾರರಿಗಿಂತ ಉತ್ತಮವಾದವನಾಗಿರಬೇಕು. ನಮ್ಮ ಮುಂದಿನ ಜನಾಂಗವನ್ನು ತರಬೇತು ಮಾಡುವ ಕಾರ್ಯ ಬಹಳ ದೊಡ್ಡದು, ಆ ಕಾರ್ಯ ಕೈಕೊಳ್ಳುವವರು ನಿಜವಾಗಿಯೂ ಉತ್ತಮರಾಗಿರಬೇಕು ಎಂಬ ವಿಷಯದಲ್ಲಿ ನನಗಂತೂ ಭಿನ್ನಾಭಿಪ್ರಾಯವಿಲ್ಲ. ಆದರೆ ಇಷ್ಟೊಂದು ಜನರನ್ನು ನಾವು ತೆಗೆದುಕೊಳ್ಳಬೇಕಾಗಿರುವಾಗ ಆ ರೀತಿ ಪರೀಕ್ಷೆಗೊಳಪಡಿಸಿ ಬಹಳ ಉತ್ತಮರನ್ನು ತೆಗೆದುಕೊಳ್ಳುವುದು ಸ್ವಲ್ಪ ಕಷ್ಟದ ಕೆಲಸ. ಆದ್ದರಿಂದಲೇ ಸರ್ಕಾರದವರು ಈಗ ಪ್ರೈಮರಿ ಸ್ಕೂಲುಗಳಿಗೆ ಎಸ್. ಎಸ್. ಎಲ್. ಸಿ. ಗಿಂತ ಕಡಮೆ ವಿದ್ಯಾರ್ಹತೆಯಿರುವವರಿರಬಾರದು ಎಂದು ತೀರ್ಮಾನಿಸಿದ್ದಾರೆ. ಇದುವರೆಗೂ ಎಲ್. ಎಸ್. ಮಾಡಿರುವವರು ಬೇಕಾದಷ್ಟು ಮಂದಿ ಉಪಾಧ್ಯಾಯರಾಗಿದ್ದಾರೆ! ಇದರಿಂದ ಸ್ವಲ್ಪ ಮಟ್ಟಿಗೆ ನಮ್ಮ ವಿದ್ಯಾರ್ಥಿಗಳಿಗೆ ಕೇಡಾಗಿದೆ ಎಂದು ತಿಳಿದು ಎಸ್. ಎಸ್. ಎಲ್. ಸಿ. ಗಿಂತ ಕಡಮೆ ಅರ್ಹತೆಯಿರುವವರನ್ನು ಉಪಾಧ್ಯಾಯರನ್ನಾಗಿ ನೇಮಕಮಾಡಬಾರದೆಂದು ತೀರ್ಮಾನವಮಾಡಿದೆ. ಈಗ ಅದರಂತೆ ಕಾರ್ಯಕ್ರಮ ನಡೆಯುತ್ತಿದೆ.

ನಮ್ಮ ಸೋದರಿಯರು ಪ್ರಾಥಮಿಕ ಶಾಲೆಗಳಲ್ಲಿ ಹೆಂಗಸರನ್ನೇ ಉಪಾಧ್ಯಾಯಿನಿಯರನ್ನಾಗಿ ನೇಮಕ ಮಾಡುವುದು ಉತ್ತಮ ಎಂದು ಹೇಳಿದರು. ಆ ವಿಷಯದಲ್ಲೇನೂ ಭಿನ್ನಾಭಿಪ್ರಾಯಕ್ಕೆ ಕಾರಣವಿಲ್ಲ. ಹೆಂಗಸರು ನಿಜವಾಗಿ ಮಕ್ಕಳನ್ನು ನೋಡಿಕೊಳ್ಳುವುದರಲ್ಲಿ ಗಂಡಸರಿಗಿಂತ ಉತ್ತಮರಾದವರು ಎಂಬುದು ಒಪ್ಪತಕ್ಕಮಾತು. ಆದರೆ ಅಷ್ಟುಜನ ನಮಗೆ ದೊರೆಯುವುದಾದರೆ, ನಾವೇನೊಂದು ನಿಯಮ ಹಾಕಿಕೊಂಡಿದ್ದೇವೋ ಅದಕ್ಕೊಳಪಡತಕ್ಕಂಥ ಜನರು ಸಿಕ್ಕುವುದಾದರೆ ಸರ್ಕಾರದವರು ಹೆಣ್ಣುಮಕ್ಕಳನ್ನೇ ಪ್ರಾಥಮಿಕ ಪಾಠಶಾಲೆಗಳಲ್ಲಿ ಪಾಠಹೇಳುವುದಕ್ಕೆ ನೇಮಕಮಾಡಿಕೊಳ್ಳುವುದಕ್ಕೆ ಹಿಂಜರಿಯುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಕೆಂಚಪ್ಪನವರು ಟ್ರೈನಿಂಗ್ ಕಾಲೇಜುಗಳು ಸಾಲದೆಂದು ಹೇಳಿದರು ಅದಕ್ಕೆ ಬಹಳಮಟ್ಟಿಗೆ ಪ್ರಯತ್ನ ನಡೆಧಿದೆ, ಎಲ್ಲ ಡಿಸ್ಟ್ರಿಕ್ಟುಗಳಲ್ಲೂ ಟ್ರೈನಿಂಗ್ ಮಾಡುವುದಕ್ಕೆ ಸಂಸ್ಥೆಗಳನ್ನೇರ್ಪಾಡು ಮಾಡಬೇಕೆಂದು ಪ್ರಯತ್ನ ನಡೆದಿದೆ. ಅನೇಕ ಡಿಸ್ಟ್ರಿಕ್ಟುಗಳಲ್ಲಿ ಈಗ ವ್ಯವಸ್ಥೆಮಾಡಿದೆ. ಐದು ವರ್ಷಗಳಲ್ಲಿ 20 ಸಾವಿರ ಜನರನ್ನು ಉಪಾಧ್ಯಾಯ ವೃತ್ತಿಗೆ ತರಪೇತು ಮಾಡಬೇಕೆಂಬ ನಿಯಮವನ್ನು ಹಾಕಿಕೊಂಡಿದ್ದೇವೆ. ಐದು ವರ್ಷ ಪೂರ್ತಿಯಾಗುವುದರೊಳಗೆ ಸುಮಾರು ಶೇಕಡ 72 ಜನ ಟ್ರೈನಿಂಗ್ ಆದ ಉಪಾಧ್ಯಾಯರು ದೊರಕುವಂತೆ ಮಾಡಬೇಕೆಂದು ಪ್ರಯತ್ನ ನಡೆಯುತ್ತಿದೆ.

7 P.M.

ಇನ್ನೊಂದು ಮಾತನ್ನು ಅವರು ಹೇಳಿದರು. ಹೆಚ್ಚು ಖರ್ಚುತೋರಿಸಿ ಅದರಲ್ಲಿ ಉಳಿತಾಯಮಾಡುತ್ತಾರೆ ಮತ್ತು ಗ್ರಾಂಟುಗಳು ಲ್ಯಾಪ್ಸ್ ಆಗುತ್ತಿವೆ ಎಂದು ಹೇಳಿದರು. ಹಾಗೆ ಮಾಡಬೇಕೆನ್ನುವುದು ನಮ್ಮ ಉದ್ದೇಶವಲ್ಲ. ಯಾರೂ ಹಾಗೆ ಮಾಡಬೇಕಾಗಿಯೂ ಇಲ್ಲ. ಕೆಲವು ಸಂದರ್ಭಗಳಲ್ಲಿ ಹಾಗಾಗಿತ್ತು. ಇನ್ನೂ ಬಿಲ್ಡಿಂಗಿನ ಕೆಲಸ ಪೂರೈಸಿಲ್ಲದಿರಬಹುದು. ಆದರೆ ಹಣವನ್ನೇನೋ ಒದಗಿಸಿದೆ. ಬಿಲ್ಡಿಂಗಿನ ಕೆಲಸ ಪೂರ್ಣವಾಗದೆ ಹಣವನ್ನು ಕೊಡುವುದಕ್ಕಾಗುವುದಿಲ್ಲ. ಅಲ್ಪಸ್ವಲ್ಪ ಲ್ಯಾಪ್ಸ್ ಆಗುತ್ತದೆ. ಗ್ರಾಂಟುಗಳು ಹೆಚ್ಚಾಗಿ ಲ್ಯಾಪ್ಸ್ ಆಗುವುದಕ್ಕೆ ಅವಕಾಶಕೊಡುವುದಿಲ್ಲ. ಎಷ್ಟು ಹಣ ಖರ್ಚಾಗಬೇಕೋ ಅಷ್ಟೇ ಹಣವನ್ನು ಕೊಡುವಂತೆ ಇಲ್ಲಿ ಭರವಸೆಕೊಡುತ್ತೇನೆ. ಕೆಲವು ಕಡೆಗಳಲ್ಲಿ ತೊಂದರೆಗಳು ಇವೆ. ಅದನ್ನು ಈಗೀಗ ಅರಿತುಕೊಳ್ಳಲು ಸ್ವಲ್ಪಮಟ್ಟಿಗೆ ಪ್ರಯತ್ನಪಡುತ್ತಿದ್ದೇನೆ. ಈಗ ಈ Cheap Design Building ಎಂಬ ಒಂದು Schemeನ್ನು ಹಾಕಿದ್ದೇವೆ. ಅದಕ್ಕೆ ಸಂಬಂಧಪಟ್ಟಂತೆ ಈಗ ಕೆಲವು ಗ್ರಾಂಟುಗಳು ಉಳಿದಿವೆಯೆಂದು ಹೇಳಿದರು. ಅದಕ್ಕೆ ಸಂಬಂಧಪಟ್ಟಂತೆ ಹಣವನ್ನು ಖರ್ಚು ಮಾಡುವುದಕ್ಕೆ ಕೆಲವು ತೊಂದರೆಗಳು ಬಂದವು. ಅದಕ್ಕಾಗಿ ನಾನು ಡಿಸ್ಟ್ರಿಕ್ಟುಗಳಿಗೆ ಹೋಗಿದ್ದಾಗ ಅಲ್ಲಿಯ ಜಿಲ್ಲೆಯ ಅಧಿಕಾರಿಗಳನ್ನು ಕರೆಸಿಕೊಂಡು ಅವರಲ್ಲಿ ಮಾತನಾಡಿ ಬಂದೆ. ಒಂದು ತೊಂದರೆ ಏನೆಂದರೆ, ಈ Cheap Design Building Scheme ನಲ್ಲಿ P.W.D. ಇಲಾಖೆಯವರ Supervision ಇಲ್ಲ. ಸರಕಾರದವರು 750 ರೂಪಾಯಿಗಳಷ್ಟು ಹಣಸಹಾಯ ಕೊಡುತ್ತಾರೆ. Deputy Commissioner ಅವರು ರೆವಿನ್ಯೂ ಇಲಾಖೆಯವರು ಜನರಿಗೆ ಸ್ವಲ್ಪ ಕಟ್ಟಡ ಕಟ್ಟಿಸಲು ಪ್ರೋತ್ಸಾಹ ಕೊಡುತ್ತಾರೆ. ಇನ್ನು ಬಾಕಿ ಉಳಿಕೆಯ ಹಣವನ್ನು ಹಾಕಿ ಈ ಕೆಲಸವನ್ನು ಪೂರ್ತಿಮಾಡಬೇಕೆಂದು ನಾನು ಹೇಳಿದ ಸಲಹೆಯಂತೆ ಮಾಡುತ್ತಿದ್ದಾರೆ. ಆದರೆ ಇದು Revenue Department ನಿಂದ ಆಗತಕ್ಕ ಕೆಲಸ. ಬಿಲ್ಲುಗಳನ್ನು ಪಾಸುಮಾಡಬೇಕಾದರೆ Accountant General ಅವರು ಇದಕ್ಕೆ P.W.D. Department ನಿಂದ ಒಂದು certificate ತರದೆ ಹೋದರೆ ಹಣ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಹೀಗೆ ಹಣಬರುವುದು Deputy Commissionerಗೆ ತಡವಾಗಿರಬಹುದು, Engineer ಗಳಿಂದ certificate ಬರುವುದಕ್ಕೆ ತಡವಾಗಿರಬಹುದು. ಹೀಗೆ ಕೆಲವು ತೊಂದರೆಗಳಾದುವು. ಇವನ್ನೆಲ್ಲ ಈಗ ಬಗೆಹರಿಸಿ ಪ್ರಯತ್ನಪಟ್ಟು ಆದಷ್ಟು ಜಾಗ್ರತೆ ಕೊಡಿಸುವುದಕ್ಕೆ ಏರ್ಪಾಡುಮಾಡಿದೆ. ಅಲ್ಲದೆ ಈಗ ಶಿವಮೊಗ್ಗ ಜಿಲ್ಲೆಯಲ್ಲಿ ಇಂತಹ ಕೆಲವು ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಹಣವನ್ನು ಕೊಟ್ಟಿದೆ. ಅಲ್ಲಿಯ ಅಧಿಕಾರಿಗಳೂ ಕೂಡ

ಈಗ ಈ ರೀತಿಯ ಕಟ್ಟಡಗಳನ್ನು ಕಟ್ಟಲು ಬಹಳ ಮನಸ್ಸಿಟ್ಟು ಮಾಡುತ್ತಿದ್ದಾರೆ.

ಶ್ರೀ ವೈ. ವೀರಪ್ಪ.—ಈ ಸಂದರ್ಭದಲ್ಲಿ ಒಂದು ವಿಷಯವನ್ನು ಅರಿಕೆಮಾಡಬೇಕಾಗಿದೆ. ಸುಮಾರು ಹತ್ತು ಹದಿನೈದು ವರ್ಷಗಳಿಂದಲೂ ಹಳ್ಳಿಯ ಗ್ರಾಮಸ್ಥರು ಶಾಲಾ ಕಟ್ಟಡಗಳಿಗಾಗಿ ಮತ್ತು ಇನ್ನಿತರ ಕಟ್ಟಡಗಳಿಗಾಗಿ ಬೇಕಾದಷ್ಟು ಹಣವನ್ನು ಸರಕಾರಕ್ಕೆ ಕಟ್ಟಿದ್ದರು, ಹಣವೂ ವಾಪಸ್ಸು ಬರಲಿಲ್ಲ, ಬಿಲ್ಡಿಂಗುಗಳನ್ನು ಕೂಡ ಕಟ್ಟಲಿಲ್ಲ. ಸೂಕ್ತವಾದ ಈ ವಿಚಾರದಲ್ಲಿ ಪ್ರಶ್ನೆಗಳನ್ನು ಕೇಳಿದ್ದರೂ ಸಹ ಉತ್ತರ ಬರಲಿಲ್ಲ.

ಶ್ರೀ ವಿ. ವೆಂಕಟಪ್ಪ.—ಆ ರೀತಿ ಆಗಿರುವುದು ವಾಸ್ತವವಾದುದು. ಅದಕ್ಕಾಗಿ ನಾನು ಈಗ ಅವರ ಲೆಕ್ಕಗಳನ್ನು ಕಂಡು ಹಿಡಿದು, ಯಾರು ಯಾರಿಗೆ ಕೊಟ್ಟಿದ್ದಾರೆ ಎಲ್ಲೆಲ್ಲಿ ಕೊಟ್ಟಿದ್ದಾರೆ, ಎಂಬ ವಿವರಗಳ ಒಂದು ಪಟ್ಟಿಯನ್ನು ಮಾಡಿ ಮೊದಲು ಆ ಊರುಗಳಿಗೆ ಈ ರೀತಿಯಾದ ಶಾಲಾ ಕಟ್ಟಡಗಳನ್ನು ಕಟ್ಟುವಂತೆ ಮಾಡಬೇಕೆಂದು ಹೇಳಿ ಈಗ ಏರ್ಪಾಡು ಮಾಡಲಾಗಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ತಾವು ಪ್ಲಾನುಗಳನ್ನು ಮಂಜೂರುಮಾಡುವಾಗ ಒಂದೇ ವರ್ಷಕ್ಕೆಂದು ಮಾಡುತ್ತೀರಿ. ಆದರೆ ಅದೇ ರೀತಿಯಾಗಿ ಇದಕ್ಕೆ ತಕ್ಕ ಜಮೀನುಗಳು ಮಂಜೂರಾಗಬೇಕಾದರೆ ಸರ್ಕಾರದಲ್ಲಿ ಒಂದು ಅರ್ಧಭಾಗ ಕಾಲವ್ಯಯವಾಗುವುದರಿಂದ ಗ್ರಾಂಟು ಆಗಿರುವ ಹಣ ಲ್ಯಾಪ್ಸು ಆಗುತ್ತದೆ. ನೀವೇನೋ 750 ರೂಪಾಯಿಗಳನ್ನು ಕೊಡುತ್ತೀರಿ ಮತ್ತು ಅದರ ಜೊತೆಯಲ್ಲಿ ಜನಗಳಿಂದ ಹಣವನ್ನೇನೋ ಶೇಖರಿಸಿ ಈ ಸ್ಕೂಲಿನ ಬಿಲ್ಡಿಂಗನ್ನು ಕಟ್ಟಬಹುದು. ಆದರೆ ಅದಕ್ಕೆ ತಕ್ಕಂತೆ ಸಕಾಲದಲ್ಲಿ ಜಮೀನು ಸಿಕ್ಕುವುದಿಲ್ಲ. ಅದಕ್ಕಾಗಿ ಯಾವ ವರ್ಷ ಹಣ ಮಂಜೂರಾಗುವುದೋ ಅದರ ಜೊತೆಯಲ್ಲಿಯೇ ಜಮೀನನ್ನು ಸಹ ಮಂಜೂರು ಮಾಡಿದರೆ ಜನಗಳಿಗೆ ತುಂಬ ಅನುಕೂಲವಾಗುತಿತ್ತು.

ಶ್ರೀ ವಿ. ವೆಂಕಟಪ್ಪ.—ಅದಕ್ಕೋಸ್ಕರ ನಾವು ಆದಷ್ಟು ಜಾಗ್ರತೆಯಾಗಿ ಗ್ರಾಂಟುಗಳನ್ನು ಮಂಜೂರು ಮಾಡಬೇಕು. ಈ ಪದ್ಧತಿ ಈಗ ಸುಮಾರು 8-10 ವರ್ಷ ಗಳಿಂದಲೂ ನಡೆದುಕೊಂಡು ಬಿರುತ್ತಿದೆ. ಆದ್ದರಿಂದ ಯಾವಾಗ ಈ ರೀತಿಯಾದ ಬಿಲ್ಡಿಂಗುಗಳನ್ನು ಕಟ್ಟಿದ್ದಾರೆ ಮತ್ತು ಅದಕ್ಕೆ ತಕ್ಕ ಭೂಮಿಗಳಿವೆಯೇ ಇವೆಲ್ಲವನ್ನೂ ಪರಿಶೀಲಿಸಿ ಇನ್ನುಮುಂದೆ ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಶ್ರೀಮಾನ್ ಕೆಂಚಪ್ಪನವರು ಬಿಲ್ಡಿಂಗುಗಳಿಗಾಗಿ 25 ಲಕ್ಷ ರೂಪಾಯಿಗಳಷ್ಟು ಹಣವನ್ನು ಮಾತ್ರ provide ಮಾಡಿದ್ದೇವೆಂದು ಹೇಳಿದರು. ಹಾಗಾಗಿಲ್ಲ. ಅದನ್ನು ಬೇರೆ ಬೇರೆಯಾಗಿ ಈ ಬಡ್ಜೆಟ್ಟಿನಲ್ಲಿ ತೋರಿಸಿದೆ. ಅವರಿಗೆ ಬಹುಶಃ ಪೂರ್ಣವಾಗಿ ಗೊತ್ತಾಗಲಿಲ್ಲವೆಂದು ತೋರುತ್ತದೆ. ಅದು page 92 ರಲ್ಲಿ 37 Education, 334 50-Civil Works, 392 Capital Works, ಹೀಗೆ ಅನೇಕ ಕಡೆಗಳಲ್ಲಿರುವುದರಿಂದ ಹೀಗಾಗಿದೆ. ಅದಕ್ಕೋಸ್ಕರ ಸಾಕಾದಷ್ಟು ಹಣವನ್ನು ಒದಗಿಸಿದೆ.

ಇನ್ನು ಅನೇಕರು ಸ್ಕಾಲರ್‌ಶಿಪ್ಪುಗಳ ವಿಚಾರದಲ್ಲಿ, ಅದರಲ್ಲಿಯೂ Depressed Classs Scholarships ಗಳವಿಚಾರದಲ್ಲಿ ಸರಿಯಾದ ಹಣವನ್ನು ಒದಗಿಸಿಲ್ಲವೆಂದು ಹೇಳಿದರು. ಇದುವರೆಗೆ ಏನನ್ನು ಒದಗಿಸುತ್ತಿದ್ದರೋ ಅಷ್ಟನ್ನು ಮಾತ್ರ ಒದಗಿಸಿದ್ದಾರೆ. ಈಗ ವಿದ್ಯಾರ್ಥಿಗಳ ಸಂಖ್ಯೆ ಬಹಳ ಹೆಚ್ಚಾಗಿದೆ, ಆದುದರಿಂದ ಇದು ಸರಿಯಲ್ಲವೆಂದು ಹೇಳಿದರು. ಅದರಲ್ಲಿಯೂ ಕೂಡ ಒಂದು ತಪ್ಪಾಗಿದೆ. ಈ ವರ್ಷ ಹೆಚ್ಚಿಗೆ ಹಣವನ್ನು provide ಮಾಡಿದ್ದೇವೆ. ಅದು "Miscellaneous ಎನ್ನುವ ಕಡೆ ಬಂದುಬಿಟ್ಟಿದೆ. ಮೂರು ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ provide ಮಾಡಿದ್ದೇವೆ. ಅದನ್ನು ಎಲ್ಲ Scheduled Castes.......

Sri G. DUGGAPPA.—That is for running a Boarding Home.

ಶ್ರೀ ವಿ. ವೆಂಕಟಪ್ಪ.—ಮೂರು ಲಕ್ಷ ರೂಪಾಯಿಗಳನ್ನು Backward ಮತ್ತು Depressed Class ವಿದ್ಯಾರ್ಥಿಗಳಿಗೆ ಸರಿಯಾದ ರೀತಿಯಲ್ಲಿ ಹಂಚುವುದಕ್ಕಾಗಿ ಏರ್ಪಾಡುಮಾಡಿಕೊಂಡಿದೆ.

ಡಾ॥ ಪಾರ್ಥಸಾರಥಿಯವರು Physical Education ನ ವಿಷಯದಲ್ಲಿ ಸರಿಯಾದ ಶಿಕ್ಷಣ ಕೊಡುತ್ತಿಲ್ಲ. ಸರಿಯಾದ ಏರ್ಪಾಡುಮಾಡುತ್ತಿಲ್ಲವೆಂದು ಹೇಳಿದರು. ಇದನ್ನು ಮಾಡಬೇಕಾದುದು ಅಗತ್ಯ. ಈಗ ಇರತಕ್ಕ ಪದ್ಧತಿಯಲ್ಲಿ ನ್ಯೂನತೆಯೇನೋ ಇದೆ. ನಾನು ಒಂದು ಸಾರಿ ಕೊಳ್ಳೆಗಾಲಕ್ಕೆ ಈಚೆಗೆ ಹೋಗಿದ್ದೆ. ಅಲ್ಲಿಯ ಸ್ಕೂಲುಗಳಲ್ಲಿ Y.M.C.A. ಯಿಂದ ತರಬೇತಾದ ಉಪಾಧ್ಯಾಯರುಗಳು 40 ವಿದ್ಯಾರ್ಥಿಗಳಿಗೆ ಒಬ್ಬರಂತೆ ಇದ್ದದ್ದನ್ನು ನೋಡಿದೆ. ಅದನ್ನು ನೋಡಿ ನಮ್ಮ ಕಡೆಗಳಲ್ಲಿಯೂ ಈ ರೀತಿಯಾದ Physical Education ಪದ್ಧತಿಯನ್ನು ಅನುಸರಿಸಿದರೆ ಚೆನ್ನಾಗಿರುತ್ತದೆ ಎಂದು ನನಗೆನ್ನಿಸಿತು. ಅದೇ ರೀತಿಯಾದ ಪದ್ಧತಿಯನ್ನು ಇಲ್ಲಿಯೂ ತರುವುದಕ್ಕೆ ಪ್ರಯತ್ನಪಡುತ್ತೇನೆ. ಅವರು ಹೇಳಿದ ಪರೀಕ್ಷೆಯ ವಿಷಯದಲ್ಲಿ ನಾನೇನೂ ಹೇಳಲಾರೆ. ಮತ್ತು ಪಾಶ್ಚಾತ್ಯ ದೇಶಗಳಲ್ಲಿ ಯಾವ ರೀತಿಯಾದ ಪದ್ಧತಿಗಳಿವೆಯೋ ನನಗೆ ಗೊತ್ತಿಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಯಾವ ರೀತಿಯಾಗಿ ನಡೆಯುತ್ತಿದೆ ಎನ್ನುವುದನ್ನು ಪರಿಶೀಲನೆ ಮಾಡಿ ಅದರಿಂದ ವಿದ್ಯಾರ್ಥಿಗಳಿಗೆ ನಿಜವಾಗಿಯೂ ಅನುಕೂಲವಾಗಿದ್ದರೆ, ವಿದ್ಯಾಭ್ಯಾಸದ ಇಲಾಖೆಯಲ್ಲಿಯೂ ಆ ಪದ್ಧತಿಗಳನ್ನು ಏರ್ಪಾಡುಮಾಡಬಹುದು. ಹಾಗೆ ಮಾಡುವುದಕ್ಕೆ ಇಲ್ಲಿಂದ ಕೆಲವರು ಹೊರಗಡೆಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ಅದರ ವಿವರಗಳನ್ನು ತಿಳಿದುಕೊಂಡು ಅಳವಡಿಸುವುದಕ್ಕೆ ಸಾಧ್ಯವೆ ಎಂದು ಪರಿಶೀಲಿಸಲಾಗುತ್ತದೆ.

ಶ್ರೀಮತಿ ನಾಗರತ್ನಮ್ಮನವರು ಮೈಸೂರಿನಲ್ಲಿ ಇರತಕ್ಕ ಮಹಾರಾಣೀ ಕಾಲೇಜಿನ ಮತ್ತು ಹಾಸ್ಟೆಲ್ಲಿನಲ್ಲಿ ಇರತಕ್ಕ ಅನಾನುಕೂಲಗಳನ್ನು ಬಹಳ ಚೆನ್ನಾಗಿ ವಿವರಿಸಿದರು. ಅದನ್ನು ನಾನೂ ನೋಡಿದ್ದೇನೆ. ನನ್ನ ಹಿಂದೆ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಕಡಿದಾಳ್ ಮಂಜಪ್ಪನವರು ಹೇಳಿದರು. ಇದಕ್ಕಾಗಿ ಒಂದು ಎಸ್ಟಿಮೇಟು ತಯಾರಾಗಿ sanction ಆಗಿತ್ತೆಂದು ಹೇಳಿದರು ಮತ್ತು ಅದು ಈಗ ಏನಾಗಿದೆಯೋ ವಿಚಾರಮಾಡಬೇಕೆಂದು ಸೂಚಿಸಿದ್ದಾರೆ. ಅದರಂತೆ ವಿಚಾರ ಮಾಡಿ ಅದನ್ನು ಆದಷ್ಟು ಜಾಗ್ರತೆ ನಡೆಸಿಕೊಡಲು ವಿಚಾರಮಾಡುತ್ತೇನೆ. ಮತ್ತು ಯೂನಿವರ್ಸಿಟಿಯಲ್ಲಿಯೂ ಈ ಕ್ಲಾಸುಗಳಿಗಿರತಕ್ಕ ಅನಾನುಕೂಲಗಳನ್ನು ತಿಳಿಸಿ ತ್ವರಿತದಿಂದ ತಕ್ಕ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಪಡುತ್ತೇನೆ.

ಶ್ರೀ ಸುಬ್ರಮಣ್ಯಂ ರವರು ಹೇಳಿರತಕ್ಕ ಸಲಹೆಗಳೇನೋ ಉತ್ತಮವಾಗಿವೆ. ಅದನ್ನು ಯಾವ ರೀತಿಯಾಗಿ ಜಾರಿಗೆ ತರುವುದಕ್ಕೆ ಸಾಧ್ಯ ಎನ್ನುವುದನ್ನು ಯೋಚನೆ ಮಾಡುವುದಕ್ಕಾಗಿ ಯೂನಿವರ್ಸಿಟಿ ಶಾಖೆಗೆ ಕಳುಹಿಸಿ ಕೊಡುವ ಏರ್ಪಾಡುಮಾಡುತ್ತೇವೆ.

ನಮ್ಮ ಸ್ನೇಹಿತರಲ್ಲಿ ಯಾರು ಯಾರು Adult Literacy Council ಸರಿಯಾಗಿ ಕೆಲಸಮಾಡುತ್ತಿಲ್ಲ

(ಶ್ರೀ ವಿ. ವೆಂಕಟಪ್ಪ)

ವೆಂದು ಆರೋಪಣೆ ಮಾಡಿದರೋ ಅವರಿಗೆಲ್ಲಾ ಶ್ರೀ ಸುಬ್ರಮಣ್ಯ ಅವರು ಬಹಳ ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ. ಆದುದರಿಂದ ನಾನು ಉತ್ತರ ಕೊಡಬೇಕಾಗಿಲ್ಲ. ಮೈಸೂರಿನಲ್ಲಿ ಮಾಡುತ್ತಿರುವ ಈ ಕೆಲಸವನ್ನು ಇಂಡಿಯಾ ದೇಶದಲ್ಲಿ ಇನ್ನೆಲ್ಲಿಯೂ ಮಾಡುತ್ತಿಲ್ಲವೆಂದು ತಜ್ಞರು ಒಪ್ಪಿಕೊಂಡಿದ್ದಾರೆ. ಬಹಳ ತಜ್ಞರೆನಿಸಿಕೊಂಡವರು, ಹೊರಗಡೆಯಿಂದ ಬಂದವರು ಈ ವಿಷಯದಲ್ಲಿ ಬಹಳ ಒಳ್ಳೆಯ ಅಭಿಪ್ರಾಯ ಕೊಟ್ಟಿದ್ದಾರೆ. ಈ ಕೆಲಸ ಬಹಳ ಚೆನ್ನಾಗಿ ನಡೆಯುತ್ತಿದೆಯೆಂದು ಫೋರ್ಡ್ ಫೌಂಡೇಷನ್ ಅವರು ಹನ್ನೊಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹೀಗಿರುವಾಗ ವಯಸ್ಕರ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಸಂಸ್ಥೆ ಚೆನ್ನಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳುವುದು ಸರಿಯಲ್ಲ. ಎಲ್ಲೋ ಕೆಲವು ಸಂದರ್ಭಗಳಲ್ಲಿ ನೈಟ್ ಸ್ಕೂಲುಗಳಲ್ಲಿ ಸಾಕಷ್ಟು ತೃಪ್ತಿಕರವಾಗಿ ಕೆಲಸ ನಡೆಯದೇಯಿರಬಹುದು. ಆದರೆ ಉತ್ತಮ ರೀತಿಯ ವಿದ್ಯಾಪೀಠಗಳನ್ನು ಏರ್ಪಾಡು ಮಾಡಿ ಹಳ್ಳಿಗಳಲ್ಲೆ ಇದ್ದುಕೊಂಡು ಅಲ್ಲಿನ ಕೆಲಸವನ್ನು ಚೆನ್ನಾಗಿ ನಡೆಯುವಂತೆ ನೋಡಿಕೊಳ್ಳಲು ಸರಿಯಾದವರನ್ನು ತರಬೇತು ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಅಲ್ಲಿ ತರಬೇತು ಹೊಂದುತ್ತಿರುವವರು ಬೇರೆ ಸರ್ಕಾರಿ ಕೆಲಸಗಳಿಗೆ ಹೋಗುವಂಥ ಜನರಲ್ಲ. ಇವರಿಗೆ ವಿದ್ಯಾ ಅರ್ಹತೆಗೆ ಹೆಚ್ಚಿಗೆ ಇರಬೇಕೆಂಬ ನಿಯಮವಿಲ್ಲ. ಬೇರೆ ಕಡೆ ಕೆಲಸ ಸಿಕ್ಕಲು ಅವರಿಗೆ ಅವಕಾಶವಿಲ್ಲ. ಇವರು ಹಳ್ಳಿಯ ಜನರಿಗೆ ಅನುಕೂಲ ಮಾಡುವ ರೀತಿಯಲ್ಲಿ ಕೆಲಸಮಾಡುತ್ತಾರೆ. ಆದುದರಿಂದ ಅನೇಕರು ಈ ಇಲಾಖೆಯಲ್ಲಿ ಎಷ್ಟು ಅನ್ಯಾಯ ನಡೆಯುತ್ತಿದೆ ಎಂದುಕೊಂಡಿದ್ದಾರೋ ಅಷ್ಟು ಅದು ಸರಿಯಲ್ಲವೆಂದು ಬಹಳ ಚೆನ್ನಾಗಿ ಶ್ರೀ ಸುಬ್ರಹ್ಮಣ್ಯರವರು ಹೇಳಿದ್ದಾರೆ.

ಲೋಕಲ್ ಬಾಡಿಸ್‌ಗೆ ಸೇರಿದ ಶಾಲೆಗಳ ಉಪಾಧ್ಯಾಯರಿಗೂ ಏಡೆಡ್ ಸ್ಕೂಲುಗಳ ಉಪಾಧ್ಯಾಯರುಗಳಿಗೂ, ಬದಲಾವಣೆಯಾಗಿರುವ ಸಂಬಳ ಸಾರಿಗೆಗಳು ಅನ್ವಯಿಸುವಂತೆ ಮಾಡಿಲ್ಲ, ಇದರಿಂದ ತೊಂದರೆಯಾಗಿದೆ ಎಂದು ಹೇಳಿದರು. ಇದರಲ್ಲಿ ನಿಜಾಂಶವಿದೆ. ಸರ್ಕಾರದವರು ಈ ರೀತಿ ಮಾಡುವುದಕ್ಕೆ ಕಾರಣವಿದೆ. ಸರ್ಕಾರದವರು ಏನು ಸಂಬಳಸಾರಿಗೆಗಳನ್ನು ಕೊಡಬೇಕೆಂದು ಹೇಳುತ್ತಾರೆ. ಅಷ್ಟನ್ನು ಕೊಡುವುದಕ್ಕೆ ಆ ಸಂಸ್ಥೆಗಳನ್ನು ನಡೆಸುತ್ತಿರುವವರಿಗೆ ಚೈತನ್ಯವಿಲ್ಲದೆ ಕಷ್ಟವಾದೀತೋ ಏನೋ ಎಂದು, ಅವರ ಅನುಕೂಲವನ್ನು ನೋಡಿ ಈ ಸಂಬಳಸಾರಿಗೆಗಳನ್ನನುಸರಿಸಬಹುದೆಂದು ಹೇಳಿದ್ದಾರೆ. ಸಂಸ್ಥೆಗಳವರು ಈ ರೀತಿ ಕೊಡಲು ನಮ್ಮಿಂದ ಸಾಧ್ಯವಿಲ್ಲವೆಂದೂ, ಇದರಿಂದಾಗುವ ಹೆಚ್ಚಿನ ಖರ್ಚನ್ನು ಸರ್ಕಾರವೇ ವಹಿಸಬೇಕೆಂದೂ ಹೇಳಿದ್ದಾರೆ. ಈ ವಿಷಯದಲ್ಲಿ ಸರ್ಕಾರದವರು ಪರ್ಯಾಲೋಚನೆ ಮಾಡುತ್ತಿದ್ದಾರೆ. ಇದಕ್ಕಾಗಿ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ಎಷ್ಟು ಮಟ್ಟಿಗೆ ನಮ್ಮ ಜವಾಬ್ದಾರಿಯಾಗಬಹುದು, ಎಷ್ಟು ಮಟ್ಟಿಗೆ ಅವರಿಗೆ ಜವಾಬ್ದಾರಿ ವಹಿಸಬಹುದು ಎಂಬ ಬಗ್ಗೆ ಪರ್ಯಾಲೋಚನೆ ಮಾಡುತ್ತಾರೆ. ಈಗಿರತಕ್ಕ ರೀತಿಯಲ್ಲಿ ಎಷ್ಟು ಸಂಬಳ ಕೊಡಬೇಕೆಂದು ನಿಗದಿಯಾಗಿದೆಯೋ ಅಷ್ಟನ್ನೂ ಆಯಾ ಸಂಸ್ಥೆಗಳೇ ಕೊಡಬೇಕೆಂಬ ರೀತಿಯಲ್ಲಿ ಸರ್ಕಾರಿ ಆಜ್ಞೆಯಾಗಿದೆ. ಪುನಃ ಈಗ ಸರ್ಕಾರದವರು ಅದರಲ್ಲಿ ಎಷ್ಟು ಭಾಗವನ್ನು ಸರ್ಕಾರ ವಹಿಸಿಕೊಳ್ಳಬಹುದು. ಆ ಸಂಸ್ಥೆಗಳಲ್ಲಿ ಕೆಲಸಮಾಡುವ ಉಪಾಧ್ಯಾಯರಿಗೆ ತೊಂದರೆಯಾಗದೆ ಇರುವ ಹಾಗೆ ಮಾಡುವುದು ಎಷ್ಟು ಮಟ್ಟಿಗೆ ಸಾಧ್ಯ ಎಂಬುದನ್ನು ನೋಡಲು ಒಂದು ಸಮಿತಿಯನ್ನು ನೇಮಕಮಾಡಿದ್ದಾರೆ. ಬಹುಮಟ್ಟಿಗೆ ಉಪಾಧ್ಯಾಯರಿಗೆ ಅನುಕೂಲವಾಗುವ ಶಿಫಾರಸುಗಳು ಆ ಸಮಿತಿಯವರಿಂದ ಬರುತ್ತವೆ, ಅವುಗಳನ್ನು ಬಹುಮಟ್ಟಿಗೆ ಸರ್ಕಾರ ಒಪ್ಪುವುದರಲ್ಲಿ ಸಂಶಯವಿಲ್ಲವೆಂದು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ (ಚಾಮರಾಜನಗರ).—ವಿಶ್ವವಿದ್ಯಾನಿಲಯದ ಉಪಾಧ್ಯಾಯರುಗಳಿಗೆ ಸಂಬಳ ಸಾರಿಗೆಗಳನ್ನು ಹೆಚ್ಚಿಸಲು ಸಿಂಡಿಕೇಟ್ ಮಾಡಿರುವ ಶಿಫಾರಸಿನ ಬಗ್ಗೆ, ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ವಿ. ವೆಂಕಟಪ್ಪ.—ಅದರಲ್ಲಿ ತೊಂದರೆಯೇನೂ ಇಲ್ಲ. 'ರೀ ಅಲೊಕೇಷನ್ ಸ್ಟೇಟ್‌ಮೆಂಟ್' ಅವರಿಂದ ಬಾರದೆ ಇರುವುದರಿಂದ ಇನ್ನೂ ಒಪ್ಪಲಿಲ್ಲ. ವಿಶ್ವವಿದ್ಯಾನಿಲಯದ ಕಮಿಷನ್ ಅವರು ಹೇಳಿದುದಕ್ಕೂ ನಾವು ಯೋಚನೆ ಮಾಡಿದುದಕ್ಕೂ ಸ್ವಲ್ಪ ಅಂತರವಿದೆ. ಇದನ್ನು ವಿಶ್ವವಿದ್ಯಾನಿಲಯದ ಕೌನ್ಸಿಲ್ ಮತ್ತು ಸಿಂಡಿಕೇಟ್ ಒಪ್ಪಿಕೊಳ್ಳುವ ಸ್ಥಿತಿ ಇದೆ. ಆದಷ್ಟು ಜಾಗ್ರತೆ ಇದನ್ನು ಕಾರ್ಯರೂಪಕ್ಕೆ ತರುವ ಏರ್ಪಾಡು ನಡೆಯುತ್ತಿದೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಖಾಸಗಿ ಶಾಲೆಗಳ ಗ್ರಾಂಟ್ ಸಂಬಂಧವಾಗಿ ಸಮಿತಿ ನೇಮಕ ಮಾಡಿದೆ ಎಂದು ಹೇಳಿದಿರಿ, ಆ ಸಮಿತಿಯ ಸಲಹೆಗಳು ಬಂದು ಯಾವಾಗ ಅದನ್ನು ತೀರ್ಮಾನ ಮಾಡುತ್ತಾರೆ?

ಶ್ರೀ ವಿ. ವೆಂಕಟಪ್ಪ.—ಒಂದು ತಿಂಗಳೊಳಗಾಗಬಹುದು.

ಎಲ್ಲಾ ಹೈಸ್ಕೂಲುಗಳನ್ನೂ ಮಲ್ಟಿಪರ್‌ಪಸ್ ಹೈಸ್ಕೂಲುಗಳನ್ನಾಗಿ ಪರಿವರ್ತನೆ ಮಾಡಬೇಕೆಂದು ಬಹುಶಃ ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರ ಸಲಹೆ ಎಂದು ಕಾಣುತ್ತದೆ. ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಮಾಡಬಹುದೆಂದು ಯೋಚನೆಮಾಡಿದ್ದೇವೆ. ಇದಕ್ಕೆ ಬೇಕಾದ ಸಾಮುಗ್ರಿ ಸಲಕರಣೆಗಳನ್ನೊದಗಿಸಲು, ಹೊರಗಡೆಯಿಂದ ತರಿಸಬೇಕಾಗಿದೆ. ಇದಕ್ಕೆ ಅನುಮತಿ ದೊರೆಯುವುದು ಕಷ್ಟವಾಗಿದೆ. ಆದುದರಿಂದ ಎಲ್ಲೆಲ್ಲಿ ಎಷ್ಟೆಷ್ಟು ಆವಶ್ಯಕವಾದ ಸಾಮಾನುಗಳನ್ನು ಒದಗಿಸುವುದಕ್ಕೆ ಸಾಧ್ಯವೋ ಅಷ್ಟು ಮಲ್ಟಿಪರ್‌ಪಸ್ ಸ್ಕೂಲುಗಳನ್ನು ಪ್ರತಿವರ್ಷವೂ ಹೆಚ್ಚು ಮಾಡಬೇಕೆಂಬ ನಿಯಮವನ್ನು ಹಾಕಿಕೊಂಡಿದ್ದೇವೆ. ಸಾಧ್ಯವಾದಷ್ಟೂ ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಹೆಣ್ಣುಮಕ್ಕಳಿಗೆ ಹೆಚ್ಚು ವೇತನಗಳನ್ನು ಕೊಡಬೇಕೆಂದು ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು ಸೂಚನೆ ಮಾಡಿದ್ದಾರೆ. ಇದರಲ್ಲಿ ಗಂಡುಮಕ್ಕಳು ಹೆಣ್ಣುಮಕ್ಕಳು ಎಂದು ಭೇದವನ್ನೇನೂ ಮಾಡಬೇಕೆಂದು ನಾವು ಎಂದುಕೊಂಡಿಲ್ಲ. ಯಾರಿಗೆ ವೇತನ ಕೊಡಬೇಕೋ ಅವರಿಗೆಲ್ಲಾ ಕೊಡಬೇಕು. ಇವರಿಗೇ ಬೇರೆ ಎಂದು ಮಾಡದೆ ಎಷ್ಟುಜನ ವಿದ್ಯಾರ್ಥಿನಿಯರಿದ್ದಾರೋ ಅವರ ಸಂಖ್ಯೆಗನುಗುಣವಾಗಿ ಅವರಲ್ಲಿ ಯೋಗ್ಯರೂ ಅರ್ಹರೂ ಆದವರಿಗೆ ವೇತನಗಳನ್ನು ಕೊಡಲು ಏರ್ಪಾಡು ಮಾಡಿದ್ದೇವೆ.

ಶ್ರೀಮತಿ ಲಕ್ಷ್ಮಿದೇವಿ ರಾಮಣ್ಣ (ಚಾಮರಾಜಪೇಟೆ).—ಹೈಸ್ಕೂಲುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಇದುವರೆಗೂ 'ಬ್ಯಾಕ್‌ವರ್ಡ್ ಕ್ಲಾಸ್' ವೇತನ ಕೊಟ್ಟಿಲ್ಲ.

ಶ್ರೀ ವಿ. ವೆಂಕಟಪ್ಪ.—ಇದಕ್ಕಾಗಿ ಮೂರು ಲಕ್ಷ ರೂಪಾಯಿ ಕೊಟ್ಟಿದ್ದೇವೆ, ಅದನ್ನು ಯಾವರೀತಿ ವಿನಿ

ಯೋಗ ಮಾಡುವುದು ಸೂಕ್ತವೆಂಬುದನ್ನು ಯೋಚನೆ ಮಾಡುತ್ತಿದ್ದೇವೆ.

ವಿದ್ಯಾವಂತರಲ್ಲಿ ನಿರುದ್ಯೋಗ, ಅದರಲ್ಲಿಯೂ ಹೆಣ್ಣು ಮಕ್ಕಳಲ್ಲಿ ವಿದ್ಯಾವಂತರ ನಿರುದ್ಯೋಗವನ್ನು ಹೇಗೆ ತಪ್ಪಿಸುವುದೆಂಬುದಕ್ಕೆ ಉತ್ತರ ಹೇಳಿದ್ದೇನೆ. ನೌಕರಿಯಲ್ಲಿರುವ ಮಹಿಳೆಯರಲ್ಲಿ ಗಂಡಸು ಕೆಲಸದಲ್ಲಿರುವ ಕಡೆಯೇ ಹೆಂಡತಿಯನ್ನು ಇರಿಸುವುದಕ್ಕೆ ಸಾಧ್ಯವಾದ ಮಟ್ಟಿಗೂ ಏರ್ಪಾಡು ಮಾಡಬೇಕೆಂದು ಸಲಹೆ ಮಾಡಿದರು. ಸಾಧಾರಣವಾಗಿ ಈಗಿರುವ ಪದ್ಧತಿಯೇ ಹೀಗೆ. ಆದರೆ ಕೆಲವು ಸಂದರ್ಭಗಳಲ್ಲಿ ಕೆಲವು ಕಾರಣಗಳಿಂದ ಗಂಡ ಹೆಂಡತಿಯರು ಬೇರೆ ಬೇರೆಯಾಗಿರಬೇಕಾಗಿ ಬರಬಹುದು. ಇಂಥ ಸಂದರ್ಭಗಳು ವಿನಾ ಸಾಮಾನ್ಯವಾಗಿ ಇಬ್ಬರೂ ಸರ್ಕಾರಿ ನೌಕರಿಯಲ್ಲಿದ್ದರೆ ಅವರು ಒಂದೇ ಸ್ಥಳದಲ್ಲಿರುವುದಕ್ಕೆ ಈಗಲೂ ಅವಕಾಶವಿದೆ, ನಾವು ಈಗ ಹೊಸದಾಗಿ ಏನೂ ಮಾಡಬೇಕಾಗಿಲ್ಲ.

ಶ್ರೀ ಎಂ. ಲಿಂಗೇಗೌಡ (ಕನಕಪುರ).—ಪ್ರೈಮರಿ ಸ್ಕೂಲು ಕಟ್ಟಡಗಳನ್ನು Cheap design ಪ್ರಕಾರ ಕಟ್ಟಬೇಕೆಂದು ಯೋಜನೆಮಾಡಿಕೊಂಡು, ಅದು ಇದುವರೆಗೂ ಸಾಧ್ಯವಾಗಿಲ್ಲ. ಆದಕಾರಣ ಕಟ್ಟಡಗಳ ಖರ್ಚನ್ನು ಪೂರ್ತಿಯಾಗಿ ಸರ್ಕಾರವೇ ವಹಿಸಿ ಕಟ್ಟಿಸಿಕೊಡಬೇಕೆಂಬ ಸಲಹೆ ಬಂದಿದೆ. ಇದಕ್ಕೆ ಸರ್ಕಾರದ ಜವಾಬೇನು ?

ಶ್ರೀ ವಿ. ವೆಂಕಟಪ್ಪ.—Cheap design ನಲ್ಲಿ ಅಷ್ಟು ಚೆನ್ನಾಗಿ ಕೆಲಸ ಆಗಿಲ್ಲ, ಕೆಲವು ಕಡೆ ಇದು ಜನರಿಗೆ ಒಪ್ಪಿಗೆಯಾಗಿಲ್ಲವೆಂದು ತಿಳಿದು ಬಂದಿದೆ. ಬಳ್ಳಾರಿಯ ಕಡೆ ಇದು ಬಹಳ ಚೆನ್ನಾಗಿ ನಡೆಯುತ್ತಿದೆ. ನೀವೂ ಸಹಾಯ ಮಾಡುವುದಾದರೆ ಅನೇಕ ಸ್ಕೂಲುಗಳನ್ನು ಮಾಡುವುದಕ್ಕೆ ಸಿದ್ಧವಾಗಿದ್ದೇವೆ ಎಂದು ಹೇಳಿದ್ದಾರೆ. ಇದನ್ನು ಯೋಚನೆಮಾಡಬೇಕಾಗಿದೆ. ಚೀಫ್ ಇಂಜಿನಿಯರನ್ನೂ ನಮ್ಮ ಇಲಾಖೆಯ ಮುಖ್ಯಾಧಿಕಾರಿಗಳನ್ನೂ ಕರೆಸಿ ಮಾತನಾಡಬೇಕೆಂದಿದ್ದೇನೆ. ಚೀಫ್ ಇಂಜಿನಿಯರು ಊರಿನಲ್ಲಿಲ್ಲದಿದ್ದುದರಿಂದ ಇದುವರೆಗೆ ಆಗಿಲ್ಲ. ಸ್ವಲ್ಪ ಮಟ್ಟಿಗೆ ಬದಲಾವಣೆ ಮಾಡಿಕೊಂಡು ಮಾಡಬೇಕೆಂಬ ಉದ್ದೇಶವಿದೆ. ಶ್ರೀಮಾನ್ ಚನ್ನಬಸಪ್ಪನವರು ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್‌ರಾಗಿದ್ದಾಗ ಕೆಲವು ಸ್ಕೂಲು ಕಟ್ಟಡಗಳನ್ನು ಕಡಮೆ ಬೆಲೆಯಲ್ಲಿ ಉತ್ತಮರೀತಿಯಲ್ಲಿ ಕಟ್ಟಿಸಿದ್ದಾರೆ. ಅದನ್ನು ನೋಡಿ ಸ್ವಲ್ಪ ಬದಲಾವಣೆ ಮಾಡಿಕೊಂಡು ಮಾಡಬೇಕಾಗಿದೆ. ಏಕೆಂದರೆ ಅದರಲ್ಲಿ ಕೆಲವು ಅನಾನುಕೂಲಗಳಿವೆ. ಆಸ್‌ಬೆಸ್ಟಸ್ ಷೀಟ್ ಮೇಲ್ಛಾವಣಿ ಮತ್ತು 9 ಅಂಗುಲದ ಗೋಡೆ ಕಟ್ಟಬೇಕೆಂದಿದೆ. ಈ ಕಲ್ನಾರು ಷೀಟುಗಳು ಕಲ್ಲು ಬಿದ್ದು ಹೋಗಿ ಒಡೆದು ಹೋದರೆ ಪೂರ್ತಿಯಾಗಿ ಬದಲಾವಣೆ ಮಾಡಬೇಕಾಗುತ್ತದೆ. ಇನ್ನೂ ಕೆಲವು ನ್ಯೂನತೆಗಳು ನನ್ನ ಗಮನಕ್ಕೆ ಬಂದಿವೆ. ಆದಕಾರಣ ಹೇಗೆ ಬದಲಾವಣೆ ಮಾಡಬೇಕೆಂಬ ಬಗ್ಗೆ ಇಂಜಿನಿಯರೊಡನೆ ಯೋಚನೆಮಾಡಿ ಮಾಡಬೇಕೆಂದಿದ್ದೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—S. S. L. C. ಪಾಸಾದ ಹುಡುಗರಿಗೆ ಇದುವರೆಗೂ ಅಗ್ರಿಕಲ್ಚರಲ್ ಮತ್ತು ಎಲ್. ಎಂ. ಪಿ. ಡಿಪ್ಲೊಮಾ ಕೋರ್ಸುಗಳಿಗೆ ಸೀಟುಗಳನ್ನು ಕೊಡಲಾಗುತ್ತಿತ್ತು. ಆದರೆ ಈಗ ಅವುಗಳಲ್ಲಿ ಇವರಿಗೆ ಅವಕಾಶವನ್ನು ತಪ್ಪಿಸಲಾಗಿದೆ. ಆದಕಾರಣ ತಾವು ಈಗ ಆ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟಿನಲ್ಲಾದರೂ ವಿದ್ಯಾರ್ಥಿಗಳಿಗೆ ಒಂದು ಹೆಚ್ಚಿನ ಸ್ಥಾನಗಳು ಇರುವಂತೆ ಏರ್ಪಾಡನ್ನು ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ವಿ. ವೆಂಕಟಪ್ಪ.—ಆ ವಿಚಾರವನ್ನು ಟೆಕ್ನಿಕಲ್ ಸಮಿತಿಯವರು ತೀರ್ಮಾನಿಸಬೇಕಾಗಿದೆ. ಆದಕಾರಣ ಆ ಸಮಿತಿಯವರ ಒಪ್ಪಿಗೆ ಪಡೆಯದೆ ನಾನು ಈಗ ಏನನ್ನೂ ಹೇಳುವುದಕ್ಕಾಗುವುದಿಲ್ಲ. ಈ ತಕ್ಷಣಕ್ಕೆ ಆಗಬೇಕೆಂದರೆ ಅದನ್ನು ಮಾಡುವುದಕ್ಕಾಗುವುದಿಲ್ಲ.

ಶ್ರೀಮತಿ ನಾಗರತ್ನಮ್ಮ.—ನಾನು ಹೆಣ್ಣುಮಕ್ಕಳಿಗೆ ಮಾಧ್ಯಮಿಕ ಮತ್ತು ಹೈಸ್ಕೂಲುಗಳ ಪೂರ್ತಿ ಉಚಿತ ವಿದ್ಯಾಭ್ಯಾಸದ ಏರ್ಪಾಡನ್ನು ಕೇಳಿದ್ದೆನು. ಆ ಬಗ್ಗೆ ತಾವೇನೂ ಹೇಳಲಿಲ್ಲವಲ್ಲಾ ?

ಶ್ರೀ ವಿ. ವೆಂಕಟಪ್ಪ.—ತಮ್ಮ ಪ್ರಶ್ನೆಯನ್ನು ಸರ್ಕಾರದವರು ದೀರ್ಘವಾಗಿ ಪರಿಶೀಲನೆ ಮಾಡಬೇಕಾಗಿದೆ. ಇದಕ್ಕಾಗಿ ಸಾಕಷ್ಟು ಹಣವನ್ನು ಒದಗಿಸಿಕೊಳ್ಳಬೇಕಾಗಿದೆ. ಹಾಗೆ ಒದಗಿಸಿಕೊಂಡನಂತರ ತಮಗೆ ನಾನು ಉತ್ತರ ಹೇಳಬಹುದೇ ಹೊರತು ಈಗಲೇ ಏನನ್ನೂ ಖಚಿತವಾಗಿ ಹೇಳಲಾರೆ. ಸ್ವಾಮಿ, ನಾನು ಈ ಹಿಂದೆ ಆಗಲೇ ತಿಳಿಸಿದಹಾಗೆ ಈ ವಿದ್ಯಾಭ್ಯಾಸದ ವಿಚಾರದಲ್ಲಿ ಇದರ ಖರ್ಚಿನ ವಿಚಾರದಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ.

ಶ್ರೀ ಬಿ. ಇ. ರಾಮಯ್ಯ.—ಆ ಭೂದಾನ-ವಿದ್ಯಾದಾನದ ವಿಚಾರ ಅಲ್ಲಿಗೇ ನಿಂತು ಹೋದ ಹಾಗೋ ಅಥವಾ ಅದನ್ನೇನಾದರೂ ಮುಂದುವರಿಸುತ್ತೀರೋ?

ಶ್ರೀ ವಿ. ವೆಂಕಟಪ್ಪ.—ನಾನೀಗ ಮಾನ್ಯ ಸದಸ್ಯರನೇಕರು ಹೇಳಿರತಕ್ಕ ಸಲಹೆಗಳನ್ನೆಲ್ಲ ಗಮನದಲ್ಲಿಟ್ಟುಕೊಂಡಿದ್ದೇನೆ. ಇದುವರೆಗೂ ಮಾನ್ಯ ಸದಸ್ಯರುಗಳೆಲ್ಲ ನೀಡಿರತಕ್ಕದ್ದು ರಚನಾತ್ಮಕ ಸಲಹೆಗಳೇ ಹೊರತು ಸರ್ಕಾರವನ್ನು ಅಷ್ಟಾಗಿ ಈ ಬಾಬಿನಲ್ಲಿ ಯಾರೂ ದೂಷಣೆ ಮಾಡಿಲ್ಲ. ಶ್ರೀಮಾನ್ ದುಗ್ಗಪ್ಪನವರು ಹಾಸ್ಟಲ್ ವಿಚಾರ ಹೇಳಿದರು. . .

ಶ್ರೀ ವೈ. ವೀರಪ್ಪ.—ಹಾಸನದಲ್ಲಿ ಕಾಲೇಜನ್ನು ತೆರೆಯುವ ವಿಚಾರದಲ್ಲಿ ತಾವೇನೂ ಹೇಳಲಿಲ್ಲ.

ಶ್ರೀ ವಿ. ವೆಂಕಟಪ್ಪ.—ಈ ದಿವಸ ವಿಶ್ವವಿದ್ಯಾನಿಲಯವು ಒಂದು ಆಟನಮಸ್ ಬಾಡಿಯಾಗಿದೆ. ಯಾವುದನ್ನು ಕಾಲೇಜಾಗಿ ಪರಿವರ್ತಿಸಬೇಕು ಏನು ಎಂಬತಕ್ಕ ಸಮಾಚಾರಗಳೆಲ್ಲ ಅವರಿಗೆ ಸಂಬಂಧಪಟ್ಟವುಗಳಾಗಿವೆ. ಆ ವಿಚಾರದಲ್ಲಿ ಈಗ ನಾನು ಇಲ್ಲಿ ಏನು ಹೇಳುವುದಕ್ಕೂ ಸಾಧ್ಯವಿಲ್ಲ. ಆದರೆ ಶ್ರೀಮಾನ್ ದುಗ್ಗಪ್ಪನವರು ಹೇಳಿರತಕ್ಕ ವಿಚಾರದಲ್ಲಿ ಕೆಲವು ಅಂಥ ಹಾಸ್ಟಲುಗಳು ಇರುತ್ತವೆ. ಅಲ್ಲಿ ನೋಡಿಕೊಳ್ಳತಕ್ಕವರು ಸರಿಯಾಗಿಲ್ಲದೆ ಹೋದ ಪಕ್ಷದಲ್ಲಿ ತೊಂದರೆಯಾಗುತ್ತದೆ. ಆದರೆ ಕೆಲವು ಮಾನ್ಯ ಸದಸ್ಯರು ಪಠ್ಯಪುಸ್ತಕಗಳ ತೊಂದರೆಯಿದೆಯೆಂದು ಹೇಳಿದರು. ಆದರೆ ಆ ವಿಚಾರವೇನೂ ನನ್ನ ಗಮನಕ್ಕೆ ಬಂದಿಲ್ಲ. ಎಲ್ಲ ಕಡೆಗಳಲ್ಲೂ ಈ ಬಗ್ಗೆ ನಾನು ವಿಚಾರಮಾಡುತ್ತಿದ್ದೇನೆ. ಆದರೆ ಕೆಲವು ಸ್ಥಳಗಳಲ್ಲಿ ಸರಬರಾಯಿಯಾದ ಪುಸ್ತಕಗಳು ಸಾಕಾಗದ ಸ್ವಲ್ಪ ತೊಂದರೆಯಾಗಿರಬಹುದು. ಆದರೆ ನನಗೆ ಯಾವುದೋ ಒಂದು ಪುಸ್ತಕದ ಬಗ್ಗೆ ನಿಖರವಾಗಿ ಗೊತ್ತಿದೆ. ಅದು ಸಿಕ್ಕುತ್ತಿಲ್ಲವೆಂಬುದಾಗಿ ಒಂದಾವರ್ತಿ ಮೈಸೂರಿನಿಂದ ಶ್ರೀ ವ ಹಮುದ್ ಸೇಟ್‌ರವರೂ ಸಹ ನನಗೆ ಬರೆದಿದ್ದರು. ಆದರೆ ಆ ಬಗ್ಗೆ ವಿಚಾರ ಮಾಡಲಾಗಿ ಅದು ಎಲ್ಲಿಯೂ ಸಿಕ್ಕಲಿಲ್ಲ. ಆದರೆ ಈಗ ಮಾನ್ಯ ಸದಸ್ಯರುಗಳೇನೇನು ಸಲಹೆಗಳನ್ನು ಈ ಪಠ್ಯಪುಸ್ತಕಗಳ ಬಗ್ಗೆ ತಿಳಿಸಿದ್ದಾರೋ ಆ ಸಲಹೆಗಳನ್ನೆಲ್ಲಾ ಈಗ ಸರ್ಕಾರದವರು ನೇಮಕಮಾಡಿರತಕ್ಕಂಥ ಪ್ರವೀಣರ ಮತ್ತು ನಿಪುಣರ ಸಮಿತಿಯ ಮುಂದಿಡುತ್ತೇನೆ. ಸ್ವಾಮಿ, ಅಧ್ಯಕ್ಷರೆ ನಾನಿನ್ನು ಒಂದು ವಿಚಾರವನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುವವನಿದ್ದೇನೆ

ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಮುಳಬಾಗಲು).—ತೆಲುಗು ಶಾಲೆಗಳನ್ನು ತೆರೆಯುವ ಬಗ್ಗೆ ತಾವೇನು ಹೇಳುವಿರಿ ?

ಶ್ರೀ ವಿ. ವೆಂಕಟಪ್ಪ.—ಸಾಕಾದಷ್ಟು ಹುಡುಗರಿದ್ದರೆ ತೆಲುಗು ಸ್ಕೂಲನ್ನು ಕೊಡಲು ನಮ್ಮ ಅಭ್ಯಂತರವೇನೂ ಇಲ್ಲ. ನಾವು ಇತ್ತೀಚೆಗೆ ಹೊಸದಾಗಿ ಕೋಮು ವಾರು ಹಾಸ್ಟಲುಗಳನ್ನು ತೆರೆಯಲು ಉತ್ತೇಜನ ಕೊಡುತ್ತಿಲ್ಲ. ಸರ್ಕಾರದವರು ಹೆಚ್ಚು ಹೆಚ್ಚಾಗಿ ಜನರಲ್ ಹಾಸ್ಟಲುಗಳನ್ನು ತೆರೆಯಲು ಸಹಾಯ ಮಾಡುತ್ತಿದ್ದಾರೆ. ಆದರೆ ಇಲ್ಲಿಯವರೆಗೂ ನಡೆಸಿಕೊಂಡು ಬಂದಿರತಕ್ಕವುಗಳನ್ನು ಈಗ ಮುಚ್ಚಿಬಿಡಿ ಎಂದು ಹೇಳುವುದಕ್ಕಾಗುವುದಿಲ್ಲ. ಅವುಗಳಿಗಾಗಿ ಈಗ ನಾವೇನೂ ಹೊಸದಾಗಿ ಉತ್ತೇಜನ ಕೊಡುತ್ತಿಲ್ಲ.

ಮೊನ್ನೆ ಬಡ್ಜೆಟ್‌ಮೇಲೆ ಭಾಷಣ ಮಾಡತಕ್ಕ ಕಾಲದಲ್ಲಿ ನನಗೆ ಸಂಬಂಧಪಟ್ಟಹಾಗೆ ಮಾನ್ಯಸದಸ್ಯರಾದಂಥ ಶ್ರೀ ಬಿ. ಕೆ. ಪುಟ್ಟರಾಮಯ್ಯನವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಆ ಮಾತುಗಳ ಬಗ್ಗೆ ಕೆಲವಕ್ಕೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ಉತ್ತರ ಕೊಡಬೇಕು. ನನ್ನನ್ನು ಈ ಮಂತ್ರಿಮಂಡಲಕ್ಕೆ ಏತಕ್ಕಾಗಿ ನೇಮಕಮಾಡಿಕೊಂಡರು ಎಂಬತಕ್ಕ ಪ್ರಶ್ನೆಗೆ ನಾನು ಜವಾಬನ್ನು ಹೇಳಲಾರೆ. ಅದು ಪಾರ್ಟಿ ನಾಯಕರಿಗೆ ಬಿಟ್ಟಿದ್ದು. ಆದರೆ ಆ ಮಾನ್ಯಸದಸ್ಯರು ವೈಯ್ಯಕ್ತಿಕವಾಗಿ ನನಗೆ ಸಂಬಂಧ ಪಟ್ಟಹಾಗೆ ಕೆಲವು ಆಕ್ಷೇಪಣೆಗಳನ್ನು ಮಾಡಿದ್ದಾರೆ. ಅವುಗಳ ಬಗ್ಗೆ ಈಗ ನಾನೊಂದು ಉತ್ತರವನ್ನು ಹೇಳದಿದ್ದರೆ "ಮಂತ್ರಿಗಳನ್ನು ನಾನು ದಭಾಯಿಸಿಬಿಟ್ಟೆ ; ಈ ವಿಚಾರದ ಬಗ್ಗೆ ಅವರೇನೂ ಮಾತನಾಡಲೇ ಇಲ್ಲ" ಎಂದು ಹೇಳಿಕೊಳ್ಳಲು ಅವರಿಗೆ ಒಂದು ಅವಕಾಶ ಮಾಡಿಕೊಟ್ಟಹಾಗೆ ಆಗುತ್ತದೆ. ಅಥವಾ ಅವರಿಗಾಗಿ ಒಂದು ಸಮರ್ಪಕವಾದ ಉತ್ತರ ಕೊಡಲು ಮಾತನಾಡೋಣವೆಂದರೆ, ಆಗ ನಾನು ಒಂದು ಆತ್ಮಸ್ತುತಿ ಮಾಡಿಕೊಂಡ ದೋಷಕ್ಕೆ ಪಾತ್ರನಾಗಬೇಕಾಗಿರುವುದಲ್ಲದೆ ಪರನಿಂದೆಯ ದೋಷಕ್ಕೂ ಪಾತ್ರನಾಗಬೇಕಾಗುವುದೇನೋ ಎಂಬ ಶಂಕೆ ಕೂಡ ಇದೆ. ಆದರೂ ಕೂಡ ವಿಧಿಯಿಲ್ಲದೆ ನಾನೀಗ ಎರಡು ಮಾತುಗಳನ್ನು ಹೇಳಬೇಕಾಗಿದೆ. ಶ್ರೀಮಾನ್ ಪುಟ್ಟರಾಮಯ್ಯನವರು ಮಂತ್ರಿಗಳಾದ ಶ್ರೀ ವೀರಣ್ಣಗೌಡರನ್ನು ಉದ್ದೇಶಿಸಿ ಮಾತನಾಡುತ್ತ "ಆ ನಿಮ್ಮ ಪಕ್ಕದಲ್ಲಿ ಕುಳಿತಿರುವವರು ಯಾವಾಗ ಜೈಲಿಗೆ ಹೋಗಿದ್ದರು ? ಅವರು ಏನೋ ಒಂದು ದಿವಸ—ಅವರ ಹೆಸರನ್ನು ಆ ಶಿವಪುರ ಸತ್ಯಾಗ್ರಹ ನಡೆಯುತ್ತಿದ್ದಾಗ ಯಾರೋ ಹೇಳಿದ್ದರಿಂದ ಜೈಲಿಗೆ ಹೋಗಿದ್ದರೆಂದು ಕಾಣುತ್ತದೆ" ಎಂದು ಆ ದಿವಸ ಹೇಳಿದರು. ಆದರೆ ಈ ಮಾತು ಸತ್ಯಕ್ಕೆ ಎಷ್ಟು ದೂರವಾಗಿದೆಯೆಂದರೆ ಉತ್ತರ ಧ್ರುವಕ್ಕೂ-ದಕ್ಷಿಣ ಧ್ರುವಕ್ಕೂ ಎಷ್ಟು ದೂರವಿದೆಯೋ ಅಷ್ಟೆ ದೂರವಿರುತ್ತದೆ. ಆದರೆ ಆವೇಳೆಯಲ್ಲಿ ಈ ಮಾತುಗಳನ್ನು ಹೇಳಿದವರು ಎಲ್ಲಿದ್ದರೋ ಅದು ನನಗೆ ಗೊತ್ತಿಲ್ಲ. ಆ ದಿವಸ ಶಿವಪುರದಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯುತ್ತಿದ್ದಾಗ ಒಬ್ಬ ಅಧ್ಯಕ್ಷರನ್ನು ಪೋಲೀಸಿನವರು ದಸ್ತಗಿರಿ ಮಾಡಿದರೆ ಆ ಕೂಡಲೆ ಮತ್ತೊಬ್ಬ ಕಾಗ್ರೆಸ್ ಅಧ್ಯಕ್ಷರನ್ನು ಅಲ್ಲೆ ನೇಮಕ ಮಾಡಿ ಸಭೆಯನ್ನು ಮುಂದುವರಿಸಬೇಕೆಂಬ ನಿಯಮವಿತ್ತು. ಆ ಪ್ರಕಾರ ಆ ದಿವಸ ಅಧ್ಯಕ್ಷರಾಗಿದ್ದು ದಸ್ತಗಿರಿಯಾದ ಮೂವರಲ್ಲಿ ನಾನು, ಶ್ರೀ ಕೆ. ಚಂಗಲರಾಯರೆಡ್ಡಿಯವರು ಮತ್ತು ಶ್ರೀ ಎಚ್. ಸಿ. ದಾಸಪ್ಪನವರು. ಆಗ ನಾವು ಮೂವರನ್ನೂ ಮೊದಲು ಮೈಸೂರು ಜೈಲಿಗೆ ಹಾಕಿದರು-ಅನಂತರ ಶ್ರೀ ಕೆ. ಚಂಗಲರಾಯರೆಡ್ಡಿಯವರನ್ನೂ ಮತ್ತು ಶ್ರೀ ಎಚ್. ಸಿ. ದಾಸಪ್ಪನವರನ್ನೂ ಶಿವಮೊಗ್ಗ ಜೈಲಿಗೆ ಕರೆದೊಯ್ಯಲಾಯಿತು. ನನ್ನ ಒಬ್ಬನನ್ನೇ ಒಂದು ಪೂರ್ತಿ ಜೈಲಿನಲ್ಲಿ ಹಾಸನದಲ್ಲಿ ಇಟ್ಟರು. ಹೀಗಿದ್ದರೂ ಆ ಮಾನ್ಯ ಸದಸ್ಯರು ಕೇವಲ ಒಂದು ದಿವಸ ಮಾತ್ರ ಜೈಲಿನಲ್ಲಿದ್ದು ಓಡಿಬಂದವರೆಂದು ಹೇಳಿದರು. ಆದರೆ ನಾನೀಗ ಈ ವಿಚಾರಗಳನ್ನೆಲ್ಲಾ ಹೇಳಿಕೊಂಡರೆ ನನಗೊಂದು ದೊಡ್ಡಸ್ತಿಕೆ ಬರುತ್ತೆಂದೇನೂ ನಾನು ಈ ವಿಚಾರಗಳನ್ನೆಲ್ಲಾ ಹೇಳುತ್ತಿಲ್ಲ. ಆದರೆ ನನ್ನ ವಿಚಾರದಲ್ಲಿ ಅವರು ಸಾರ್ವಜನಿಕರಲ್ಲಿ ಒಂದು ತಪ್ಪು ಅಭಿಪ್ರಾಯ ಉಂಟಾಗುವ ರೀತಿಯಲ್ಲಿ ಮಾತನಾಡಿದ್ದಾರೆ; ಅದಕ್ಕೋಸ್ಕರವಾಗಿ ನಾನೀಗ ಈ ವಿಚಾರಗಳನ್ನೆಲ್ಲಾ ತಿಳಿಸಬೇಕಾಗಿ ಬಂದಿತು. ಆ ಮೇಲೆ ಪುನಃ ನಾನು ಎರಡನೆ ಸಾರ್ತಿಗೆ 1947ರಲ್ಲಿ ಎಲ್ಲರೂ ಜೈಲಿಗೆ ಹೋದಂತೆ ನಾನೂ ಹೋದೆ ; ಎಲ್ಲರನ್ನೂ ಜೈಲಿನಿಂದ ಬಿಡುಗಡೆ ಮಾಡಿದ ಹಾಗೆ ನನ್ನನ್ನೂ ಬಿಡುಗಡೆ ಮಾಡಿದರು. ಆದರೆ ಇಷ್ಟು ಶಿವಾಯಿ ಆ ಮಾನ್ಯ ಸದಸ್ಯರು ಹೇಳಿದ ಹಾಗೆ ನಾನೆಂದಿಗೂ ಅರ್ಜಿ ಬರೆದುಕೊಟ್ಟು ಜೈಲಿನಿಂದೀಚೆಗೆ ಬರಲಿಲ್ಲ ; ಅಂಥಾ ಪರಿಸ್ಥಿತಿಯೂ ನನಗಿರಲಿಲ್ಲ. ನಿಜಾಂಶಗಳು ಹೀಗಿದ್ದರೂ ಕೂಡ ಆ ಸದಸ್ಯರು ಜನರಲ್ಲೊಂದು ತಪ್ಪು ಭಾವನೆ ಬರುವ ರೀತಿಯಲ್ಲಿ ಮಾತನಾಡಿದ್ದಾರೆ.

7-30 P.M.

ಆಮೇಲೆ ನಾನು ಎಂಥದೋ ಸಂಸ್ಥೆ, ಜಾತೀಯವಾದ ಸಂಸ್ಥೆಯಲ್ಲಿ ಇದ್ದು, ಬ್ರಾಹ್ಮಣರೇ ಎಲ್ಲವನ್ನೂ ಹೊಡೆದುಕೊಳ್ಳುತ್ತಾರೆ ಎಂದು ಹೇಳಿ ಒಂದು ದಿವಸ ಕಾಂಗ್ರೆಸ್ಸಿಗೆ ಧುಮಿಕಿದೆ ಎಂದು ಅವರು ಹೇಳಿದರು. ಶ್ರೀ ವೀರಣ್ಣಗೌಡರು, ನಾನು, 1924ನೇ ಇಸವಿಯಲ್ಲಿ--ಆಗ ಮೈಸೂರಿನಲ್ಲಿ ಕಾಂಗ್ರೆಸ್ ಇರಲಿಲ್ಲ—ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ಗೆ ಸೇರಿ, ಬೆಳಗಾಂ ಕಾಂಗ್ರೆಸ್‌ಗೆ ಹೋಗಿ, ಅಂದಿನಿಂದ ಕಾಂಗ್ರೆಸ್ಸಿಗರು ಎಂದು ಹೇಳಿ ಅನ್ನಿಸಿಕೊಂಡಿದ್ದೇವೆ.

Sri K. KENCHAPPA.—On a point of order, Sir, Organisational matters are altogether different from administrative matters. ಕಾಂಗ್ರೆಸ್ಸಿಗೆ ಸಂಬಂಧಪಟ್ಟ ವಿಚಾರವನ್ನು ಇಲ್ಲಿ ಮಾತನಾಡುತ್ತಾ ಕುಳಿತುಕೊಂಡು ಕಾಲಹರಣಮಾಡುವುದು ಒಳ್ಳೆಯದಲ್ಲ. ಈ ರೀತಿ ಅಸೆಂಬ್ಲಿ ಮೆಂಬರುಗಳು ಕಾಲಕಳೆಯತಕ್ಕದ್ದು ಸರಿಯೇ ಎಂದು ಕೇಳುತ್ತೇನೆ.

ಅಧ್ಯಕ್ಷರು.—ಈ ಪ್ರಶ್ನೆ ಉದ್ಭವವಾಗಿದೆ. ಶ್ರೀ ಪುಟ್ಟರಾಮಯ್ಯನವರು ವೆಂಕಟಪ್ಪನವರಮೇಲೆ ಅನೇಕ ಚಾರ್ಜಸ್ ಮಾಡಿದರು. ಮಾಡಿದಮೇಲೆ ಅದಕ್ಕೆ ಉತ್ತರ ಕೊಡುವ ಒಂದು ಹಕ್ಕು ಅವರಿಗೆ ಇದೆ. ಅದಕ್ಕೋಸ್ಕರ ಉತ್ತರ ಕೊಡುತ್ತಾ ಇದ್ದಾರೆ.

Sri Y. VEERAPPA.—The other day the Hon'ble Minister was present when Sri Puttaramaiya passed these remarks. He cannot take this opportunity to retaliate and waste the valuable time of this House particularly at the time of voting of Demands.

ಶ್ರೀ ವಿ. ವೆಂಕಟಪ್ಪ.—ಬಡ್ಜೆಟ್ ಮೇಲೆ ಉತ್ತರ ಕೊಡುವ ದಿವಸ ನಾನು ಇರಲಿಲ್ಲ. ಇದು ನಮ್ಮ ಸ್ನೇಹಿತರುಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ನಾನು ಕಾರಣಾಂತರದಿಂದ ಆ ದಿನ

ಹೊರಟುಹೋಗಿದ್ದೆ, ನನಗೆ ಆ ದಿನ ಸಮಯ ಉಪ ಯೋಗಿಸಿಕೊಳ್ಳಲಿಕ್ಕೆ ಅವಕಾಶವಾಗಲಿಲ್ಲ.

ಶ್ರೀ ಕೆ. ಕೆಂಚಪ್ಪ.—ಸಂಸ್ಥೆಯ ವಿಚಾರವನ್ನೆಲ್ಲಾ ಹೇಳಿಕೊಂಡು ಹೀಗೆ ಮಾತನಾಡುವುದು ಸರಿಯೇ ಸ್ವಾಮಿ ?

ಅಧ್ಯಕ್ಷರು.—ಅನ್ನಿಸಿಕೊಂಡು ಸುಮ್ಮನೆ ಕೂಡುವವರು ಯಾರು ? ಯಾರು ಅನ್ನಿಸಿಕೊಂಡರೋ ಅವರು ಉತ್ತರ ಕೊಡುತ್ತಾ ಇದ್ದಾರೆ. ಅವರಿಗೆ ಒಂದು ಹಕ್ಕು ಇದೆ. ಆ ಪ್ರಕಾರ ಉತ್ತರ ಕೊಡುತ್ತಾ ಇದ್ದಾರೆ. ಇದು ಕಾಲಹರಣವಾಗುವುದಿಲ್ಲ.

ಶ್ರೀ ಕೆ. ಕೆಂಚಪ್ಪ.—ಇವೊತ್ತಿನ ದಿವಸ ವಿದ್ಯಾಭ್ಯಾಸದ ವಿಚಾರದಲ್ಲಿ ಮಾತನಾಡುವಾಗ ವಿದ್ಯಾಭ್ಯಾಸಕ್ಕೆ ಸಂಬಂಧಪಡದೆ ಇರತಕ್ಕ ವಿಚಾರ ಮಾತನಾಡುವುದು ಸರಿಯಲ್ಲ.

ಅಧ್ಯಕ್ಷರು.—ಅದು point of order ಆಗುವುದಿಲ್ಲ. ಆಗ ಹೇಳದಿದ್ದು ಈಗ ಹೇಳಿದರೂ ತಪ್ಪಾಗುವುದಿಲ್ಲ. ನಾನು ಅದಕ್ಕೆ ಅನುಮತಿ ಕೊಟ್ಟಿದ್ದೇನೆ.

ಶ್ರೀ ವಿ. ವೆಂಕಟಪ್ಪ.—ಕಮ್ಯುನಲ್ ಆರ್ಗನೈಸೇಷನ್ ಇತ್ತು, ಅದಕ್ಕೆ ಅವರು ಮೆಂಬರಾಗಿದ್ದರು, ಇದ್ದಕ್ಕಿದ್ದಹಾಗೆ ಕಾಂಗ್ರೆಸ್ಸಿಗೆ ಸೇರಿದರು ಎಂದು ಹೇಳಿದರು. ಅದು ಸತ್ಯಕ್ಕೆ ದೂರವಾದ ಮಾತು. 'ಪ್ರಜಾಮಿತ್ರ ಮಂಡಲಿ' ಎಂದು ಹೇಳಿ ಹಿಂದುಳಿದ ಜನಾಂಗದ ಹಕ್ಕುಬಾಧ್ಯತೆಗಳನ್ನು ಕಾಪಾಡುವುದಕ್ಕೆ ಒಂದು ಸಂಸ್ಥೆ ಇತ್ತು. ಅದರಲ್ಲಿ ಇತರರು ಯಾರೂ ಇರಬಾರದು ಎಂಬ ನಿಯಮವೇನೂ ಇರಲಿಲ್ಲ. ಆದರೂ ಅದರಲ್ಲಿ ಪ್ರಭಾವಶಾಲಿಗಳಾದಂಥ ಹಿಂದುಳಿದ ಪಂಗಡದ ನಾಯಕರು ಇದ್ದದ್ದರಿಂದ ಅದರಲ್ಲಿ ಸೇರುವುದಕ್ಕೆ ಅನೇಕರು ಮನಸ್ಸು ಮಾಡಲಿಲ್ಲ. ಅದನ್ನು ಕಮ್ಯೂನಲ್ ಆರ್ಗನೈಸೇಷನ್ ಎನ್ನುತ್ತಾರೆ. ಆ ಆರ್ಗನೈಸೇಷನ್ನಿಗೆ ನಾನು ಸೇರಿದವನಲ್ಲ. ನಾನು ಪ್ರಜಾಪ್ರತಿನಿಧಿ ಸಭೆಗೆ ಹೋದಮೇಲೆ ಈ ಒಂದು ಕೆಟ್ಟಹೆಸರು ಇರುವುದನ್ನು ಹೋಗಲಾಡಿಸಬೇಕೆಂದು ಪ್ರಜಾಪಕ್ಷ ಎಂದು ಹೇಳಿ ಒಂದು ಪಕ್ಷವನ್ನು ಸ್ಥಾಪಿಸಿ ಅದರ ಅಧ್ಯಕ್ಷನಾಗಿದ್ದೆ, ಸೆಕ್ರೆಟೆರಿಯೂ ಆಗಿದ್ದೆ. ಆ ಮೇಲೆ ಈ ಪ್ರಜಾಮಿತ್ರ ಮಂಡಲಿ ಎಂದು ಏನು ಒಂದು ಕಮ್ಯೂನಲ್ ಆರ್ಗನೈಸೇಷನ್ ಎಂದು ಹೇಳುತ್ತಾ ಇದ್ದಾರೋ ಅವರೂ ಕೂಡ ದೇಶದ ಪರಿಸ್ಥಿತಿಯನ್ನು ನೋಡಿ, ನಮ್ಮ ಮಾರ್ಗದಲ್ಲೇ ಹೋಗತಕ್ಕದ್ದು ಸರಿ, ದೇಶ ಯಾವರೀತಿ ಬದಲಾವಣೆ ಹೊಂದಿದೆಯೋ ಅದರಲ್ಲಿ ನಾವೂ ಸೇರಬೇಕೆಂದು ಹೇಳಿ ಮನಸ್ಸು ಮಾಡಿದ ಮೇಲೆ ಪ್ರಜಾಸಂಯುಕ್ತ ಸಂಸ್ಥೆ ಎಂದ ಹೇಳಿ, ಯಾರು ಬೇಕಾದರೂ ಅದರಲ್ಲಿ ಸೇರಬಹುದು, ಕಮ್ಯೂನಲ್ ಅಲ್ಲ ಎಂದು ಹೇಳಿ ಆ ಸಂಸ್ಥೆಯನ್ನು ಮಾರ್ಪಾಡು ಮಾಡಿದೆವು. ಶ್ರೀ ಭಾಷ್ಯಂ ಐಯ್ಯಂಗಾರ್ ಅವರು 1937ನೆ ಇಸವಿ ಅಕ್ಟೋಬರು ತಿಂಗಳು 16ನೆ ತಾರೀಖಿನ ದಿವಸ ರಾತ್ರಿ ಬಂಧಿತರಾದರು. ಆವಾಗ ದೇಶದ ಜನರೆಲ್ಲರೂ, ದೇಶದ ನಾಯಕರುಗಳನ್ನು ಈ ರೀತಿ ದಬ್ಬಾಳಿಕೆಯಿಂದ ಸರ್ಕಾರದವರು ಬಂಧನದಲ್ಲಿರಿಸಿ ಅವರಿಗೆ ಕಷ್ಟಗಳನ್ನು ಕೊಡುತ್ತ ಇರುವುದನ್ನು ಹೋಗಲಾಡಿಸಬೇಕಾದರೆ, ಜನರೆಲ್ಲ ಒಂದಾಗಬೇಕು ಎಂದು ಪ್ರಜಾಸಂಯುಕ್ತ ಪಕ್ಷದವರು 17ನೆ ತಾರೀಖಿನ ದಿವಸ ಸಭೆಸೇರಿ ಎಲ್ಲರೂ ಇವೊತ್ತಿನ ದಿವಸ ಕ್ರಾಂಗ್ರೆಸ್ಸಿಗೆ ಸೇರಬೇಕೆಂದು ತೀರ್ಮಾನಮಾಡಿದೆವು. ಆದುದರಿಂದ ಅವರು ನಾನು ಯಾವುದೋ ಒಂದು ಸಂಸ್ಥೆಯಲ್ಲಿಲ್ಲದೆ ಹೊರಗಿದ್ದಹಾಗೆ ಅಭಿಪ್ರಾಯವನ್ನೂ, ಅವರ ಮನಸ್ಸಿಗೆ ಸರಿ ಎಂದು ತೋರಿದಹಾಗೆ ಹೇಳತಕ್ಕದ್ದು ಸರಿಯಲ್ಲ. ಇಷ್ಟೆಲ್ಲ ಆದರೂ, ಮೈಸೂರು ಕಾಂಗ್ರೆಸ್ ಸಂಸ್ಥೆಯ ಸದಸ್ಯರಾಗುವುದಕ್ಕೆ ಮುಂಚೆಯೇ, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಂಸ್ಥೆಯ ಸದಸ್ಯರಾಗಿ, ಶ್ರೀ ವೀರಣ್ಣಗೌಡರೂ ಮತ್ತು ನಾನೂ ಒಂದೇಸಲ ಸೇರಿ, ಈಗಲೂ ಆ ಸಂಸ್ಥೆಯ ಸದಸ್ಯರಾಗಿದ್ದೇವೆ.

ಆಮೇಲೆ, ಬಹಳ ವಿಚಿತ್ರವಾದ ಕೆಲವು ಮಾತುಗಳನ್ನು ಹೇಳಿದ್ದಾರೆ. ನಾನು ಜಿಲ್ಲಾಬೋರ್ಡ್ ಅಧ್ಯಕ್ಷನಾಗಿ ಲೋಕಲ್ ಎಜ್ಯುಕೇಷನ್ ಅಥಾರಿಟಿಯ ಅಧ್ಯಕ್ಷನೂ ಆಗಿದ್ದೆ. ಸ್ಕೂಲ್ ಬೋರ್ಡ್‌ಗಳು ಅಧ್ಯಕ್ಷನ ಅಧೀನದಲ್ಲಿದ್ದವು. ಹೀಗಿರುವಲ್ಲಿ "ಇವರ ಊರಿಗೆ ಒಂದು ಸ್ಕೂಲನ್ನು ಕೊಡಿಸುವುದಕ್ಕೆ ಯೋಗ್ಯತೆ ಇರಲಿಲ್ಲ" ಎಂದು ಹೇಳಿದರು ಮತ್ತು ಅವರು ಸ್ಕೂಲ್ ಬೋರ್ಡ್ ಸದಸ್ಯರಾದಮೇಲೆ ನಮ್ಮ ಊರಿಗೆ ಒಂದು ಸ್ಕೂಲು ಕೊಡಿಸಿದರಂತೆ. ಇದರಲ್ಲಿ ಸತ್ಯವೇನಾದರೂ ಇದೆಯೇ ಎಂದರೆ ಏನೂ ಇಲ್ಲ, ಹರಿಶ್ಚಂದ್ರನ ಅಪರಾವತಾರ. "ಇವರಿಗೆ ಈ ಸಂಬಳ ಏಕೆ ? ಇವರಿಗೆ ಬೇಕಾದಷ್ಟಿದೆ, ಇಷ್ಟಿದ್ದರೂ ಸಹ ಕಾಸು ಕೂಡಿಸಿಕೊಳ್ಳೋಣವೆಂದು ಸಾವಿರ ರೂಪಾಯಿ ತೆಗೆದುಕೊಳ್ಳುತ್ತಾರೆ" ಎಂದು ಹೇಳಿದರು. ಈ ಸಭೆಯವರು ಸಂಬಳ ಪಡೆಯದೆ ಕೆಲಸ ಮಾಡಬೇಕೆಂದು ನಿಯಮ ಮಾಡಿಲ್ಲ. ಸಂಬಳ ಪಡೆಯದೆ ಕೆಲಸ ಮಾಡತಕ್ಕಯೋಗ್ಯತೆ ಇದ್ದರೂಕೂಡ, ಆ ರೀತಿ ಮಾಡಬಾರದು, ಬಡತನ ಸಿರಿತನದ ಮೇಲಲ್ಲ ಈ ಕೆಲಸ ಮಾಡತಕ್ಕದ್ದು. ಸರಿಯಾದ ಉಪವೃತ್ತಿ ಇರತಕ್ಕವರು ಈ ಕೆಲಸವನ್ನು ವಹಿಸಿಕೊಳ್ಳಬೇಕೆಂದು ಗೋಖಲೆಯವರು ಹೇಳುತ್ತಿದ್ದರು. ಆದುದರಿಂದ ಹೇಗಾದರೂ ಮಾಡಿ ಹಣವನ್ನು ಕೂಡಿಹಾಕಿಕೊಳ್ಳಬೇಕೆಂಬ ಮನೋಭಾವ ನನಗಿಲ್ಲ. ನಾನೇನಾದರೂ ನನಗೆ credit ಇದೆ ಎಂದು ಹೇಳಿದರೆ, ಏನೂಇಲ್ಲದೆ ಆರೀತಿ ಹೇಳಿಕೊಂಡಿಲ್ಲ. ಅಲ್ಪ ಸ್ವಲ್ಪ ಹಣ ಬ್ಯಾಂಕಿನಲ್ಲಿ ಇರಬಹುದು. ಜೈಲಿಗೆ ಹೋದುದರಿಂದ ಹಣ ಸಂಪಾದನೆಮಾಡಿ, ಅದರಿಂದ ಒಳ್ಳೆಯ ವ್ಯವಹಾರ ನಡೆಸಬೇಕು ಎಂದು ಅಂದುಕೊಳ್ಳತಕ್ಕವನಲ್ಲ ನಾನು. ಜೈಲಿಗೆ ಹೋಗಿದ್ದೆನಾದುದರಿಂದ ನನಗೆ ಹಕ್ಕುಬಂದಿದೆ ಎಂದು ಯಾವೊತ್ತೂ ಕೇಳಿಕೊಂಡವನಲ್ಲ. ಆದರೆ ನನಗೆ ಸ್ವಲ್ಪ credit ಇಲ್ಲದೆ ಚೆಕ್ ಕೊಡತಕ್ಕ ಪರಿಸ್ಥಿತಿ ನನಗಿಲ್ಲ. ಹಣವೇ ಇಲ್ಲದೆ ಚೆಕ್ ಕೊಟ್ಟು ತೊಂದರೆಗೊಳಗಾಗತಕ್ಕ ಪರಿಸ್ಥಿತಿ ಯನ್ನು ನಾನು ಅನುಭವಿಸಿಲ್ಲ. ಆ ಕೆಲಸ ಮಾಡಿಕೊಡುತ್ತೇನೆ, ಈ ಕೆಲಸ ಮಾಡಿಸಿಕೊಡುತ್ತೇನೆ ಎಂದು ಹೇಳಿ ದುಡ್ಡನ್ನು ಸಂಪಾದನೆ ಮಾಡುವ ಪರಿಸ್ಥಿತಿಯೇನೂ ನನಗಿಲ್ಲ. ಹಾಗಾಗಬಾರದು. ಸಂಬಳ ತೆಗೆದುಕೊಳ್ಳುವುದಿಲ್ಲವೆಂದು ಹೇಳಿಕೊಂಡು ಚಿಕ್ಕ ಪೇಟೆಯಲ್ಲಿ ಅಂಗಡಿಗಳಿಗೆ ಹೋಗಿ, ನಾನು ದೊಡ್ಡ ಮನುಷ್ಯ, ಮಂತ್ರಿಯಾಗಿದ್ದೇನೆ, ಅಥವಾ ಮೆಂಬರಾಗಿದ್ದೇನೆ, ನನಗೆ ಇಂಥಿಂಥ ಸಾಮಾನು ಬೇಕು, ಕಳುಹಿಸಿಕೊಡಿ ಎಂದು ಹೇಳಿ, ದುಡ್ಡು ಕೊಡಬೇಕಾದರೆ ಪುನಃ ಕೋರ್ಟ್ ಕಾಣುವ ಪರಿಸ್ಥಿತಿ ನನಗಿಲ್ಲ.

Sri Y. VEERAPPA.—Sir, it is against the high traditions of this House to speak against another Hon'ble Member.

Mr. SPEAKER.—I cannot understand what is against high traditions.

Sri Y. VEERAPPA.—To defame an Hon'ble Member with reference to a particular issue.

Mr. SPEAKER.—I have not been able to see where the breach is made in high traditions. When certain criticisms

(MR. SPEAKER.)

are made against any Hon'ble Member, he has a right to reply. Of course, I agree that the Hon'ble Minister for Education ought to have replied at that time. But under the circumstances that he has mentioned that he was not present when he was called to reply as he had work outside, I have allowed him to give a reply. I do not understand the particular high traditions which have been breached here. At the same time, I request the Hon'ble Minister for Education to finish his speech as early as possible.

Sri K. KENCHAPPA.—Sir, let him, if he is willing, make a statement. But this is altogether different from the scope of the debate. I have been urging this point from the beginning.

Mr. SPEAKER.—Is it the opinion of the Hon'ble Leader of the Opposition that all this is irrelevant?

Sri K. KENCHAPPA.—It is, in my opinion, irrelevant.

Mr. SPEAKER.—After all when people are fixed against each other, they are likely to think that what is relevant on one side is irrelevant on the other. I do not agree with the Hon'ble Leader of the Opposition, with all due respect to him, for his difference of opinion with me, that all this is irrelevant. The only thing is, the Hon'ble Leader of the Opposition may not like it. I understand their feelings in this respect. But I cannot help it. Under the peculiar circumstances that the Hon'ble Minister for Education was not present here on that day to reply, I have allowed him to reply to the remarks made the other day. Normally, the reply is given at that time. But under specific circumstances, I have allowed him to reply now.

Sri Y. VEERAPPA.—Sir, the information that on that particular day when the remarks were made, the Hon'ble Minister was not present, is not correct. He was present.

Mr. SPEAKER.—I am aware that the Hon'ble Minister for Education was present when the remarks were made. But when there was an opportunity to reply to the remarks, he was not present. He was outside on account of certain important work. He had sent me a note to that effect. I have that note with me stating that he would not be present on that day in this House.

Sri K. KENCHAPPA.—Sir, is it the privilege of that Hon'ble Member of that particular party who has sacrificed that he should become a Minister?

Mr. SPEAKER.—Is that a point of order?

Sri K. KENCHAPPA.—It is a point of order.

Mr. SPEAKER.—Merely because a member has gone to jail, it is not a certificate to be a Minister. But normally, all this is taken into consideration when Ministers are appointed. After all, there are young people like other friends on the Treasury Benches who had no opportunity to go to jail. They should not be deprived of becoming Ministers. But jail going is one of the criterions and it is an important criterion, but not the sole criterion.

Sri H. K. VEERANNA GOWDH (Minister for Public Works).—Did the Hon'ble Minister for Education say that because he went to jail, he was appointed as Minister? On the other hand, he clearly said that he did not claim all these things as privileges to become a Minister. Did he not say that just now?

Sri K. KENCHAPPA.—Suppose one of the Hon'ble Members makes such remarks that an Hon'ble Member who has gone to jail claims the opportunity to become a Minister and so on. Would that entitle him to take the time of the House and make a long reply, meeting all the points raised at that time? Secondly, when he wanted to make a statement, he should have made a statement by provoking a debate for a particular purpose so that we could understand the debate.

Mr. SPEAKER.—Is it a speech?

Sri K. KENCHAPPA.—It is a point of information.

Mr. SPEAKER.—Under the peculiar circumstances, I have allowed him to give a reply. There the mater should end. Normally, a person, who is criticised in this House, has to reply on the first occasion when it arises. The Hon'ble Minster had sent to me a note that he would not be here for some days. Un-

der these circumstances, I have allowed him to reply. So far as other matters are concerned, they are quite irrelevant; because, when a person is criticised he may reply with the permission of the Chair. I cannot understand why, after a certain member of this House is criticised, if he takes an opportunity to reply he should not be tolerated at all.

ಶ್ರೀ ಎಂ. ಲಿಂಗೇಗೌಡ.—ಸ್ಪೀಕರ್ ಅವರು ಪ್ರಶ್ನೆ ಮಾಡುವವರನ್ನ ಹೇಗೆ ಕಂಟ್ರೋಲ್ ಮಾಡುತ್ತಾರೋ, ಹಾಗೆಯೇ ಜವಾಬು ಹೇಳುವವರನ್ನೂ ಕಂಟ್ರೋಲ್ ಮಾಡಬೇಕಲ್ಲವೇ ?

ಅಧ್ಯಕ್ಷರು.—ಕಂಟ್ರೋಲ್ ಮಾಡುತ್ತಿದ್ದೇನೆ.

ಶ್ರೀ ಎಂ. ಲಿಂಗೇಗೌಡ.—ಶ್ರೀ ಪುಟ್ಟರಾಮಯ್ಯನವರು ಮಾತನಾಡುವಾಗ ತಾವು ಕಂಟ್ರೋಲ್ ಮಾಡುತ್ತಿದ್ದಿರಿ.

ಅಧ್ಯಕ್ಷರು.—ಶ್ರೀ ಪುಟ್ಟರಾಮಯ್ಯನವರು ಮಾನಾಡುವಾಗ ಶ್ರೀ ವೆಂಕಟಪ್ಪನವರ ವಿಚಾರ ಹೇಳಿದರು. ಈಗ ಶ್ರೀ ಪೆಂಕಟಪ್ಪನವರು ಉತ್ತರ ಕೊಡುತ್ತಿದ್ದಾರೆ. ಅದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ಅದೇ ದಿವಸ ಉತ್ತರ ಕೊಟ್ಟಿದ್ದರೆ ಚೆನ್ನಾಗಿತ್ತು, ಆದರೆ ಅವರು ಅದಕ್ಕೆ ಮರುದಿವಸ ಉತ್ತರ ಕೊಡುತ್ತೇನೆಂದು ನನಗೆ ಒಂದು ಚೀಟಿಯನ್ನು ಬರೆದು ಕಳುಹಿಸಿದ್ದರು. ನಾನು ಅದಕ್ಕೆ ಆಗಬಹುದು ಎಂದು ಒಪ್ಪಿಕೊಂಡೆ.

ಶ್ರೀ ಪಿ. ವೆಂಕಟಪ್ಪ.—ಸ್ವಾಮಿ, ನನಗೆ ಬಹ ಕಾಲ ತೆಗೆದುಕೊಳ್ಳಬೇಕು ಎಂದು ಆಶೆ ಇಲ್ಲ. ಅವರು ಒಂದು ಮಾತನ್ನು ಹೇಳಿದರು. ಅವರ ಊರಿನಲ್ಲಿ ಒಂದು ಸ್ಕೂಲನ್ನು ಕೊಡಿಸಲಾರದೆ ಇದ್ದವರು ವಿದ್ಯಾಭ್ಯಾಸ ಮುಂದುವರಿಯಲು ಏನು ಮಾಡಿಯಾರು ಎಂದು. ನಾನು ವಿದ್ಯಾರ್ಥಿಗಳಿಗಾಗಿ ಏನು ಮಾಡಿದ್ದೇನೆ ಎಂಬುದನ್ನು ಪುನಃ ಹೇಳಿ ಆತ್ಮಸ್ತುತಿ ಮಾಡಿಕೊಳ್ಳುವುದು ಅನಾವಶ್ಯಕ. ಇಲ್ಲಿ ಶ್ರೀ ಲಿಂಗೇಗೌಡರು ಅವರ ಸ್ನೇಹಿತರು ಇದ್ದಾರೆ. ಅನೇಕ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳನ್ನು ಕಲ್ಪಿಸಿಕೊಡುವುದರ ಮೂಲಕ ಸಹಾಯವನ್ನು ಮಾಡುತ್ತಿದ್ದೇನೆ. ಅವರಿಗೋಸ್ಕರ ಒಂದು ಹಾಸ್ಟಲನ್ನೂ ಸ್ಥಾಪಿಸಿ 25 ವರ್ಷಗಳ ಕಾಲ ನಡೆಸಿದ್ದೇನೆ. ಅನೇಕ ಜನ ಬಡ ವಿದ್ಯಾರ್ಥಿಗಳನ್ನು ಮನೆಯಲ್ಲಿಯೇ ಇಟ್ಟುಕೊಂಡು ಅವರಿಗೆ ಊಟಹಾಕಿ, ಬಟ್ಟೆಕೊಟ್ಟು ಅವರಿಗೆ ವಿದ್ಯಾವ್ಯಾಸಂಗ ಮಾಡಲು ತಕ್ಕ ಅನುಕೂಲಗಳನ್ನು ಕಲ್ಪಿಸಿಕೊಟ್ಟಿದ್ದೇನೆ. ಯಾರಿಗೂ ಅನ್ಯಾಯಮಾಡಲಿಲ್ಲ. ಆತ್ಮ ಸ್ತುತಿಯನ್ನು ಮಾಡಿಕೊಳ್ಳಬಾರದು. ಇಲ್ಲಿ ಹೇಳದೆಹೋದರೆ ವಿಧಿ ಇಲ್ಲ. ಇನ್ನೊಂದು ವಿಷಯವನ್ನು ಹೇಳಿದರು, ಕಾಂಗ್ರೆಸ್ ಪಕ್ಷದಲ್ಲಿ ನನಗಿಂತಲೂ ಉತ್ತಮರಾದವರು ಇರಲಿಲ್ಲವೇ, ನನ್ನನ್ನು ಮಂತ್ರಿಗಳನ್ನಾಗಿ ಏಕೆ ಮಾಡಿದ್ದಾರೆ, ಬೇರೆಯವರನ್ನು ಏಕೆ ಮಾಡಲಿಲ್ಲ, ನಾನು ಛಾಲೆಂಜ್ ಮಾಡುತ್ತೇನೆಂದು ಸವಾಲು ಹಾಕಿದರು. ನಮ್ಮ ಕಾಂಗ್ರೆಸ್ ಪಕ್ಷದವರ ಆ ಸವಾಲನ್ನು ಅಂಗೀಕರಿಸಿ ಉತ್ತರಕೊಟ್ಟರೋ ಏನೋ ಎನ್ನುವಹಾಗೆ ಈಗ ನನ್ನನ್ನು ಅವರ ಪಾರ್ಟಿಯ ಉಪನಾಯಕನನ್ನಾಗಿ ನೇಮಿಸಿ ಉಪಕಾರ ಮಾಡಿದ್ದಾರೆ. ಅವರು ನನ್ನಲ್ಲಿಟ್ಟಿರುವ ವಿಶ್ವಾಸಕ್ಕೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತಾ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—Before I put the Demand to the House, I would like to add a few words.

All this happened on account of certain personal remarks made against certain other member of the House. It always happens so. When a person is attacked and when he retorts in return, the last thing that can be done is that it should be taken sportingly. That is what it should be. But if Hon'ble Members cannot take it that way the only thing that they should do is to avoid making personal remarks against others. Personal remarks always land us in trouble. That is why I request all the members of the House once and for all that they should refrain from making personal remarks even against persons who are members of this House. That is the golden rule. But, in some cases if they are called upon to make certain remarks against Hon'ble Members of this House, they should so sportingly receive the reply that it will be in keeping with the decency and decorum of this House.

I now put the Demand to the House. The question is :

> "That a sum not exceeding Rs. 10,55,11,900 be granted to the Government to defray the charges which will come in course of payment during the year ending 31st day of March 1958 in respect of 'Education.'"

The motion was adopted.

Mr. SPEAKER.—Before we rise I would like to say one thing. Tomorrow there will be no question hour because I am not placing any question list on the Table of the House. That time can be utilised by the members in discussing the Demand which will come before the House. Tomorrow I will not be here. I have requested the Deputy Speaker to take the Chair.

There is also another point that may be considered. It is, if the hon'ble members want more time to discuss the Demand they may also cancel the recess and make use of it. I have no objection to that. I have requested one of the Chairmen of the Panel to be present

(MR. SPEAKER.)

here to relieve the Deputy Speaker whenever he wants a recess.

I hope members will try to be as much careful as possible whenever they make criticisms of individual members in this House. It has really hurt me because it is a double-edged sword which not only cuts your enemy but cuts you also. I request the Hon'ble Members to raise the level of the debate high enough.

The House will now adjourn and meet tomorrow at 1 P.M.

The House adjourned at Fifty-eight Minutes past Seven of the Clock to meet again at One of the Clock on Wednesday, the 24th July 1957.

WD 3791—GPB—900—23-12-57.